ಮೈಸೂರು ಮಿತ್ರ

₹4

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೇ 5 ಶುಕ್ರವಾರ 2023

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 44 | ಸಂಚಿಕೆ: 19 | ಪುಟಗಳು: 12

ಸುದ್ದಿ ಮತ್ತು ಫೋಟೋಗೆ: news@mysurumithra.com

ಜಾಹೀರಾತು: ad@mysurumithra.com

ಸಮುದಾಯಗಳ ಪ್ರಗತಿಗೆ ಆದ್ಯತೆ: ಶ್ರೀವತ್ಸ



ಮೈಸೂರು, ಮೇ 4- 'ಸಬ್‌ಕಾ ಸಾಥ್, ಸಬ್‌ಕಾ ವಿಕಾಸ್' ಎಂಬ ಧ್ಯೇಯ ವಾಕ್ಯದೊಂದಿಗೆ ದೇಶದಲ್ಲಿಯ ಎಲ್ಲಾ ಸಮಾಜದವರ ಸಮಗ್ರ ಪ್ರಗತಿ ಬಿಜೆಪಿಯ ಮೂಲ ಗುರಿಯಾಗಿದೆ ಎಂದು ಕೃಷ್ಣರಾಜ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಟಿ.ಎಸ್. ಶ್ರೀವತ್ಸ ಹೇಳಿದರು.

ಅಶೋಕಪುರಂನಲ್ಲಿ ಚುನಾವಣಾ ಪ್ರಚಾರ ನಡೆಸಿ ಮಾತನಾಡಿದ ಅವರು, ಕೇಂದ್ರದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದಾಗಿನಿಂದ ಇದುವರೆಗೂ ಗ್ರಾಮೀಣ ಭಾಗದ ನಾಗರಿಕರ ಜೀವನ ಮಟ್ಟ ಸುಧಾರಣೆ ಮಾಡುವತ್ತ ವಿನೂತನ ಯೋಜನೆಗಳು ರೂಪಿಸಿಕೊಂಡು ಬರುತ್ತಿದೆ ಎಂದು ತಿಳಿಸಿದರು.

ಚುನಾವಣೆ ಪ್ರಚಾರಕ್ಕೂ ಮುನ್ನ ಬಾಬಾ ಸಾಹೇಬ್ ಬಿ.ಆರ್.ಅಂಬೇಡ್ಕರ್‌ರವರ ಪ್ರತಿಮೆಗೆ ಮಾಲಾರ್ಪಣೆ ಮಾಡಿದರು. ನಗಾರಿ ಬಾರಿಸುವ ಮುಖಾಂತರ ಪಾದಯಾತ್ರೆ ಮೂಲಕ ಮತದಾರರ ಮನೆಗಳಿಗೆ ಭೇಟಿ ನೀಡಿ ಮತಯಾಚಿಸಿದರು. ಅಶೋಕಪುರಂನ ನಾಗರಿಕರು ಮೆರವಣಿಗೆ ಮೂಲಕ ಶ್ರೀವತ್ಸ ಅವರನ್ನು ಸ್ವಾಗತಿಸಿದರು. ಈ ಸಂದರ್ಭದಲ್ಲಿ ಮೈಸೂರು ನಗರ ಪ್ರಧಾನ ಕಾರ್ಯದರ್ಶಿ ಸೋಮಸುಂದರ್, ನಗರಪಾಲಿಕೆ ಸದಸ್ಯರಾದ ಪಿ.ಟಿ.ಕೃಷ್ಣ, ಸಿ.ಈಶ್ವರ್, ಮುಡಾ ಮಾಜಿ ಸದಸ್ಯ ವಿಶ್ವ, ಮಾಜಿ ಉಪ ಮೇಯರ್ ಶೈಲೇಂದ್ರ ಎಸ್‌ಸಿ ಮೋರ್ಚಾ ನಗರ ಉಪಾಧ್ಯಕ್ಷರಾದ ನಾಗರಾಜ್ ಬೆಲ್ಲಯ್ಯ, ಸತ್ಯ ಪ್ರಕಾಶ್, ಬಿಜೆಪಿ ರಾಜ್ಯ ಯುವ ಮೋರ್ಚಾ ಉಪಾಧ್ಯಕ್ಷ ಧೀರಜ್ ಪ್ರಸಾದ್, ಮಿರ್ಲೆ ಶ್ರೀನಿವಾಸ್‌ಗೌಡ ಸೇರಿದಂತೆ ಇನ್ನಿತರರು ಭಾಗವಹಿಸಿದ್ದರು.



ಮೈಸೂರಿನ ಚಾಮರಾಜ ಕ್ಷೇತ್ರದ ಮಂಡಿ ಮೊಹಲ್ಲಾದಲ್ಲಿ ಬಿಜೆಪಿ ಅಭ್ಯರ್ಥಿ ಶಾಸಕ ಎಲ್.ನಾಗೇಂದ್ರ ಮನೆ ಮನೆಗೆ ತೆರಳಿ ಮತಯಾಚಿಸಿದರು. ಈ ವೇಳೆ ವಾರ್ಡ್ ಅಧ್ಯಕ್ಷ ವಿಜಿ, ಜೀವಧಾರ ಗಿರೀಶ್, ಹೇಮಾ, ಕೇಬಲ್ ರಾಜಣ್ಣ, ಬಾಲಾಜಿ, ಸೂರಿ, ಗಣೇಶ್, ಕೇಶವ್, ಸೂರಜ್, ವಿಜಿ, ಕಿರಣ್, ರಾಜೇಶ್, ಚೇತನ್ ಇನ್ನಿತರರು ಉಪಸ್ಥಿತರಿದ್ದರು.



ಚಾಮುಂಡೇಶ್ವರಿ ಕ್ಷೇತ್ರದ ಹಿನಕಲ್ ಹಾಗೂ ವಿಜಯನಗರ 3ನೇ ಹಂತದಲ್ಲಿ ಜಿಪಂ ಮಾಜಿ ಸದಸ್ಯ ರಾಕೇಶ್ ಪಾಪಣ್ಣ ನೇತೃತ್ವದಲ್ಲಿ ಮನೆ ಮನೆಗೆ ತೆರಳಿ ಕಾಂಗ್ರೆಸ್ ಅಭ್ಯರ್ಥಿ ಮಾವಿನಹಳ್ಳಿ ಸಿದ್ದೇಗೌಡ ಪರವಾಗಿ ಮತಯಾಚನೆ ಮಾಡಲಾಯಿತು. ಚಿತ್ರದಲ್ಲಿ ಗ್ರಾಪಂ ಮಾಜಿ ಸದಸ್ಯರು, ಯುವ ಮುಖಂಡರು, ಮಹಿಳೆಯರು ಹಾಗೂ ಯಜಮಾಜನರು ಹಾಜರಿದ್ದರು.



ಮೈಸೂರಿನ ವಾರ್ಡ್ ನಂ.22ರಲ್ಲಿ ಚಾಮರಾಜ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಹೆಚ್.ಕೆ.ರಮೇಶ್ ಪಾದಯಾತ್ರೆ ಮೂಲಕ ಮನೆ ಮನೆಗೆ ತೆರಳಿ ಮತಯಾಚನೆ ಮಾಡಿದರು. ನಗರಾಧ್ಯಕ್ಷ ಕೆ.ಟಿ.ಚೆಲುವೇಗೌಡ, ಮಹಿಳಾ ಮುಖಂಡರು ಇದ್ದರು.

ಬಿಜೆಪಿ ಇಳಿಸಿ, ಕಾಂಗ್ರೆಸ್ ಬೆಂಬಲಿಸಿ

ಮಾಜಿ ಅಡ್ವೊಕೇಟ್ ಜನರಲ್ ಪ್ರೊ.ರವಿವರ್ಮಕುಮಾರ್ ಮನವಿ

ಮೈಸೂರು,ಮೇ 4(ಪಿಎಂ)- ಪ್ರಜಾಪ್ರಭುತ್ವ ಉಳಿಸಲು ಬಿಜೆಪಿ ಕಿತ್ತೊಗೆದು ಕಾಂಗ್ರೆಸ್‌ಗೆ ಬೆಂಬಲ ನೀಡಬೇಕಿದೆ. ಈ ನಿಟ್ಟಿನಲ್ಲಿ ರಾಜ್ಯದ ಜನತೆ ಈ ಚುನಾವಣೆಯಲ್ಲಿ ಕಾಂಗ್ರೆಸ್ ಬೆಂಬಲಿಸಬೇಕೆಂದು ಹಿರಿಯ ವಕೀಲರೂ ಆದ ಮಾಜಿ ಅಡ್ವೊಕೇಟ್ ಜನರಲ್ ಪ್ರೊ.ರವಿವರ್ಮ ಕುಮಾರ್ ಮನವಿ ಮಾಡಿದರು.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ನಾವು ಯಾವುದೇ ಪಕ್ಷಕ್ಕೆ ಸೇರಿದವರಲ್ಲ. ಆದರೆ ಸಂವಿಧಾನಕ್ಕೆ ತೊಂದರೆ ಎದುರಾದಾಗ, ಅನ್ಯಾಯ ತಾಂಡವವಾಡಿದಾಗ ಅದರ ವಿರುದ್ಧ ಪ್ರತಿಭಟನೆ ನಡೆಸಿದ್ದೇವೆ. ಇಂದಿರಾ ಗಾಂಧಿಯವರ ತುರ್ತು ಪರಿಸ್ಥಿತಿ ವಿರುದ್ಧವೂ ವಿದ್ಯಾರ್ಥಿಗಳಾಗಿದ್ದಾಗ ಪ್ರತಿಭಟಿಸಿ ಜೈಲಿಗೂ ಹೋಗಿದ್ದವರು ಇಲ್ಲಿದ್ದೇವೆ. ಪ್ರಸ್ತುತ ಪ್ರಜಾಪ್ರಭುತ್ವದ ಉಳಿವಿಗೆ ಈ ಚುನಾವಣೆಯಲ್ಲಿ ಬಿಜೆಪಿ ಸೋಲಿಸಿ, ಕಾಂಗ್ರೆಸ್ ಗೆಲ್ಲಿಸಬೇಕಿದ್ದು, ಈ ನಿಟ್ಟಿನಲ್ಲಿ ನಾವು ಜನಜಾಗೃತಿಗೆ ಮುಂದಾಗಿದ್ದೇವೆ ಎಂದು ತಿಳಿಸಿದರು.

2ಜಿ ಸ್ಪೆಕ್ಟ್ರಂ ಹಗರಣ ಸಂಬಂಧ ಅಂದು ಮನಮೋಹನ್ ಸಿಂಗ್‌ರನ್ನು ನರೇಂದ್ರ ಮೋದಿಯವರು ಮೌನಿ ಬಾಬಾ ಎಂದು ಟೀಕಿಸುತ್ತಿದ್ದರು. ಆದರೆ ಇಂದು ಅದಾನಿಗೆ ಸಂಬಂಧಿಸಿದ ಹಗರಣದಲ್ಲಿ ಪ್ರಧಾನಿ ಮೋದಿ, ಕೇಂದ್ರ ಗೃಹ ಸಚಿವ ಅಮಿತ್‌ಶಾ ಮೌನಕ್ಕೆ ಶರಣಾಗಿದ್ದಾರೆ. ಸಿಎಂ ಬಸವರಾಜ ಬೊಮ್ಮಾಯಿ 40 ಪರ್ಸೆಂಟ್ ಆರೋಪಕ್ಕೆ ಸಾಕ್ಷ್ಯ ಕೇಳುತ್ತಾರೆ. ತನಿಖೆಗಾಗಿ ಲೋಕಾಯುಕ್ತಕ್ಕೂ ಶಿಫಾರಸ್ಸು ಮಾಡಲಿಲ್ಲ. ಇವರಿಗೆ ಪುರಾವೆ ನೀಡಲು ಲಂಚವನ್ನು ಯಾರಾದರೂ ಚೆಕ್ ಕೊಟ್ಟು ತೆಗೆದುಕೊಳ್ಳುತ್ತಾರೆಯೇ? ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕಳೆದ 4 ವರ್ಷಗಳಲ್ಲಿ ರಾಜ್ಯ ಬಿಜೆಪಿ ಸರ್ಕಾರದ ಸಾಧನೆ ಶೂನ್ಯ. ಇದನ್ನು ಮುಚ್ಚಿಕೊಳ್ಳಲು ಜಾತಿ, ಧರ್ಮ, ಶ್ರೀರಾಮ ಎಂಬಿತ್ಯಾದಿಗಳನ್ನು ಮುನ್ನೆಲೆಗೆ ತರುತ್ತಿದ್ದಾರೆ. ಅಲ್ಲದೆ, ಸಿದ್ದರಾಮಯ್ಯ ಮೇಲೆ ಮುಗಿಬೀಳುತ್ತಿದ್ದಾರೆ. ಜೊತೆಗೆ ಭಜರಂಗ ದಳ ನಿಷೇಧ ಪ್ರಸ್ತಾಪದ ವಿಚಾರದಲ್ಲಿ ಕಾಂಗ್ರೆಸ್ ಮೇಲೆಯೂ ಮುಗಿಬೀಳುತ್ತಿದ್ದಾರೆ. ಇದೊಂದು ದುಷ್ಟ ಮತ್ತು ಭ್ರಷ್ಟ ಸರ್ಕಾರ ಎಂದು ದೂರಿದರು.

ಜಗದೀಶ್ ಶೆಟ್ಟರ್ ರಾಜ್ಯ ಕಂಡ ಅಪರೂಪದ ಮುಖ್ಯಮಂತ್ರಿ. ದಕ್ಷತೆಯಿಂದ ಆಡಳಿತ ನಡೆಸಲು ಸಾಧ್ಯವಾಗಿಲ್ಲವಾದರೂ ಭ್ರಷ್ಟಾಚಾರರಹಿತ ಆಡಳಿತ ನೀಡಿದರು. ಒಬ್ಬ ಗ್ರಾಪಂ ಚುನಾವಣೆ ಗೆಲ್ಲಲಾಗದವರು ಈ ಚುನಾವಣೆಯಲ್ಲಿ ಬಿಜೆಪಿ ಟಿಕೆಟ್ ನೀಡುವ ಬಗ್ಗೆ ತೀರ್ಮಾನ ಕೈಗೊಂಡಿದ್ದಾರೆ ಎಂದು ಜಗದೀಶ್ ಶೆಟ್ಟರ್ ನೇರವಾಗಿ ಬಿ.ಎಲ್.ಸಂತೋಷ್ ಹೆಸರು ಹೇಳಿದ್ದಾರೆ. ಅಂದರೆ ನಮ್ಮ ದೇಶ ಮತ್ತು ರಾಜ್ಯದಲ್ಲಿ ಪ್ರಜಾಪ್ರಭುತ್ವ ಇಲ್ಲವಾಗಿದ್ದು, ಆರ್‌ಎಸ್‌ಎಸ್ ಆಡಳಿತ ನಡೆಸುತ್ತಿದೆ ಎಂದು ಕಿಡಿಕಾರಿದರು.

ಜೆಡಿಎಸ್ ಪಕ್ಷವು ಬಿಜೆಪಿ ಏಜೆಂಟ್: ಬಿಜೆಪಿ ಪದಾಧಿಕಾರಿಯಾಗಿದ್ದವರು ಈಗ ವರುಣ ಕ್ಷೇತ್ರದಲ್ಲಿ ಜೆಡಿಎಸ್ ಅಭ್ಯರ್ಥಿಯಾಗಿದ್ದಾರೆ. ಅಂದರೆ ಇಲ್ಲಿ ಸಿದ್ದರಾಮಯ್ಯರನ್ನು ಸೋಲಿಸುವುದು ಇವರ ಉದ್ದೇಶ. ಹೀಗಾಗಿ ಜೆಡಿಎಸ್ ಪಕ್ಷವು ಬಿಜೆಪಿ ಏಜೆಂಟ್ ಆಗಿದೆ. ಪ್ರಜಾಪ್ರಭುತ್ವ ಉಳಿಸುವ ನಿಟ್ಟಿನಲ್ಲಿ ಬಿಜೆಪಿ ಮತ್ತು ಜೆಡಿಎಸ್ ಎರಡನ್ನೂ ಈ ಚುನಾವಣೆಯಲ್ಲಿ ಹೊರ ಹಾಕಬೇಕಿದೆ ಎಂದರು.

ಬಿಜೆಪಿಯವರ ಸುಳ್ಳಿನ ಕಂತೆ: ಮೀಸಲಾತಿ ಹೆಚ್ಚಳ-ಹಂಚಿಕೆ ಎಂಬುದು ರಾಜ್ಯ ಬಿಜೆಪಿ ಸರ್ಕಾರದ ಸುಳ್ಳಿನ ಕಂತೆ. ಎಲ್ಲಾ ಸಮುದಾಯಗಳಿಗೆ ಇವರು ದ್ರೋಹ ಮಾಡುತ್ತಿದ್ದಾರೆ. ವೀರಶೈವರಿಗೆ ಶೇ.2ರಷ್ಟು ಕೊಟ್ಟಿದ್ದೇವೆ ಎಂದು ಹೇಳುವ ಇವರು ನಿಜಕ್ಕೂ ಈ ಸಮುದಾಯದ ಮೇಲೆ ಪ್ರೀತಿ ಇದ್ದರೆ ಅವರ ಜನಸಂಖ್ಯೆ ಶೇ.16ರಷ್ಟು ಇದ್ದು, ಅದರಂತೆ ಶೇ.16ರಷ್ಟು ಮೀಸಲಾತಿ ನೀಡಬೇಕಿತ್ತು. ಅಂತೆಯೇ ಒಕ್ಕಲಿಗ ಸಮುದಾಯದ ಮೇಲೆ ನಿಜಕ್ಕೂ ಪ್ರೀತಿ ಇದ್ದರೆ ಶೇ.13ರಷ್ಟು ಮೀಸಲಾತಿ ಕೊಡಬೇಕಾಗಿತ್ತು? ಎಂದು ಪ್ರಶ್ನಿಸಿದರು.

ಇದು ಮಂಕುಬೂದಿ ಎರಚಿ ಸಮುದಾಯಗಳ ಓಟು ಪಡೆಯಲು ಮಾಡಿರುವ ಕುತಂತ್ರ. ಆದೇಶ ಮಾಡಿದ್ದರೂ ಜಾರಿಗೊಳಿಸಿಲ್ಲ ಎಂದು ಸುಪ್ರಿಂ ಕೋರ್ಟ್‌ನಲ್ಲಿ ಹೇಳಿ, ಇತ್ತ ಚುನಾವಣಾ ಜಾಹೀರಾತುಗಳಲ್ಲಿ ಮೀಸಲಾತಿ ಹೆಚ್ಚಳ ಮಾಡಿದ್ದೇವೆ ಎಂದು ಉಲ್ಲೇಖಿಸಿ ಪ್ರಚಾರ ಮಾಡುತ್ತಿದ್ದಾರೆ. ಕೇವಲ ಶೇ.3ರಷ್ಟು ಜನಸಂಖ್ಯೆ ಹೊಂದಿರುವ ಬ್ರಾಹ್ಮಣ ಮತ್ತು ಮೇಲ್ವರ್ಗಕ್ಕೆ ಶೇ.10ರಷ್ಟು ಮೀಸಲಾತಿ ಕೊಟ್ಟಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಪರಿಶಿಷ್ಟ ಜಾತಿಗೆ ಮೀಸಲಾತಿ ಹೆಚ್ಚಿಸಿ, ಒಳಮೀಸಲಾತಿ ನೀಡಿದ್ದೇವೆ ಎಂದು ಪ್ರಚಾರ ಮಾಡುತ್ತಿದ್ದಾರೆ. ಆದರೆ ಕೇಂದ್ರಕ್ಕೆ ಯಾವುದೇ ಶಿಫಾರಸ್ಸು ಕಳುಹಿಸಿಲ್ಲ. ರಾಜಪಾಲರ ಕಚೇರಿಗೂ ಶಿಫಾರಸ್ಸು ಹೋಗಿಲ್ಲ ಎಂದರು. ಮೈಸೂರು ವಿವಿ ನಿವೃತ್ತ ಉದ್ಯೋಗಿಗಳ ಸಂಘದ ಅಧ್ಯಕ್ಷ ಡಾ.ಕೆ.ಮಹದೇವ್, ನಿವೃತ್ತ ಐಜಿಪಿ ಕೆ.ಅರಕೇಶ್, ಮಾಜಿ ಎಂಎಲ್‌ಸಿ ವೈ.ಮಹೇಶ್ ಸುದ್ದಿಗೋಷ್ಠಿಯಲ್ಲಿದ್ದರು.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾಜಿ ಅಡ್ವೊಕೇಟ್ ಜನರಲ್ ಪ್ರೊ.ರವಿವರ್ಮಕುಮಾರ್ ಮಾತನಾಡಿದರು. ಮೈಸೂರು ವಿವಿ ನಿವೃತ್ತ ಉದ್ಯೋಗಿಗಳ ಸಂಘದ ಅಧ್ಯಕ್ಷ ಡಾ.ಕೆ.ಮಹದೇವ್, ನಿವೃತ್ತ ಐಜಿಪಿ ಕೆ.ಅರಕೇಶ್, ಮಾಜಿ ಎಂಎಲ್‌ಸಿ ವೈ.ಮಹೇಶ್ ಅವರನ್ನು ಚಿತ್ರದಲ್ಲಿ ಕಾಣಬಹುದು.

ಕುತಂತ್ರ ಅರಿತು ಸಿದ್ದರಾಮಯ್ಯ ಬೆಂಬಲಿಸಿ

ರಾಜ್ಯ ಒಕ್ಕಲಿಗರ ಸಂಘದ ಮಾಜಿ ಪ್ರಧಾನ ಕಾರ್ಯದರ್ಶಿ ಮತ್ತು ಮೈಸೂರು ವಿವಿ ನಿವೃತ್ತ ಉದ್ಯೋಗಿಗಳ ಸಂಘದ ಅಧ್ಯಕ್ಷ ಡಾ.ಕೆ. ಮಹದೇವ್ ಮಾತನಾಡಿ, ವರುಣ ಕ್ಷೇತ್ರದಲ್ಲಿ ಸಿದ್ದರಾಮಯ್ಯರನ್ನು ಸೋಲಿಸಲು ಕುತಂತ್ರ ನಡೆಸಲಾಗುತ್ತಿದೆ ಎಂದು ದೂರಿದರು. ಮೊನ್ನೆಯವರೆಗೆ ಬಿಜೆಪಿಯಲ್ಲಿದ್ದ ಡಾ.ಭಾರತಿಶಂಕರ್ ಇದೀಗ ವರುಣ ವಿಧಾನಸಭಾ ಕ್ಷೇತ್ರದಲ್ಲಿ ಜೆಡಿಎಸ್ ಅಭ್ಯರ್ಥಿಯಾಗಿದ್ದಾರೆ. ದಲಿತ ಸಮುದಾಯದ ಇವರನ್ನು ಕಣಕ್ಕಿಳಿಸಿ ಓಟು ವಿಭಜಿಸುವ ಕುತಂತ್ರ ನಡೆಸಲಾಗಿದೆ. ಅದೇ ರೀತಿಯಲ್ಲಿ ಬಿಎಸ್‌ಪಿ ರಾಜ್ಯಾಧ್ಯಕ್ಷ ಡಾ.ಎಂ.ಕೃಷ್ಣಮೂರ್ತಿ ಸಹ ಇಲ್ಲಿ ಸ್ಪರ್ಧಿಸಿದ್ದು, ಇಂತಹ ಕುತಂತ್ರ ಅರಿತು ಕ್ಷೇತ್ರದ ಮತದಾರರು ಸಿದ್ದರಾಮಯ್ಯ ಬೆಂಬಲಿಸಬೇಕೆಂದು ಮನವಿ ಮಾಡಿದರು. ನಾನು ರಾಜ್ಯ ಒಕ್ಕಲಿಗರ ಸಂಘದ ಯಾವುದೇ ಅಧಿಕಾರದಲ್ಲಿ ಇಲ್ಲ. ಹಾಗಾಗಿ ನಾನು ಸ್ವತಂತ್ರ. ಆದ್ದರಿಂದ ನಾನೊಬ್ಬ ಮೈಸೂರು ವಿವಿ ನಿವೃತ್ತ ಉದ್ಯೋಗಿಗಳ ಸಂಘದ ಅಧ್ಯಕ್ಷನಾಗಿ ಸಂಘದಲ್ಲಿರುವ ಎರಡು ಸಾವಿರ ಸದಸ್ಯರ ಸಭೆ ಕರೆದು, ಒಪ್ಪಿಗೆ ಪಡೆದು ಕಾಂಗ್ರೆಸ್ ಬೆಂಬಲಿಸಲು ನಿರ್ಧರಿಸಿದ್ದೇವೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ನಾಳೆಯಿಂದ ಶಿಬಿರ

ಮೈಸೂರು,ಮೇ4-ಜಗದ್ಗುರು ಶ್ರೀ ವೀರ ಸಿಂಹಾಸನ ಮಹಾ ಸಂಸ್ಥಾನ ಮಠ, ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ ಹಾಗೂ ಜೆಎಸ್‌ಎಸ್ ಮಹಾ ವಿದ್ಯಾಪೀಠ ಸಂಯುಕ್ತಾಶ್ರಯದಲ್ಲಿ ಮೇ 6ರಿಂದ 8ರವರೆಗೆ ಶ್ರೀ ಸುತ್ತೂರು ಕ್ಷೇತ್ರದಲ್ಲಿ ತಾಂತ್ರಿಕ ವಿದ್ಯಾರ್ಥಿಗಳ ಶಿಬಿರವನ್ನು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯದಲ್ಲಿ ಆಯೋಜಿಸಲಾಗಿದೆ.



ಚಾಮುಂಡೇಶ್ವರಿ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಕವೀಶ್ ಗೌಡ ಅವರು ಧನಗಳ್ಳಿ ಗ್ರಾಮದಲ್ಲಿ ಮತ ಯಾಚನೆ ಮಾಡಿದರು. ಈ ವೇಳೆ ಗ್ರಾಮಸ್ಥರು ಬೃಹತ್ ಹಾರ ಹಾಕಿ ಆತ್ಮೀಯವಾಗಿ ಅಭಿನಂದಿಸಿದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

5.5.2023 ಶುಕ್ರವಾರ, ಮಳೆ ನಕ್ಷತ್ರ: ಭರಣಿ, 28.04.2023ರಿಂದ 10.05.2023 ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಶುಕ್ಲ ಪಕ್ಷ, ತಿಥಿ: ಹುಣ್ಣಿಮೆ, ನಕ್ಷತ್ರ: ಸ್ವಾತಿ, ರಾಹುಕಾಲ: ಬೆಳಗ್ಗೆ 10.30ರಿಂದ 12ರವರೆಗೆ

■ **ಕರ್ನಾಟಕ ವ್ಯಂಗ್ಯಚಿತ್ರಕಾರರ ಸಂಘ, ಬೆಂಗಳೂರು:** ವಿಶ್ವ ವ್ಯಂಗ್ಯ ಚಿತ್ರಕಾರರ ದಿನಾಚರಣೆ ಅಂಗವಾಗಿ ಖ್ಯಾತ ವ್ಯಂಗ್ಯಚಿತ್ರಕಾರ ಹಾಗೂ ಫುಲ್‌ಬ್ರೈಟರ್ ಎಂ.ವಿ. ನಾಗೇಂದ್ರಬಾಬು (ಬ್ಯಾಂಟರ್‌ಬಾಬು) ಅವರ 'ನಿಮ್ಮ ಮತ... ನಿಮ್ಮ ಭವಿಷ್ಯ'.ವ್ಯಂಗ್ಯಚಿತ್ರಗಳ ಪ್ರದರ್ಶನ, ಉದ್ಘಾಟನೆ : ಹಿರಿಯ ಕಲಾವಿದ ಎನ್.ಬಿ. ಕಾವೇರಪ್ಪ, ಅಧ್ಯಕ್ಷತೆ: ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್, ಮುಖ್ಯ ಅತಿಥಿಗಳು: ಸಮಾಜ ಸೇವಕ ಡಾ. ಕೆ. ರಘುರಾಂ ವಾಜಪೇಯಿ, ಶಿಲ್ಪ ಕಲಾವಿದ ಎಲ್. ಶಿವಲಿಂಗಪ್ಪ, ಜೀವಧಾರ ರಕ್ತನಿಧಿ ಕೇಂದ್ರ ಸಂಸ್ಥಾಪಕ ಎಸ್.ಇ. ಗಿರೀಶ್, ಸ್ಥಳ: ಮೈಸೂರು ಆರ್ಟ್ ಗ್ಯಾಲರಿ, ರಾಮಾನುಜ ರಸ್ತೆ, ಬೆಳಗ್ಗೆ 10.30ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ, ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರ:** ಬುದ್ಧ ಪೂರ್ಣಿಮೆಯ ಅಂಗವಾಗಿ ವಿಶೇಷ ಉಪನ್ಯಾಸ 'ಪ್ರಸ್ತುತ ಕಾಲಕ್ಕೆ ಬುದ್ಧ ಅನಿವಾರ್ಯ', ಉದ್ಘಾಟನೆ: ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ಉಪನ್ಯಾಸ ನೀಡುವವರು: ಸಿರಿ ಮಹಾಬೋಧಿ ಬುದ್ಧ ವಿಹಾರದ ಭಿಕ್ಕು ಬೋಧಿ ಪ್ರಜ್ಞಾನಂದ ಭಂತೇಜಿ, ಅಧ್ಯಕ್ಷತೆ: ಡಾ.ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರದ ನಿರ್ದೇಶಕ ಪ್ರೊ.ಎಸ್.ನರೇಂದ್ರಕುಮಾರ್, ಸ್ಥಳ: ಡಾ.ಬೆಟ್ರಿಕ್ಸ್ ಡಿಸೋಜಾ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 10.30ಕ್ಕೆ

■ **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್:** ಕನ್ನಡ ಸಾಹಿತ್ಯ ಪರಿಷತ್ತಿನ 109ನೇ ಸಂಸ್ಥಾಪನಾ ದಿನಾಚರಣೆ, ಉದ್ಘಾಟನೆ: ಸಂಗೀತ ವಿವಿ ಕುಲಪತಿ ಪ್ರೊ ನಾಗೇಶ್ ವಿ.ಬೆಟ್ಟಕೋಟೆ, ಅಧ್ಯಕ್ಷತೆ: ಗಾಂಧಿ ಭವನ ವಿಶ್ರಾಂತ ನಿರ್ದೇಶಕ ಡಾ.ಶಿವರಾಜಪ್ಪ, ಡಾ.ಆನಂದ್ ಗೋಪಾಲ್ ಅವರಿಂದ ವಿಶೇಷ ಉಪನ್ಯಾಸ, ಪ್ರಾಸ್ತಾವಿಕ ನುಡಿ: ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್, ಸ್ಥಳ: ಸಾಹಿತ್ಯ ಭವನ, ವಿಜಯನಗರ 1ನೇ ಹಂತ, ಬೆಳಗ್ಗೆ 11.15ಕ್ಕೆ.

■ **ರಂಗಾಯಣ:** ಚಿಣ್ಣರಮೇಳ-2023, ನಮ್ಮೀ ತಾಯ್ನೆಲ' ಚಿಣ್ಣರ ನಾಟಕೋತ್ಸವದ ಸಮಾರಂಭ, ಸಮಾರೋಪ ನುಡಿ: ಹಿರಿಯ ರಂಗಕರ್ಮಿ ಪ್ರೊ.ಹೆಚ್.ಎಸ್.ಉಮೇಶ್, ಅಧ್ಯಕ್ಷತೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕ ವಿಶ್ವನಾಥ ಪಿ. ಹಿರೇಮಠ, ಸ್ಥಳ: ವನರಂಗ, ಸಂಜೆ 4ಕ್ಕೆ.

■ **ಹರಿದಾಸ ಸಂಗೀತ ಸಾಹಿತ್ಯೋತ್ಸವ ಸಮಿತಿ :** ಶ್ರೀ ಗುರುವಾದಿರಾಜರ ಪಂಚರಾತ್ರೋತ್ಸವ ವೈಭವ, ಗಾನಸಿರಿ-ವೇದಾಂತ ಲಹರಿ ವಿನೂತನ ಕಾರ್ಯಕ್ರಮ, ಅಧ್ಯಕ್ಷತೆ ಮತ್ತು ಉದ್ಘಾಟನೆ: ಸೋದೆ ಶ್ರೀ ವಾದಿರಾಜ ಮಠದ ಪೀಠಾಧಿಪತಿ ಶ್ರೀ ವಿಶ್ವವಲ್ಲಭತೀರ್ಥರು, ದೃಶ್ಯ-ಶ್ರಾವ್ಯ-ಕಾವ್ಯ, ಉಪಸ್ಥಿತರು: ಕಲಾವಿದ ಗಂಜೀಫಾ ರಘುಪತಿ ಭಟ್, ಗಾಯಕ ಡಾ. ರಾಯಚೂರು ಶೇಷಗಿರಿ ದಾಸ್, ವಿಶ್ಲೇಷಣೆ : ಡಾ.ಬೆ.ನಾ.ವಿಜಯೀಂದ್ರಾಚಾರ್ಯ, ಶಾರದಾ ವಿಲಾಸ ಶತಮಾನೋತ್ಸವ ಭವನ, ಕೃಷ್ಣಮೂರ್ತಿಪುರಂ, ಸಂಜೆ 5 ರಿಂದ.

■ **ವಿಶ್ವಮೈತ್ರಿ ಬುದ್ಧ ವಿಹಾರ:** ವೈಶಾಖ ಬುದ್ಧಪೂರ್ಣಿಮಾ ಭಗವಾನ್ ಬುದ್ಧರ 2567ನೇ ಜನ್ಮ ದಿನಾಚರಣೆ, ಸಮ್ಮುಖ: ಡಾ. ಕಲ್ಯಾಣಸಿರಿ ಭಂತೇಜಿ, ಉದ್ಘಾಟನೆ: ಅಂಬೇಡ್ಕರ್ ವಾದಿ ಚಿಂತಕ ಅರವಿಂದ ಬೋಧ್, ಅಧ್ಯಕ್ಷತೆ : ವಿಶ್ವಮೈತ್ರಿ ಬುದ್ಧ ವಿಹಾರ ಉಪಾಸಕ ವಿ.ಪುರುಷೋತ್ತಮ್, ಸ್ಥಳ: ವಿಶ್ವ ಮೈತ್ರಿ ಬುದ್ಧ ವಿಹಾರ, ಅಶೋಕ ವೃತ್ತ, ಸಂಜೆ 5.30ಕ್ಕೆ.

■ **ವೈಶಾಖ ಬುದ್ಧಪೂರ್ಣಿಮ ಹಾಗೂ ಗೌತಮಬುದ್ಧ ಉದ್ಯಾನ ಅಭಿವೃದ್ಧಿ ಸಮಿತಿ:** ಭಗವಾನ್ ಬುದ್ಧರ ಜನ್ಮ ದಿನಾಚರಣೆ ಹಾಗೂ ಅಂಬೇಡ್ಕರ್‌ರವರ 132ನೇ ಜನ್ಮ ದಿನಾಚರಣೆ, ವಿಶೇಷ ಆಹ್ವಾನಿತರು : ಪೊಲೀಸ್ ನಿರೀಕ್ಷಕ ಹೆಚ್.ಆರ್.ವಿವೇಕಾನಂದ, ಆದಿ ಕರ್ನಾಟಕ ಮಹಾ ಸಂಸ್ಥೆ ಅಧ್ಯಕ್ಷ ಪಿ.ಸಿದ್ದರಾಜು, ಚಿಕ್ಕಣ್ಣ, ಆನಂದ್, ಶಂಕರ್, ಜೆ. ಶಂಕರ್, ಸ್ಥಳ: ಗೌತಮ ಬುದ್ಧ ಉದ್ಯಾನವನ, ವಿಶ್ವೇಶ್ವರನಗರ, ಸಂಜೆ 5.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಇಂಜಿನಿಯರಿಂಗ್ ವಿದ್ಯಾವಿಕಾಸ, ಪ್ರಾಯೋಜಕರು- ವಿದ್ಯಾವಿಕಾಸ ಇಂಜಿನಿಯರಿಂಗ್ ಕಾಲೇಜ್, ಮೈಸೂರು, 6.40 ಅರಿವಿನ ಶಿಖರ, ಗಾಯನ-ಕೆ.ಶ್ರೇಯಾ, ಜಿ.ಪುಷ್ಪಲತಾ, ವ್ಯಾಖ್ಯಾನ-ಡಾ.ಎನ್.ಎಸ್. ತಾರಾನಾಥ್, 8.00 ಮಾನ್ಯತೆ ಪಡೆದ ರಾಜಕೀಯ ಪಕ್ಷಗಳ ಚುನಾವಣಾ ಪ್ರಚಾರ ಭಾಷಣ, 9.30 ಚುನಾವಣೆ 2023, ಮತ ಕ್ಷೇತ್ರ ದರ್ಶನ -ಸಮಗ್ರ ಚಿತ್ರಣ, 10.00 ಡಾ.ಎಸ್.ವಿಜಯರಾಘವನ್- ವೀಣಾವಾದನ, 11.30 ಮಿಶ್ರ ಮಾಧುರ್ಯ **ಮಧ್ಯಾಹ್ನ:** 12.30 ದೇವರನಾಮ, 12.45 ಕಾದಂಬರಿ ವಿಹಾರ- ಡಾ.ಎಸ್.ಎಲ್. ಭೈರಪ್ಪನವರ ದೂರ ಸರಿದರು ಕಾದಂಬರಿಯ ಬಾನುಲಿ ಓದು ಪ್ರಸ್ತುತಿ-ಉಮೇಶ್ ಎಸ್.ಎಸ್., 1.00 ರಂಗ ಗೀತೆಗಳು-ಎಂ.ಪಿ. ನಾಗಲಿಂಗಾಚಾರ್, 1.20 ಭಾವಗೀತೆ, 2.50 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ-ಜಿ.ಕೆ.ರವೀಂದ್ರಕುಮಾರ್, 3.00 ಮೌನದಾಚೆಯ ಬೆಳಕು-ಸದಾಶಿವ ಬ್ರಹ್ಮೇಂದ್ರರ ಜೀವನ ಹಾಗೂ ರಚನೆಗಳನ್ನಾಧರಿಸಿದ ವಿಶೇಷ ಕಾರ್ಯಕ್ರಮ ಸರಣಿ, 4.00 ಮಹಿಳಾ ರಂಗ "ಸಖೀಪದ", ಪ್ರಸ್ತುತಿ- ಕೆ.ಬಿ.ಮೀನಾ, 4.30 ವೃತ್ತಿ ಮಾರ್ಗದರ್ಶನ-ನ್ಯಾನೋ ಟೆಕ್ನಾಲಜಿ ಅಂಡ್ ಕಾಸ್ಮೆಟಿಕ್ ಸೈನ್ಸ್ ವಿಷಯದಲ್ಲಿ ಇರುವ ಅಧ್ಯಯನ ಮತ್ತು ವೃತ್ತಿಪರ ಅವಕಾಶಗಳು ಕುರಿತು ಡಾ. ಆಶಾ ಶ್ರೀನಿವಾಸನ್ ಅವರೊಂದಿಗೆ ಮಾತುಕತೆ, 6.55 ಕೃಷಿರಂಗ-ಕಿಸಾನ್ ವಾಣಿ, ಸಮಸ್ಯಾತ್ಮಕ ಮಣ್ಣುಗಳ ನಿರ್ವಹಣೆ ಕುರಿತು ಡಾ.ಭಾಗ್ಯಲಕ್ಷ್ಮಿ ಅವರೊಂದಿಗೆ ಸಂದರ್ಶನ. ಸಂದರ್ಶಕರು- ಆರ್.ಲೋಕೇಶ್ವರಿ, 8.00 ಮಾನ್ಯತೆ ಪಡೆದ ರಾಜಕೀಯ ಪಕ್ಷಗಳ ಚುನಾವಣಾ ಪ್ರಚಾರ ಭಾಷಣ, 9.15 ಜನಪದಸಂಗೀತ-ಅನ್ನಪೂರ್ಣಮ್ಮ ಮತ್ತು ಸಂಗಡಿಗರು, 10.30 ವಾದ್ಯವೃಂದ, ನಿರ್ದೇಶನ-ಕೆ.ಟಿ.ಉದಯಕಿರಣ್, 10.30 ಸವಿನೆನಪು

■ **ಶ್ರೀ ಸುತ್ತೂರು ಮಠ, ಚಾಮುಂಡಿಬೆಟ್ಟದ ತಪ್ಪಲು :** ಬೆಳದಿಂಗಳ ಸಂಗೀತ-254, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ವಿದ್ವಾನ್ ಸಾಕೇತ್ ರಾಮನ್ ಅವರಿಂದ ಗಾಯನ, ವಿದ್ವಾನ್ ಎಚ್.ಕೆ. ವೆಂಕಟರಾಮ್-ವಯೋಲಿನ್, ವಿದ್ವಾನ್ ವಿಜಯ್ ಬಿ. ನಟೇಶನ್-ಮೃದಂಗ, ವಿದ್ವಾನ್ ಶಮಿತ್ ಎಸ್.ಗೌಡ-ಘಟಂ, ಸ್ಥಳ: ಶ್ರೀ ಸುತ್ತೂರು ಮಠ, ಚಾಮುಂಡಿಬೆಟ್ಟದ ತಪ್ಪಲು, ಸಂಜೆ 6ಕ್ಕೆ.

■ **ಶ್ರೀ ವಿದ್ಯಾಗಣಪತಿ ಹಾಗೂ ಶ್ರೀ ಮಹಾಲಕ್ಷ್ಮೀ ದೇವಸ್ಥಾನ ಟ್ರಸ್ಟ್ :** 4ನೇ ವರ್ಷದ ಶ್ರೀನಿವಾಸ ಕಲ್ಯಾಣೋತ್ಸವ ಹಾಗೂ 6ನೇ ವರ್ಷದ ಮಹಾಲಕ್ಷ್ಮೀ ದೇವಸ್ಥಾನದ ವಾರ್ಷಿಕೋತ್ಸವ, ಬೆಳಗ್ಗೆ 6 ಗಂಟೆಗೆ ಮಹಾಗಣಪತಿ ಪೂಜೆ, ಪುಣ್ಯಾಹ, ದೇವನಾಂದಿ, ಸ್ವಾಮಿಯವರಿಗೆ ಪಂಚಾಮೃತಾಭಿಷೇಕ, ತೈಲಮಜ್ಜನ ಸ್ನಾನ, ಅಂಕುರಾರ್ಪಣೆ, ಕಾಶಿಯಾತ್ರೆ, ಕಲ್ಯಾಣೋತ್ಸವ, ತೀರ್ಥಪ್ರಸಾದ ವಿನಿಯೋಗ, ಸಂಜೆ 5.30ಕ್ಕೆ ಗ್ರಾಮ ಪ್ರಮುಖ ರಸ್ತೆಗಳಲ್ಲಿ ಸ್ವಾಮಿಯವರ ದಿವ್ಯ ರಥೋತ್ಸವ, ಶ್ರೀವಾರಿಗೆ ಉಯ್ಯಾಲೋತ್ಸವ, ಶಯನೋತ್ಸವ, ಮಹಾಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ, ಸ್ಥಳ: ಶ್ರೀ ಮಹಾಲಕ್ಷ್ಮೀ ದೇವಸ್ಥಾನ, ವಿನಾಯಕನಗರ.

■ **ಗಾನಭಾರತೀ :** ವಿದುಷಿ ಜಿ.ಎಸ್. ಕಮಲ ನೆನಪಿನ ಸಂಗೀತ ಕಛೇರಿ, ವಿದ್ವಾನ್ ಅಶೋಕ್ ಮತ್ತು ವಿದ್ವಾನ್ ಹರಿಹರನ್ ಅವರಿಂದ ಗಾಯನ, ವಿದ್ವಾನ್ ಮತ್ತೂರು ಶ್ರೀನಿಧಿ-ಪಿಟೀಲು, ವಿದ್ವಾನ್ ಎ. ರಾಧೇಶ್-ಮೃದಂಗ, ವಿದ್ವಾನ್ ಎಸ್. ಮಂಜುನಾಥ್-ಘಟ, ಸ್ಥಳ: ವೀಣೆ ಶೇಷಣ್ಣ ಭವನ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಸಂಜೆ 6ಕ್ಕೆ.

■ **ದೀಕ್ಷಿತ್ ಆರೋಗ್ಯ ಧಾಮ :** ವಿದ್ವಾನ್ ಸಿ.ಎಸ್.ಕೇಶವ ಚಂದ್ರ ಅವರಿಂದ ವೇಣುವಾದನ, ವಿದ್ವಾನ್ ಕೇಶವ ಮೋಹನ್‌ಕುಮಾರ್ -ಪಿಟೀಲು, ವಿದ್ವಾನ್ ಸಾಯಿಶಿವು ಲಕ್ಷ್ಮೀ ಕೇಶವ-ಮೃದಂಗ, ಡಾ.ಸಿ.ಎಸ್.ಅನಿಲ್ ಕುಮಾರ್ ಅವರಿಂದ ಖಿನ್ನತೆ ಆಗು-ಹೋಗು ಕುರಿತು ಉಪನ್ಯಾಸ, ಸ್ಥಳ: ದೀಕ್ಷಿತ್ ಆರೋಗ್ಯ ಧಾಮ, ವಿಜಯನಗರ 3ನೇ ಹಂತ, ಸಂಜೆ 6ಕ್ಕೆ.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೇ 5 ಶುಕ್ರವಾರ 2023

ಸಂಪುಟ: 44 | ಸಂಚಿಕೆ: 19 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಹೈವೋಲ್ಟೇಜ್ ಕ್ಷೇತ್ರ ವರುಣದಲ್ಲಿ ಪ್ರಚಾರಕ್ಕೆ ತಾರಾ ಮೆರಗು

ಸಿದ್ದರಾಮಯ್ಯ ಪರ ಶಿವರಾಜ್‌ಕುಮಾರ್, ರಮ್ಯಾ ಇತರರ ಪ್ರಚಾರ





ಮೈಸೂರು, ಮೇ 4(ಎಂಟಿವೈ)– ರಾಜ್ಯ ರಾಜಕಾರಣದ ಗಮನ ಸೆಳೆದಿರುವ ವರುಣ ವಿಧಾನಸಭಾ ಕ್ಷೇತ್ರದಲ್ಲಿ ಮಾಜಿ ಮುಖ್ಯಮಂತ್ರಿ, ಕಾಂಗ್ರೆಸ್ ಅಭ್ಯರ್ಥಿ ಸಿದ್ದರಾಮಯ್ಯ ಪರವಾಗಿ ಹ್ಯಾಟ್ರಿಕ್ ಹೀರೋ ಶಿವರಾಜ್‌ಕುಮಾರ್ ದಂಪತಿ, ಮೋಹಕ ತಾರೆ ರಮ್ಯಾ, ನಟಿ ನಿಶ್ವಿಕಾ ನಾಯ್ಡು ಸೇರಿ ಹಲವರು ಭರ್ಜರಿ ರೋಡ್ ಶೋ ನಡೆಸಿ, ಮತ ಯಾಚಿಸಿದರು.

ರಾಜ್ಯದ 224 ಕ್ಷೇತ್ರಗಳಲ್ಲಿ ಹೈವೋಲ್ಟೇಜ್ ಕ್ಷೇತ್ರ ಎನಿಸಿರುವ ವರುಣ ಕ್ಷೇತ್ರದಲ್ಲಿ ಕಾಂಗ್ರೆಸ್‌ನಿಂದ ಸಿದ್ದರಾಮಯ್ಯ ಸ್ಪರ್ಧಿಸಿದ್ದರೆ, ಬಿಜೆಪಿಯಿಂದ ಸಚಿವ ವಿ.ಸೋಮಣ್ಣ ಸ್ಪರ್ಧಿಸಿದ್ದಾರೆ. ಬಿಜೆಪಿ, ಕಾಂಗ್ರೆಸ್ ಪಕ್ಷದ ತಾರಾ ಪ್ರಚಾರಕರ ದಂಡೇ ವರುಣದಲ್ಲಿ ಪ್ರಚಾರ ನಡೆಸುತ್ತಿದೆ. ಈ ಹಿನ್ನೆಲೆಯಲ್ಲಿ ತೀವ್ರ ಜಿದ್ದಾಜಿದ್ದಿನ ಕಣವಾಗಿ ವರುಣ ಕ್ಷೇತ್ರ ಮಾರ್ಪಟ್ಟಿದ್ದು, ರಾಜ್ಯ ಪ್ರವಾಸದಲ್ಲಿದ್ದ ವಿಪಕ್ಷ ನಾಯಕ ಸಿದ್ದರಾಮಯ್ಯ ಗುರುವಾರ ಚುನಾವಣಾ ಪ್ರಚಾರದ ಅಖಾಡಕ್ಕಿಳಿದು ಭರ್ಜರಿ ರೋಡ್ ಶೋ ನಡೆಸಿ ಬೆಂಬಲ ಕೋರಿದರು.

ಮೈಸೂರಿನ ನಿವಾಸದಿಂದ ನಂಜನಗೂಡು ತಾಲೂಕಿನ ರಾಂಪುರಕ್ಕೆ ಆಗಮಿಸಿದ ಮಾಜಿ ಸಿಎಂ ಸಿದ್ದರಾಮಯ್ಯ ಅವರಿಗೆ ವಿಧಾನ ಪರಿಷತ್ ಸದಸ್ಯರಾದ ಡಾ.ಡಿ.ತಿಮ್ಮಯ್ಯ, ಜೆ.ನಾಗರಾಜ್ ಯಾದವ್, ನಟಿ ನಿಶ್ವಿಕಾ ನಾಯ್ಡು ಇನ್ನಿತರರು ಸಾಥ್ ನೀಡಿದರು. ಗ್ರಾಮಕ್ಕೆ ಸಿದ್ದರಾಮಯ್ಯ ಎಂಟ್ರಿಯಾಗುತ್ತಿದ್ದಂತೆ ● 9ನೇ ಪುಟಕ್ಕೆ

ಬಡವರ ಧ್ವನಿ ಸಿದ್ದರಾಮಯ್ಯ: ಶಿವರಾಜ್‌ಕುಮಾರ್

ಮೈಸೂರು, ಮೇ.4(ಎಂಟಿವೈ)–ಹಲವು ಜನಪ್ರಿಯ ಕಾರ್ಯಕ್ರಮ ಜಾರಿಗೊಳಿಸುವ ಬಡವರ ಆಶಾಕಿರಣವಾಗಿರುವ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಗೆಲ್ಲಿಸುವಂತೆ ಹ್ಯಾಟ್ರಿಕ್ ಹೀರೊ ಶಿವರಾಜ್‌ಕುಮಾರ್ ಮನವಿ ಮಾಡಿದ್ದಾರೆ.

ವರುಣ ಕ್ಷೇತ್ರದ ವಿವಿಧ ಗ್ರಾಮಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿ, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪರ ರೋಡ್ ಶೋ ನಡೆಸಿ ಮತಯಾಚಿಸಿದ ಬಳಿಕ ಮಾತನಾಡಿದ ಅವರು, ಸಿದ್ದರಾಮಯ್ಯ ಅವರು 5 ವರ್ಷ ಮುಖ್ಯಮಂತ್ರಿಯಾಗಿದ್ದ ವೇಳೆ ಹಲವು ಜನಪರ ಕಾರ್ಯಕ್ರಮ, ಯೋಜನೆಗಳನ್ನು ಜಾರಿಗೊಳಿಸಿದ್ದಾರೆ. ಬಹುತೇಕ ಯೋಜನೆಗಳು ಬಡವರು, ರೈತರ ಪರವಾಗಿವೆ. ಮುಂಬರುವ ದಿನಗಳಲ್ಲೂ ಬಡವರ ಪರ ಇನ್ನಷ್ಟು ಕಾರ್ಯಕ್ರಮ ಜಾರಿಗೊಳಿಸಲು ಸಿದ್ದರಾಮಯ್ಯ ಅವರನ್ನು ಗೆಲ್ಲಿಸಬೇಕು ಎಂದು ಕೋರಿದರು. ಮೈಸೂರಲ್ಲಿ ಅನಾಥ ಹೆಣ್ಣು ಮಕ್ಕಳಿಗಾಗಿ ಶಕ್ತಿಧಾಮ ಸಂಸ್ಥೆಯನ್ನು ಆರಂಭಿಸುವುದಕ್ಕೆ ಸಿದ್ದರಾಮಯ್ಯ ಸಹಕರಿಸಿದ್ದಾರೆ. ಪ್ರಮುಖವಾಗಿ ವರುಣ ಕ್ಷೇತ್ರದವರೇ ಆಗಿದ್ದಾರೆ. ಇದರಿಂದ ಸ್ಥಳೀಯರ ಸಮಸ್ಯೆಗೆ ಸ್ಪಂದಿಸಲು ಸಹಕಾರಿಯಾಗಲಿದೆ. ● 9ನೇ ಪುಟಕ್ಕೆ



ಸಿದ್ದರಾಮಯ್ಯ ಹತಾಶರಾಗಿ ಸ್ಟಾರ್ ಪ್ರಚಾರಕರ ಮೊರೆ

● ಸಚಿವ, ವರುಣ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ವಿ.ಸೋಮಣ್ಣ ವ್ಯಂಗ್ಯ

● ಎಲ್ಲಾ ನನ್ನಿಂದ, ನನ್ನಿಂದ ಎನ್ನುವುದನ್ನು ಬಿಡಿ; ನಾವು ಎಂದರೆ ಕ್ಷೇಮ...

ತಿ.ನರಸೀಪುರ, ಮೇ 4–ನಾಮಪತ್ರ ಸಲ್ಲಿಸುವ ವೇಳೆ ಮತಹಾಕಲು ಮಾತ್ರ ಬರುತ್ತೇನೆ ಎಂದಿದ್ದ ಸಿದ್ದರಾಮಯ್ಯ ಈಗ ಹತಾಶರಾಗಿ ಸ್ಟಾರ್ ಪ್ರಚಾರಕರನ್ನು ಕರೆತಂದು ಭಾರೀ ಜನ ಸೇರಿಸಿ ಪ್ರಚಾರ ಮಾಡುತ್ತಿದ್ದಾರೆ ಎಂದು ಸಚಿವ ಹಾಗೂ ವರುಣ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ವಿ.ಸೋಮಣ್ಣ ವ್ಯಂಗ್ಯವಾಡಿದ್ದಾರೆ.

ವರುಣ ಮತ ಕ್ಷೇತ್ರ ವ್ಯಾಪ್ತಿಯ ಈಶ್ವರ ಗೌಡನಹಳ್ಳಿ, ಬಿಲಿಗೆರೆ, ಗೆಜ್ಜಿಗನಹಳ್ಳಿ ಸೇರಿದಂತೆ ವಿವಿಧ ಗ್ರಾಮಗಳಲ್ಲಿ ತಮ್ಮ ಬೆಂಬಲಿಗರೊಂದಿಗೆ ಭರ್ಜರಿ ರೋಡ್ ಶೋ ನಡೆಸಿ, ಮತಯಾಚಿಸಿ ಅವರು ಮಾತನಾಡಿದರು. ನಾಮಿನೇಷನ್ ಹಾಕುವ ವೇಳೆ ಮತ ಹಾಕಲು ಮಾತ್ರ ಬರುತ್ತೇನೆ. ಪ್ರಚಾರಕ್ಕೆ ಬರುವುದಿಲ್ಲ ಎಂದು ಹೇಳಿ ಈಗ ಸ್ಟಾರ್ ಪ್ರಚಾರಕರಾದ ಚಿತ್ರನಟ ಶಿವರಾಜ್ ಕುಮಾರ್, ರಮ್ಯಾ ಹಾಗೂ ದುನಿಯಾ ವಿಜಯ್ ಅವರೊಂದಿಗೆ ಪ್ರಚಾರ ನಡೆಸುತ್ತಿದ್ದಾರೆ. ಜನ ಸೇರಿಸಲು ಸ್ಟಾರ್ ಪ್ರಚಾರಕರ ಮೊರೆ ಹೋಗಿದ್ದಾರೆ. ಪ್ರಚಾರಕ್ಕೆ ಬರುವುದಿಲ್ಲ ಎಂದ ಸಿದ್ದರಾಮಯ್ಯ, ಸೋಮಣ್ಣ ಕಣದಲ್ಲಿದ್ದಾನೆ ಎಂಬ ಕಾರಣಕ್ಕೆ ಹತಾಶೆಯಿಂದ ಸ್ಟಾರ್ ಪ್ರಚಾರಕರೊಂದಿಗೆ ಪ್ರಚಾರ ಮಾಡುತ್ತಿದ್ದಾರೆ. ● 9ನೇ ಪುಟಕ್ಕೆ

ಡಾ.ರಾಜ್ ಕುಟುಂಬದೊಂದಿಗೆ ನನ್ನದೂ ಅವಿನಾಭಾವ ಸಂಬಂಧ

ಶಿವರಾಜ್‌ಕುಮಾರ್ ಸಿದ್ದರಾಮಯ್ಯ ಪರ ಪ್ರಚಾರಕ್ಕೆ ಬಂದಿರುವ ಬಗ್ಗೆ ಪ್ರತಿಕ್ರಿಯೆ ನೀಡಿದ ಸೋಮಣ್ಣ ನನಗೂ, ಡಾ.ರಾಜ್ ಕುಟುಂಬಕ್ಕೂ 40 ವರ್ಷಗಳ ಅವಿನಾಭಾವ ಸಂಬಂಧವಿದೆ. ನಾನು ಸಹ ಅವರ ಕುಟುಂಬದಲ್ಲಿ ಒಬ್ಬನಂತಿದ್ದೇನೆ. ಪುನೀತ್ ರಾಜ್ ಕುಮಾರ್ ಆಕಸ್ಮಿಕವಾಗಿ ಮೃತರಾದಾಗ ಸರ್ಕಾರದ ಸಹಕಾರದೊಂದಿಗೆ 210 ಹಾಸಿಗೆಯುಳ್ಳ ಆಸ್ಪತ್ರೆ ನಿರ್ಮಾಣ ಮಾಡಿ ಪುನೀತ್ ಹೆಸರಿಟ್ಟಿದ್ದೆ. ರಾಘವೇಂದ್ರ ರಾಜ್‌ಕುಮಾರ್‌ರವರು ಮಾತನಾಡುತ್ತಾ ಸೋಮಣ್ಣರಿಗೆ ಎಷ್ಟು ಕೋಟಿ ನಮನ ಸಲ್ಲಿಸಿದರೂ ಸಾಲದು ಎಂದಿದ್ದರು. ಆದರೆ ಶಿವರಾಜ್ ಕುಮಾರ್ ಯಾಕೆ ಹೀಗೆ ಮಾಡಿದರೋ ಗೊತ್ತಿಲ್ಲ. ಅವರ ಬಗ್ಗೆ ನನಗೆ ಅಪಾರ ಗೌರವವಿದೆ. ಇನ್ನು ದುನಿಯಾ ವಿಜಯ್ ಹಾಗೂ ರಮ್ಯ ನನ್ನ ತಲೆಯಲ್ಲೇ ಇಲ್ಲ ಬಿಡಿ ಎಂದರು.



ಸಿದ್ರಾಮಣ್ಣ ಪರ ಶಿವಣ್ಣ ಪ್ರಚಾರ ವಿಚಾರ

ಅಣ್ಣಾವ್ರ, ಶಿವಣ್ಣ ಅಭಿಮಾನಿಯಾಗಿ ಸರಿ ಕಾಣಲಿಲ್ಲ: ಪ್ರತಾಪ್‌ಸಿಂಹ

ಮೈಸೂರು: ವರುಣಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸಿದ್ದರಾಮಯ್ಯ ಪರವಾಗಿ ಹ್ಯಾಟ್ರಿಕ್ ಹೀರೋ ಶಿವರಾಜ್ ಕುಮಾರ್ ಪ್ರಚಾರ ನಡೆಸಿರುವುದಕ್ಕೆ ಮೈಸೂರು–ಕೊಡಗು ಸಂಸದ ಪ್ರತಾಪ್‌ಸಿಂಹ ತಮ್ಮದೇ ರೀತಿಯಲ್ಲಿ ಟ್ವೀಟ್ ಮೂಲಕ ಟಾಂಗ್ ನೀಡಿದ್ದಾರೆ.

ಪುನೀತ್ ರಾಜಕುಮಾರ್ ಸರ್ ಹೆಸರಿನಲ್ಲಿ ಬಡವರಿಗಾಗಿ ಆಸ್ಪತ್ರೆ ಕಟ್ಟಿದ ಸೋಮಣ್ಣ, ಮನಮೆಚ್ಚಿ ಶ್ಲಾಘಿಸಿದ ರಾಘಣ್ಣ, ಸಿದ್ರಾಮಣ್ಣ ಪರವಾಗಿ ಪ್ರಚಾರಕ್ಕಿಳಿದ ಶಿವಣ್ಣ! ಅವರವರ ಭಾವ ಭಕುತಿಗೆ... ಎಂದು ಟ್ವೀಟ್ ಮೂಲಕ ಕುಟುಕಿದ್ದಾರೆ. ನಮ್ಮೆಲ್ಲರ ನೆಚ್ಚಿನ ವರನಟ ಡಾ. ರಾಜ್‌ಕುಮಾರ್ ಅವರು ಈ ಹಿಂದೆ ಗೋಕಾಕ್ ಚಳವಳಿ, ಕನ್ನಡಿಗರ ಅಸ್ಮಿತೆ ಪ್ರಶ್ನೆ ಬಂದಾಗ ಕನ್ನಡದ ಪರವಾಗಿ ದನಿ ಎತ್ತಿದ್ದರು. ದೊಡ್ಮನೆ ಕುಟುಂಬವನ್ನು ನಾವು ರಾಜಕೀಯದ ● 6ನೇ ಪುಟಕ್ಕೆ



ದಿಲ್ಲಿ ನಾಯಕರ ಪ್ರಚಾರ ದರ್ಬಾರ್‌ಗೆ ಬಿಜೆಪಿ ಅಭ್ಯರ್ಥಿಗಳ ಅಪಸ್ವರ

ಇವರನ್ನೇ ಮೆರೆಸುತ್ತಾ ಕುಳಿತರೆ ಮತದಾರರ ಮುಟ್ಟೋದು ಯಾವಾಗ: ರಾಜ್ಯ ನಾಯಕರಲ್ಲಿ ಅಭ್ಯರ್ಥಿಗಳ ಅಳಲು

ಬೆಂಗಳೂರು, ಮೇ4(ಕೆಎಂಶಿ)– ದಿಲ್ಲಿ ನಾಯಕರ ಸತತ ರೋಡ್ ಶೋ ಮತ್ತು ಬಹಿರಂಗ ಸಭೆಗಳಿಂದ ಸುಸ್ತಾಗಿ ಹೋಗಿರುವ ಬಿಜೆಪಿಯ ಬಹುತೇಕ ಅಭ್ಯರ್ಥಿಗಳು ಈಗ ಅಪಸ್ವರ ಎತ್ತಿರುವ ಅಂಶ ಬೆಳಕಿಗೆ ಬಂದಿದೆ.

ನಾಯಕರ ಪ್ರಚಾರಕ್ಕೆ ತಮ್ಮ ಸಮಯವನ್ನು ನಿಗದಿ ಮಾಡಿದರೆ, ಜನರ ಬಳಿ ತೆರಳಿ ಮತಯಾಚಿಸುವುದು ಯಾವಾಗ ಎಂಬ ಪ್ರಶ್ನೆ ಎದ್ದಿದೆ. ಒಂದರ ನಂತರ ಮತ್ತೊಂದು ರೋಡ್ ಶೋ ಇಲ್ಲವೆ ಸಭೆಗಳನ್ನು ನಡೆಸುತ್ತಿದ್ದರೆ ಕ್ಷೇತ್ರದಲ್ಲಿನ ಮತದಾರರನ್ನು ನೇರವಾಗಿ ತಲುಪುವುದಾದರೂ ಹೇಗೆ. ದಿಲ್ಲಿ ನಾಯಕರ ರೋಡ್ ಶೋಗಳು, ಸಭೆಗಳಿಗೆ ನಾವು ಒಂದು ವಾರಕ್ಕಿಂತ ಮುಂಚಿತವಾಗಿ ತಯಾರಿ ನಡೆಸಬೇಕು. ಜನರನ್ನು ಸೇರಿಸಬೇಕು, ಆದರೆ ಈ ಕೆಲಸದಲ್ಲಿ ಮುಳುಗುವುದರಿಂದ ನಮ್ಮ ಕ್ಷೇತ್ರದ ಮತದಾರರನ್ನು ತಲುಪುವುದು ಕಷ್ಟವಾಗುತ್ತಿದೆ ಎಂದು ಹಲವು ರಾಜ್ಯದ ನಾಯಕರ ಬಳಿ ದೂರಿದ್ದಾರೆ.

ದಿಲ್ಲಿಯ ನಾಯಕರ ರೋಡ್ ಶೋಗಳಿಂದ ನಮಗೆ ಆಗುವ ಲಾಭ ಅಷ್ಟರಲ್ಲೇ ಇದೆ. ಎಲ್ಲಕ್ಕಿಂತ ಮುಖ್ಯವಾಗಿ ಮತದಾರರು ಯಾರಿಗೆ ಮತ ಹಾಕಬೇಕು ಎಂಬ ವಿಷಯದಲ್ಲಿ ಒಂದು ತೀರ್ಮಾನಕ್ಕೆ ಬಂದಿರುತ್ತಾರೆ. ಅಂತಹವರನ್ನು ರೋಡ್ ಶೋ ಮೂಲಕ ಬದಲಿಸಲು ಸಾಧ್ಯವಿಲ್ಲ ಎಂದಿದ್ದಾರೆ. ಇನ್ನು ಮುಂದೆ ಉಳಿದಿರುವ ಅಲ್ಪ ಸಮಯವನ್ನು ನಮಗೆ ಬಿಡಿ, ಹೊರಗಿನವರ ಪ್ರಚಾರ ಸಾಕು. ಸ್ಥಳೀಯವಾಗಿ ಕಾರ್ಯಕರ್ತರ ಜೊತೆಗೂಡಿ, ಮತದಾರರನ್ನು ತಲುಪಬೇಕಾಗಿದೆ. ದೊಡ್ಡ ನಾಯಕರು ರೋಡ್ ಶೋ ನಡೆಸುವ ಸಂದರ್ಭದಲ್ಲಿ ಕ್ಷೇತ್ರದ ಅಭ್ಯರ್ಥಿಗಳು ಇರುವುದಿಲ್ಲ. ಒಂದು ವೇಳೆ ಇದ್ದರೆ ಅದರ ವೆಚ್ಚ ನಮ್ಮ ಮೇಲೆ ಬೀಳುತ್ತದೆ.

ಸಿದ್ಧತೆಗಳೆಲ್ಲವನ್ನೂ ನಾವೇ ಮಾಡಬೇಕು. ಆ ವೆಚ್ಚದ ಜೊತೆಗೆ ಸ್ಥಳೀಯ ಚುನಾವಣಾ ವೆಚ್ಚ ಮಾಡುವುದು ನಮಗೆ ದುಬಾರಿಯಾಗುತ್ತದೆ ಎಂಬ ಮಾಹಿತಿಯನ್ನು ಕೆಲವರು ಪಕ್ಷದ ಮುಖಂಡರ ಗಮನಕ್ಕೆ ತಂದಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಷಾ ಹೊರತುಪಡಿಸಿದರೆ, ● 6ನೇ ಪುಟಕ್ಕೆ

ಮೈಸೂರು ಭಾಗದಲ್ಲಿ ಸ್ಟಾರ್ ಪ್ರಚಾರಕರ ಅಬ್ಬರ

ಮತದಾರನ ಸೆಳೆಯಲು ಬಿಜೆಪಿ ಕಾಂಗ್ರೆಸ್, ಜೆಡಿಎಸ್ ರಣತಂತ್ರ

ಮೈಸೂರು, ಮೇ 4(ಆರ್‌ಕೆ)–ಚುನಾವಣೆಗೆ ದಿನಗಣನೆ ಆರಂಭವಾಗುತ್ತಿದ್ದಂತೆಯೇ ಮೈಸೂರು ಭಾಗದಲ್ಲಿ ಬಿಜೆಪಿ, ಕಾಂಗ್ರೆಸ್ ಮತ್ತು ಜೆಡಿಎಸ್ ಪಕ್ಷಗಳು ಮತದಾರರ ಸೆಳೆಯಲು ಸ್ಟಾರ್ ಪ್ರಚಾರಕರ ಮೊರೆ ಹೋಗಿವೆ.

ಕರ್ನಾಟಕದಲ್ಲಿ ಅಧಿಕಾರದ ಗದ್ದುಗೆ ಹಿಡಿಯಬೇಕೆಂದು ಹಾತೊರೆಯುತ್ತಿರುವ ಈ ಮೂರೂ ರಾಜಕೀಯ ಪಕ್ಷಗಳ ಘಟಾನುಘಟಿ ನಾಯಕರಷ್ಟೇ ಅಲ್ಲದೇ ಸೆಲೆಬ್ರಿಟಿಸ್‌ಗಳಿಂದ ಕ್ಷೇತ್ರಗಳಲ್ಲಿ ರೋಡ್ ಶೋ, ಸಾರ್ವಜನಿಕ ಸಭೆ, ಸಮಾವೇಶಗಳನ್ನು ನಡೆಸುವ ಮೂಲಕ ಮತ ಸೆಳೆಯಲು ಇನ್ನಿಲ್ಲದ ಕಸರತ್ತು ನಡೆಸುತ್ತಿವೆ. ಚುನಾವಣೆಗೆ 6 ದಿನವಷ್ಟೇ ಬಾಕಿ ಇರುವಾಗ ರಾಜ್ಯದ ಗಮನ ಸೆಳೆದಿರುವ ● 6ನೇ ಪುಟಕ್ಕೆ

ಶನಿವಾರ, ಭಾನುವಾರ ಬೆಂಗಳೂರಲ್ಲಿ ಪ್ರಧಾನಿ ಮೋದಿ 40 ಕಿಮೀ ರೋಡ್ ಶೋ

ಬೆಂಗಳೂರು, ಮೇ4(ಕೆಎಂಶಿ)–ರಾಜಧಾನಿಯಲ್ಲಿ



ಹೆಚ್ಚು ಕ್ಷೇತ್ರಗಳನ್ನು ಗೆದ್ದರೆ ಅಧಿಕಾರದ ಚುಕ್ಕಾಣಿ ಹಿಡಿಯಬಹುದೆಂಬ ಹಿನ್ನೆಲೆಯಲ್ಲಿ ಪ್ರಧಾನಿ ನರೇಂದ್ರ ಮೋದಿ, ಎರಡು ದಿನಗಳ ಕಾಲ ಬೃಹತ್ ರೋಡ್ ಶೋ ಹಮ್ಮಿಕೊಂಡಿದ್ದಾರೆ. ಬೆಂಗಳೂರು ನಗರ ಸೇರಿದಂತೆ ನೆರೆಹೊರೆಯ 28 ಕ್ಷೇತ್ರಗಳು ಬರಲಿದ್ದು, ಇಲ್ಲಿ ಹೆಚ್ಚು ಸ್ಥಾನ ಗಳಿಸಲು ಬಿಜೆಪಿ ಕಾಂಗ್ರೆಸ್ ಸದಾ ಪೈಪೋಟಿ ನಡೆಸುತ್ತಿವೆ. ನಗರ ಪ್ರದೇಶದ ಸುಶಿಕ್ಷಿತ ಮತದಾರರು ಸದಾ ಬಿಜೆಪಿಯ ಪರ ಇರುತ್ತಾರೆ ಎಂಬ ವಿಶ್ವಾಸದ ಹಿನ್ನೆಲೆಯಲ್ಲಿ ಪ್ರಧಾನಿಯವರು ಈ ಮತದಾರರ ಮನ ಗೆಲ್ಲಲು ಎರಡು ದಿನಗಳ ಕಾಲ ಬೆಂಗಳೂರಿನಲ್ಲಿ ತಂಗಲಿದ್ದಾರೆ.

ಶನಿವಾರ ಎರಡು ಹಂತದಲ್ಲಿ 27 ಕಿಲೋ ಮೀಟರ್ ಉದ್ದದ ರೋಡ್ ಶೋ ನಡೆಸಿದರೆ, ಮರು ದಿನ ಬೆಳಿಗ್ಗೆ ಭಾನುವಾರ ಮತ್ತೆ 13 ಕಿಲೋ ಮೀಟರ್ ರೋಡ್ ಶೋ ನಡೆಸ ಲಿದ್ದಾರೆ. ಈ ಮೊದಲು ಶನಿವಾರವೇ ಬೆಳಿಗ್ಗೆಯಿಂದ ರಾತ್ರಿಯವರೆಗೂ 18 ವಿಧಾನಸಭಾ ಕ್ಷೇತ್ರದ ವ್ಯಾಪ್ತಿ ಯಲ್ಲಿ ರೋಡ್ ಶೋ ನಡೆಸಲು ತೀರ್ಮಾನ ಮಾಡಲಾಗಿತ್ತು. ಬೆಂಗ ಳೂರು ನಗರಕ್ಕೆ ಒತ್ತುಕೊಡಬೇಕೆಂಬ ಉದ್ದೇಶದಿಂದ ತಮ್ಮ ಗುಲ್ಬರ್ಗ ಪ್ರವಾಸವನ್ನು ರದ್ದುಗೊಳಿಸಿ, ಈ ಭಾಗ ದಲ್ಲೇ ಪಕ್ಷದ ಪರವಾಗಿ ಮತಯಾಚನೆ ಮಾಡಲಿದ್ದಾರೆ. ರೋಡ್ ಶೋಗೆ ಹತ್ತು ಲಕ್ಷ ● 6ನೇ ಪುಟಕ್ಕೆ

ದಸರೆಯಲ್ಲಿ 14 ಬಾರಿ ಅಂಬಾರಿ ಹೊತ್ತಿದ್ದ ಬಲರಾಮ ಅಸ್ವಸ್ಥ

ಹುಣಸೂರು: ವಿಶ್ವ ವಿಖ್ಯಾತ ಮೈಸೂರು ದಸರೆಯಲ್ಲಿ 14 ಬಾರಿ ಅಂಬಾರಿ ಹೊತ್ತಿರುವ ಬಲರಾಮ ತೀವ್ರ ಅಸ್ವಸ್ಥಗೊಂಡಿದ್ದು, ನಾಗರಹೊಳೆ ಉದ್ಯಾನದ ಹುಣಸೂರು ರೇಂಜ್‌ನ ಭೀಮನಕಟ್ಟೆ ಆನೆ ಶಿಬಿರದಲ್ಲಿ ಪಶು ವೈದ್ಯರ ತಂಡ ಚಿಕಿತ್ಸೆ ನೀಡುತ್ತಿದೆ. ಸುಮಾರು 67 ವರ್ಷದ ಬಲರಾಮನಿಗೆ ಕಳೆದ ಹತ್ತು ದಿನಗಳಿಂದ ಬಾಯಲ್ಲಿ ಹುಣ್ಣಾಗಿ ನಿತ್ರಾಣಗೊಂಡಿದ್ದ. ಟಿಬಿ(ಕ್ಷಯ) ಇರಬಹುದೆಂದು ವೈದ್ಯರು ಶಂಕಿಸಿದ್ದು, ಪರೀಕ್ಷಾ ವರದಿ ಬಂದ ನಂತರವಷ್ಟೆ ಕಾಯಿಲೆ ಕುರಿತು ನಿಖರವಾಗಿ ತಿಳಿಯಲಿದೆ.



ಸ್ಥಳದಲ್ಲೇ ಬೀಡು ಬಿಟ್ಟಿರುವ ತಜ್ಞರು: ಆಹಾರ ಸೇವಿಸಲು, ನೀರು ಕುಡಿಯಲು ಆಗದಂತಹ ಸ್ಥಿತಿ ಉಂಟಾಗಿದ್ದರಿಂದ ನಾಗರಹೊಳೆ ಪಶುವೈದ್ಯ ಡಾ.ರಮೇಶ್ ಸ್ಥಳದಲ್ಲೇ ಮೊಕ್ಕಾಂ ಹೂಡಿ ಚಿಕಿತ್ಸೆ ನೀಡುತ್ತಿದ್ದಾರೆ. ನಾಗರಹೊಳೆ ಅಭಯಾರಣ್ಯ ಮುಖ್ಯಸ್ಥ ಹರ್ಷಕುಮಾರ್ ಚಿಕ್ಕನರಗುಂದ ಮಾರ್ಗದರ್ಶನದಲ್ಲಿ ಆರ್‌ಎಫ್‌ಓ ರತ್ನಾಕರ್, ಡಿಆರ್‌ಎಫ್‌ಓ ಸಿದ್ದರಾಜು ನೇತೃತ್ವದ ತಂಡ ಹಾಗೂ ಬಲರಾಮನ ಮಾವುತ ತಿಮ್ಮ, ಕವಾಡಿ ಮಂಜನಾಥ, ಇನ್ನಿತರೆ ಸಿಬ್ಬಂದಿ ಸ್ಥಳದಲ್ಲೇ ಇದ್ದು, ಅಸ್ವಸ್ಥ ಬಲರಾಮನ ಆರೈಕೆಯಲ್ಲಿ ತೊಡಗಿದ್ದಾರೆ.

ಎಂಡೋಸ್ಕೋಪಿ ವರದಿ ಬರಬೇಕು: ತೀವ್ರ ಅಸ್ವಸ್ಥಗೊಂಡಿರುವ ಹಿನ್ನೆಲೆಯಲ್ಲಿ ಪಶುವೈದ್ಯ ಡಾ.ಚೆಟ್ಟಿಯಪ್ಪ, ಡಾ.ಮದನ್, ಡಾ.ರಮೇಶ್ ತಂಡ ಪರಿಶೀಲಿಸಿದೆ. ಅಲ್ಲದೇ ಮೈಸೂರು ಅರಮನೆ ರಾಜ ಕುಟುಂಬದವರ ನೆರವಿನಿಂದ ಪೋರ್ಟಬಲ್ ● 6ನೇ ಪುಟಕ್ಕೆ

ಭಜರಂಗದಳ ನಿಷೇಧಿಸುವ ಕಾಂಗ್ರೆಸ್ ಪ್ರಸ್ತಾಪ: ಮೈಸೂರಲ್ಲಿ ಮೊಳಗುತ್ತಿದೆ ಹನುಮಾನ್ ಚಾಲೀಸಾ

ಮೈಸೂರು, ಮೇ 4(ಎಸ್‌ಬಿಡಿ)– ಮೈಸೂರಿನ ವಿವಿಧೆಡೆ ಹಿಂದು ಸಂಘಟನೆಗಳ ವತಿಯಿಂದ ಹನುಮಾನ್ ಚಾಲೀಸಾ ಪಾರಾಯಣದ ಮೂಲಕ ಭಜರಂಗದಳ ನಿಷೇಧಿಸುವುದಾಗಿ ಚುನಾವಣಾ ಪ್ರಣಾಳಿಕೆಯಲ್ಲಿ ಪ್ರಕಟಿಸಿರುವ ಕಾಂಗ್ರೆಸ್ ನಡೆಯನ್ನು ಖಂಡಿಸಲಾಯಿತು.

ಶಿವರಾಂಪೇಟೆಯ ತ್ರಿಪುರ ಭೈರವಿ ಮಠದ ಆಂಜನೇಯ ದೇಗುಲದಲ್ಲಿ ಶ್ರೀ ಕೃಷ್ಣ ಮೋಹನಾನಂದ ಗಿರಿ ಗೋಸ್ವಾಮಿಜಿಯವರ ಸಾನಿಧ್ಯದಲ್ಲಿ ಮೈಸೂರು ಹಿಂದೂಪರ ಸಂಘಟನೆಗಳ ಒಕ್ಕೂಟದ ವತಿಯಿಂದ ಹನುಮಾನ್ ಚಾಲೀಸ್ ಪಠಿಸಲಾಯಿತು. ಶ್ರೀರಾಮಚಂದ್ರ ಹಾಗೂ ಹನುಮಂತನಿಗೆ ಜೈಕಾರ ಹಾಕಲಾಯಿತು. ಅಲ್ಲದೆ ದೇವರಿಗೆ ವಿಶೇಷ ಪೂಜೆ ಸಲ್ಲಿಸಲಾಯಿತು. ಒಕ್ಕೂಟದ ಸಂಚಾಲಕ ಮೈಕಾ. ಪ್ರೇಮ್‌ಕುಮಾರ್ ಮಾತನಾಡಿ, ಭಜರಂಗದಳವನ್ನು ನಿಷೇಧಿಸುವ ಕಾಂಗ್ರೆಸ್‌ನ ನಿಲುವು ಸರಿಯಲ್ಲ. ಹಿಂದೂಗಳನ್ನು ಹತ್ತಿಕ್ಕುವ ಪ್ರಯತ್ನ ಬಹಳ ದಿನ ನಡೆಯಲ್ಲ. ಭಜರಂಗದಳ ಯಾವಾಗಲೂ ರಾಷ್ಟ್ರೀಯ ವಿರೋಧಿ ಕೆಲಸ ಮಾಡಿಲ್ಲ. ನೈಸರ್ಗಿಕ ವಿಪತ್ತುಗಳಲ್ಲಿ ಜನರ ರಕ್ಷಣೆ ಮಾಡಿದೆ. ಕಾಂಗ್ರೆಸ್ ಈ ರೀತಿ ಮುಂದುವರೆದರೆ ಹಿಂದೂಗಳ ಕೋಪಕ್ಕೆ ಗುರಿಯಾಗುವುದು ನಿಶ್ಚಿತ ಎಂದು ಹೇಳಿದರು. ಮಾಜಿ ಕಾರ್ಪೋರೇಟರ್ ಪ್ರಶಾಂತ್ ಗೌಡ, ಹಿಂದೂಪರ ಸಂಘಟನೆಗಳ ಮುಖಂಡರಾದ ಪ್ರದೀಶ್ ಕುಮಾರ್, ಸಂಜಯ್, ರಾಕೇಶ್ ಭಟ್, ಪ್ರಶಾಂತ್, ಅನೂಪ್ ಸಾರಸ್ವತ್ ಮತ್ತಿತರರು ಭಾಗವಹಿಸಿದ್ದರು.



ತ್ರಿಪುರ ಭೈರವಿ ಮಠದ ಆಂಜನೇಯ ದೇಗುಲದಲ್ಲಿ ಹನುಮಾನ್ ಚಾಲೀಸಾ ಪಾರಾಯಣ.



ಶ್ರೀ ಕಾಶಿಮಠ ಶ್ರೀ ರಾಮಮಂದಿರದಲ್ಲಿ ಹನುಮನ ಸ್ಮರಣೆ...

ಶ್ರೀಕಾಶಿಮಠ: ಇಲ್ಲಿನ ಶ್ರೀ ಕಾಶಿಮಠ ಶ್ರೀ ರಾಮಮಂದಿರ ದಲ್ಲೂ ಶ್ರೀನರಸಿಂಹ ಜಯಂತಿಯೊಂದಿಗೆ ಹನುಮಾನ್ ಚಾಲೀಸಾ ಪಾರಾಯಣ ಹಾಗೂ ಮಹಾಪೂಜೆ ನೆರವೇರಿಸಲಾಯಿತು. ಶ್ರೀ ಕಾಶಿಮಠ ಶ್ರೀ ರಾಮಮಂದಿರದ ಅಧ್ಯಕ್ಷ ಡಾ. ಜಗನ್ನಾಥ ಶೆಣೈ, ಕಾರ್ಯದರ್ಶಿ ರಾಮಪ್ರಸಾದ್ ಕಾಮತ್, ಉಪಾಧ್ಯಕ್ಷ ಮಹೇಶ್ ಕಾಮತ್, ಕೋಶಾಧಿಕಾರಿ ಗುರುಪ್ರಸಾದ್ ಹೆಗಡೆ ಹಾಗೂ ಸಮಿತಿಯ ಸದಸ್ಯರು ಸೇರಿದಂತೆ ನೂರಾರು ಮಂದಿ ಪಾಲ್ಗೊಂಡಿದ್ದರು. ಮೈಸೂರಿನ ವಿದ್ಯಾರಣ್ಯಪುರದಲ್ಲಿರುವ ಗುರುದೇವಾ ಶ್ರಮದಲ್ಲಿ ಹಿಂದೂ ಕಾರ್ಯಕರ್ತರು ಹನುಮ ಭಜನೆ ಮೂಲಕ ಕಾಂಗ್ರೆಸ್ ನಡೆಯನ್ನು ಖಂಡಿಸಿದರು. ಈ ವೇಳೆ ಹಿಂದೂ ಸಮಿತಿ ಅಧ್ಯಕ್ಷ ವಿಕಾಸ್ ಶಾಸ್ತ್ರಿ ಮಾತನಾಡಿ, ಬಿಜೆಪಿ ನೇತೃತ್ವದ ಸರ್ಕಾರ ಈಗಾಗಲೇ ಪಿಎಫ್‌ಐ ಸಂಘಟನೆ ನಿಷೇಧಿಸಿದೆ. ಈ ಮೂಲಕ ಅದರ ಕಾನೂನು ಬಾಹಿರ ಚಟುವಟಿಕೆಗಳನ್ನು ಹತ್ತಿಕ್ಕುತ್ತಿದೆ. ಹೀಗಿರುವಾಗ ಕಾಂಗ್ರೆಸ್ ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ಮತ್ತೆ ಪಿಎಫ್‌ಐ ನಿಷೇಧಿಸುವುದಾಗಿ ತಿಳಿಸಿರುವುದು ಹಾಸ್ಯಾಸ್ಪದ. ಇದರೊಂದಿಗೆ ಭಜರಂಗದಳವನ್ನು ನಿಷೇಧಿಸುವುದಾಗಿ ಹೇಳಿರುವುದು ಖಂಡನೀಯ. ಕಾಂಗ್ರೆಸ್ ತನ್ನ ಹಿಂದೂ ದ್ವೇಷ ಪೂರಿತ ನಿಲುವಿನಿಂದ ಭಜರಂಗದಳದ ಮೇಲೆ ಸೇಡು ತೀರಿಸಿಕೊಳ್ಳಲು ಹೊರಟಂತಿದೆ. ಈ ಚಿಂತನೆ ಮುಂದುವರೆದರೆ ಹಿಂದು ಕಾರ್ಯಕರ್ತರು ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವನ್ನೇ ಬ್ಯಾನ್ ಮಾಡುತ್ತೇವೆ ಎಂದು ಹೇಳಿದರು.

ವಿಶ್ವ ಹಿಂದೂ ಪರಿಷತ್ತಿನ ಕಾನೂನು ವಿಭಾಗದ ರಾಜ್ಯ ಸಂಚಾಲಕ ಪ್ರದೀಶ್ ಮಾತನಾಡಿ, ಭಜರಂಗದಳವು ಹಿಂದೂ ಸಮಾಜದ ಹಿತರಕ್ಷಣೆ ಜೊತೆಗೆ ಮಾನವೀಯ ನೆಲೆಗಟ್ಟಿನಲ್ಲಿ ಸಮಾಜಮುಖಿ ಕಾರ್ಯ ಮಾಡುತ್ತಿರುವ ದೇಶಪ್ರೇಮಿ ಸಂಘಟನೆ. ಗೋ ಹತ್ಯೆ, ಮತಾಂತರ ನಿಷೇಧ, ಲವ್ ಜಿಹಾದ್ ● 6ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ಮಾಲಿ : ಸ್ವಾಮಿ ಇನ್ನೂ ಮೂರು ಬಕೆಟ್ ಕೊಂಡ್ಕೋಬೇಕು.
ಯಜಮಾನ : ಯಾಕಂಯ್ಯಾ?
ಮಾಲಿ : ತೆಂಗಿನ ಗಿಡಕ್ಕೆ ದಿನಕ್ಕೆ ನಾಲ್ಕು ಬಕೆಟ್ ನೀರು ಹಾಕಿ ಅಂತ ಹೇಳಿದ್ರಿ, ಆದರೆ ಮನೇಲಿರೋದು ಒಂದೇ ಬಕೆಟ್!

ಮೈಸೂರು ಮಿತ್ರ
ಶುಕ್ರವಾರ, 5 ಮೇ 2023
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........
ಸಾಹಿತ್ಯ, ಸಂಸ್ಕೃತಿಗಳ ಒಲವಿಲ್ಲದ ಜನರು ಸುಖ, ಸಂತೋಷಗಳಿಂದ ಜೀವಿಸಲಾರರು –ಬರ್ನಾರ್ಡ್ ಷಾ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಅಜೀರ್ಣಕ್ಕೆ ಔಷಧಿ ತೆಗೊಂಡ್ರೆ ಔಷಧೀನೇ ಜೀರ್ಣವಾಗಲಿಲ್ಲ.

ನಿಮ್ಮ ಪತ್ರಗಳು

ಉಚಿತ ಯೋಜನೆಗಳು ಉತ್ಪಾದನಾ ಕ್ಷೇತ್ರಕ್ಕೆ ಮಾರಕ

ಮಾನ್ಯರೆ,

ಹೇಗಾದರೂ ಬಹುಮತ ಪಡೆಯಬೇಕೆಂಬ ದುರುದ್ದೇಶದಿಂದ ಎಲ್ಲಾ ಪಕ್ಷಗಳು ಉಚಿತ ಯೋಜನೆಗಳನ್ನು ಮತದಾರನಿಗೆ ನೀಡುವುದಾಗಿ ಪ್ರಣಾಳಿಕೆಯಲ್ಲಿ ಘೋಷಿಸಿ ಹೊಸ ಸರ್ಕಾರ ರಚಿಸಿದ ತಕ್ಷಣ ಅವುಗಳನ್ನು ಅನುಷ್ಠಾನಗೊಳಿಸುವುದಾಗಿ ಹೇಳಿಕೊಂಡಿವೆ. ಮಂಕು ಬೂದಿ ಎರಚಿ ಮತದಾರನ ಎರಡೂ ಕಿವಿಗಳಿಗೆ ಹೂವು ಮುಡಿಸಲು ಎಲ್ಲಾ ಪಕ್ಷಗಳು ಪೈಪೋಟಿ ನಡೆಸುತ್ತಿರುವುದು ಮತದಾರನಿಗೆ ತಿಳಿಯದೇನಲ್ಲ! ಮಾನ್ಯ ಅಟಲ್ ಬಿಹಾರಿ ವಾಜಪೇಯಿಯವರ ಆಶಯ; ಶಿಕ್ಷಣ, ಆರೋಗ್ಯ ಮತ್ತು ನ್ಯಾಯ ಮೂರನ್ನು ಬಿಟ್ಟು ಯಾವುದನ್ನೂ ಉಚಿತವಾಗಿ ನೀಡಬಾರದು. ಬದಲಾಗಿ ಉದ್ಯೋಗ ಸೃಷ್ಟಿಸಬೇಕು ಎಂಬುದು. ಈಗ ಗದ್ದುಗೆ ಹಿಡಿಯುವುದಕ್ಕಾಗಿ ಎಲ್ಲವೂ ತಲೆಕೆಳಕಾಗಿವೆ.

ಉಚಿತ ಯೋಜನೆಗಳನ್ನು ಜಾರಿಗೊಳಿಸಲು ಬೇಕಾಗುವ ಮೊತ್ತವನ್ನು ರಾಜ್ಯದ ಸಂಪನ್ಮೂಲದಿಂದ ಕ್ರೋಢೀಕರಿಸಲು ಸಾಧ್ಯವಿದೆಯೇ? ಸರ್ಕಾರಗಳನ್ನು ನಡೆಸಿ ಅನುಭವ ಇರುವವರೇ ಉಚಿತ ಯೋಜನೆಗಳನ್ನು ಘೋಷಿಸುತ್ತಾರಲ್ಲ, ಸರ್ಕಾರದ ಬೊಕ್ಕಸಕ್ಕೆ ಬರುವ ಹಣ ತೆರಿಗೆದಾರನದು. ಅವನ ಅಪ್ಪಣೆ ಇಲ್ಲದೆ ಕೇವಲ ಮತ ಪಡೆಯುವುದಕ್ಕಾಗಿ ಪ್ರಣಾಳಿಕೆಯನ್ನು ಸಿದ್ಧಪಡಿಸುತ್ತಿರುವುದು ಎಷ್ಟರ ಮಟ್ಟಿಗೆ ಸರಿ. ಜನರನ್ನು ಮೋಸಗೊಳಿಸುವುದರಿಂದ ತಪ್ಪಿಸಲು ರಾಜಕೀಯ ಪಕ್ಷಗಳು ಪ್ರಣಾಳಿಕೆಯನ್ನು ಸಿದ್ಧಪಡಿಸಿ ಅದರ ಸಾಧಕ–ಬಾಧಕಗಳ ವಿಶ್ಲೇಷಣೆಗೆ ಹಾಗೂ ಅವುಗಳನ್ನು ಜಾರಿಗೊಳಿಸಲು ಆರ್ಥಿಕವಾಗಿ ಸದೃಢವಾಗಿದೆಯೇ ಎಂಬುದರ ಬಗ್ಗೆ ಅಭಿಪ್ರಾಯ ಮತ್ತು ಅನುಮೋದನೆಯನ್ನು ಆರ್ಥಿಕ ಇಲಾಖೆಯಿಂದ ಪಡೆದು ನಂತರ ಚುನಾವಣೆಗೆ ಮೊದಲು ಘೋಷಿಸುವಂತಾಗಬೇಕು. ಇಲ್ಲದಿದ್ದಲ್ಲಿ ರಾಜ್ಯವು ಆರ್ಥಿಕ ಸಂಕಷ್ಟದಿಂದ ಸಾಲದ ಸುಳಿಗೆ ಸಿಲುಕುವುದು ಅಥವಾ ಉಚಿತ ಯೋಜನೆಯ ಫಲಾನುಭವಿಗಳೂ ಸೇರಿದಂತೆ ಎಲ್ಲರೂ ದುಪ್ಪಟ್ಟು ತೆರಿಗೆಯನ್ನು ಪಾವತಿಸಬೇಕಾಗುತ್ತದೆ.

ಒಟ್ಟಿನಲ್ಲಿ ಮತದಾರನು ಗೊಂದಲದಲ್ಲಿ ಇರುವುದು ಸತ್ಯ(ಹಣಕ್ಕಾಗಿ ಮತವನ್ನು ಮಾರಿಕೊಳ್ಳುವ ಮತಾಂಧರನ್ನು ಹೊರತುಪಡಿಸಿ), ಮತವನ್ನು ಯಾರಿಗೇ ಕೊಟ್ಟರೂ ಮೂಲಭೂತ ಸೌಕರ್ಯಗಳು ಹಾಗೂ ನಿರುದ್ಯೋಗ ಸಮಸ್ಯೆಗಳ ನಿವಾರಣೆಗೆ ಒತ್ತು ಕೊಡದೆ ಉಚಿತ ಯೋಜನೆಗಳನ್ನು ನೀಡುವುದು ಸಮಂಜಸವಲ್ಲ. ಇದರಿಂದ ಕುಳಿತು ತಿನ್ನುವವರು ಹೆಚ್ಚಾಗುವುದರಿಂದ ಉತ್ಪಾದನೆ ಕ್ಷೇತ್ರಕ್ಕೆ ಭಾರಿ ಹೊಡೆತವಾಗುವುದು. ಉತ್ಪಾದನೆ ಕುಂಠಿತವಾದರೆ ಅಗತ್ಯ ವಸ್ತುಗಳ ಕೊರತೆಯಿಂದ ಬೆಲೆಗಳು ಗಗನಕ್ಕೇರಿ, ಕಡೆಗೆ ದಿವಾಳಿಯತ್ತ ರಾಜ್ಯ ಸಾಗುತ್ತಿದೆ. ಇದು ಬೇಕೆ ಮತದಾರ ಪ್ರಭುಗಳೇ?, ಯೋಚಿಸಿ ಮತ ಚಲಾಯಿಸಿ.

–ಮಿರ್ಲೆ ಚಂದ್ರಶೇಖರ, ಲೇಖಕರು, ಮೈಸೂರು.

ವಿದ್ಯಾರ್ಥಿಗಳ ಹಿತ ಕಾಯುವುದೇ?

ಮಾನ್ಯರೆ,

ವಿವಿಧ ರೀತಿಯ ವೃತ್ತಿಪರ ಹಾಗೂ ಪದವಿ ಕೋರ್ಸ್‌ಗಳಿಗೆ ಪ್ರವೇಶ ಪಡೆಯಲು ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಪ್ರವೇಶ ಪರೀಕ್ಷೆ ಕಡ್ಡಾಯವಾಗಿರುತ್ತದೆ. ಹೀಗಿರುವಾಗ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಪೋಷಕರು ತಮ್ಮ ಮಕ್ಕಳುಗಳು ಉತ್ತಮ ಭವಿಷ್ಯ ರೂಪಿಸಿಕೊಳ್ಳಬೇಕೆಂಬ ಆಸೆ ಹೊತ್ತು ಸಾಲವಾದ್ರೂ ಮಾಡಿ ಖಾಸಗಿ ಟ್ಯೂಷನ್ ಸೆಂಟರ್‌ಗಳಿಗೆ ಸೇರಿಸಿರುತ್ತಾರೆ. ಈಗಾಗಲೇ ದ್ವಿತೀಯ ಪಿಯುಸಿ ಫಲಿತಾಂಶ ಹೊರಬಂದಿದ್ದು, ಮುಂದಿನ ವ್ಯಾಸಂಗಕ್ಕಾಗಿ ಅರ್ಹತೆ ಪರೀಕ್ಷೆ ಬರೆಯುವ ಹುಮ್ಮಸ್ಸಿನಲ್ಲಿದ್ದಾರೆ. ಆದರೆ K-CET ಪರೀಕ್ಷೆ 20, 21 ಮೇ– 2023, ICAR–ಪರೀಕ್ಷೆ 21 ರಿಂದ 31 ಮೇ–2023 ರವರೆಗೆ ಪರೀಕ್ಷೆಗಳು ನಡೆಸುತ್ತೇವೆಂದು ತಮ್ಮ ತಮ್ಮ ಜಾಲತಾಣಗಳಲ್ಲಿ ಹಾಕಿರುತ್ತಾರೆ. ಇದರಿಂದ ಪ್ರತಿಭಾವಂತರಿಗೆ ಅನ್ಯಾಯವಾಗುವ ಸಾಧ್ಯತೆಗಳಿವೆ. ಪರೀಕ್ಷೆಯ ಪ್ರಾಧಿಕಾರ ಹಾಗೂ ಇಲಾಖೆಗಳು ಸಾವಿರಾರು ಬಡ ಮತ್ತು ಮಧ್ಯಮ ವರ್ಗದ ಯುವ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಮೇಲಿನ ಪರೀಕ್ಷೆಗಳಿಗೆ ಭಾಗವಹಿಸಲು ಬೇರೆ ಬೇರೆ ದಿನಾಂಕಗಳಂದು ನಿಗದಿಪಡಿಸಿ ಎಲ್ಲರಿಗೂ ಅವಕಾಶ ಕಲ್ಪಿಸಿಕೊಡಬೇಕೆಂದು, ಈ ಬಗ್ಗೆ ಸಂಬಂಧಪಟ್ಟ ಇಲಾಖೆ ಹಾಗೂ ಅಧಿಕಾರಿಗಳು ಅನುಕೂಲ ಮಾಡಿಕೊಡಬೇಕೆಂದು ವಿದ್ಯಾರ್ಥಿಗಳ ಪರವಾಗಿ ಮನವಿ.

–ಕೊಪ್ಪಲು ರಮೇಶ, ಮಾನಸಗಂಗೋತ್ರಿ, ಮೈಸೂರು.

ಇದೇ ಕಡೆಯ ಚುನಾವಣೆ

ಮಾನ್ಯರೆ,

ಕೆಲವು ರಾಜಕಾರಣಿಗಳು ಮತದಾರರ ಅನುಕಂಪವನ್ನು ಗಳಿಸಲು "ಇದೇ ನನ್ನ ಕೊನೆಯ ಚುನಾವಣೆ" ಎಂಬ ಘೋಷಣೆಯನ್ನು ಕಳೆದ ಹಲವಾರು ವರ್ಷಗಳಿಂದ ಮೊಳಗಿಸುತ್ತಿರುವುದನ್ನು ಪ್ರಜ್ಞಾವಂತ ಮತದಾರರು ಗಮನಿಸುತ್ತಿರಬಹುದು. ಈ ರೀತಿ ಪ್ರತಿ ಚುನಾವಣೆಯಲ್ಲೂ ಅವರು ಹೇಳುತ್ತಾ ಮತದಾರರಿಗೆ ಮಂಕುಬೂದಿ ಎರಚುತ್ತಿರುವುದು ಸಹಾ ದಾಖಲಾಗುತ್ತಿದೆ.

ರಾಜಕೀಯದಲ್ಲಾಗಲಿ ಅಥವಾ ಇತರ ಯಾವುದೇ ರಂಗದಲ್ಲಾಗಲಿ ಯಾರೂ ಅನಿವಾರ್ಯವಲ್ಲ. ಹೊಸ ನೀರು ಬಂದಾಗ ಹಳೆಯ ನೀರು ಕೊಚ್ಚಿಕೊಂಡು ಹೋಗುವುದು ಅನಿವಾರ್ಯ ಮತ್ತು ಪ್ರಕೃತಿ ಧರ್ಮ. ಇದೇ ನನ್ನ ಕಡೆಯ ಚುನಾವಣೆಯೆಂಬುದು ಭಾವನಾತ್ಮಕ ಬ್ಲಾಕ್‌ಮೇಲ್ ಅಲ್ಲದೇ ಬೇರೇನೂ ಅಲ್ಲ. ಆದ್ದರಿಂದ ಇನ್ನು ಮುಂದಾದರೂ ರಾಜಕಾರಣಿಗಳು ಈ ರೀತಿಯ ಘೋಷಣೆ ಮೊಳಗಿಸುವುದು ಬೇಡ.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

ಚಿತ್ರನಟರ ರಾಜಕೀಯ ಪಕ್ಷಗಳಿಗೆ ಬೆಂಬಲ..... ಅಭಿಮಾನಿಗಳಲ್ಲಿ ಗೊಂದಲ

ಮಾನ್ಯರೆ,

ಇತ್ತೀಚೆಗೆ ಕೆಲವು ಸಿನಿಮಾ ನಟರು ರಾಜಕೀಯ ಪ್ರಚಾರಕ್ಕೆ ಬಂದಿದ್ದಾರೆ. ಸುದೀಪ್ ಮುಖ್ಯಮಂತ್ರಿ ಹೇಳುವ ಅಭ್ಯರ್ಥಿ ಪರ ಪ್ರಚಾರ ಮಾಡಿ ಬೆಂಬಲಿಸುತ್ತೇನೆ ಎಂದು ಹೇಳಿ ಬಿಜೆಪಿಗೆ ಬೆಂಬಲ ನೀಡಿದರೆ, ಶಿವರಾಜ್ ಕುಮಾರ್ ಕಾಂಗ್ರೆಸ್ ಪರ ಪ್ರಚಾರಕ್ಕೆ 'ಕೈ' ಜೋಡಿಸಿದ್ದಾರೆ. ಇದರಲ್ಲಿ ತಪ್ಪೇನೂ ಇಲ್ಲ. ಇದು ಅವರವರ ನಿರ್ಧಾರಗಳು. ಆದರೆ ಇವರ ಅಭಿಮಾನಿಗಳಲ್ಲಿ ಬೇರೆ ಬೇರೆ ಪಕ್ಷಗಳನ್ನು ಬೆಂಬಲಿಸುವವರು ಇರುತ್ತಾರೆ. ಇಂತಹ ಅಭಿಮಾನಿಗಳಿಗೆ ತಾವು ಮೊದಲಿನಿಂದಲೂ ಬೆಂಬಲಿಸುತ್ತಿದ್ದ ಪಕ್ಷಕ್ಕೆ ನಿಷ್ಠನಾಗಿರಬೇಕಾ ಅಥವಾ ತನ್ನ ನೆಚ್ಚಿನ ನಟ ಪ್ರಚಾರ ಮಾಡುವ ಪಕ್ಷಕ್ಕೆ ಬೆಂಬಲಿಸಬೇಕಾ ಅಂತ ಒಮ್ಮೆಯಾದರೂ ಗೊಂದಲ ಮೂಡದೇ ಇರದು. ಈ ವಿಷಯದಲ್ಲಿ ಯಾವ ರೀತಿಯ ಒತ್ತಡವಿದ್ದರೂ ಅಭಿಮಾನಿ 'ದೇವರು' ಗಳಿಗಾಗಿ ರಾಜಕೀಯ ವಿಷಯದಿಂದ ದೂರವಿದ್ದ ಡಾ.ರಾಜ್‌ಕುಮಾರ್ ಅವರ ನಡೆ ಅನುಕರಣೀಯ.

–ರಾಘವೇಂದ್ರ ಜೋಯಿಸ್, ಮೈಸೂರು

ಕೆ.ಆರ್.ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಶ್ರೀವತ್ಸ ಬಿರುಸಿನ ಮತ ಯಾಚನೆ



ಗೌರಿಶಂಕರನಗರದಲ್ಲಿ ವೀರಗಾಸೆ ಕಲಾವಿದರೊಂದಿಗೆ ಬಡಾವಣೆ ಜನ ಶ್ರೀವತ್ಸ ಅವರನ್ನು ಆತ್ಮೀಯವಾಗಿ ಸ್ವಾಗತಿಸಿದರು.

ಮೈಸೂರು, ಮೇ 4(ಎಸ್‌ಬಿಡಿ)– ಕೃಷ್ಣರಾಜ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಟಿ.ಎಸ್.ಶ್ರೀವತ್ಸ, ಗೌರಿಶಂಕರನಗರ, ಗುಂಡೂರಾವ್‌ನಗರ ಹಾಗೂ ಕನಕಗಿರಿಯಲ್ಲಿ ಗುರುವಾರ ಮತ ಯಾಚಿಸಿದರು.

ಗೌರಿಶಂಕರನಗರದಲ್ಲಿ ವೀರಗಾಸೆ ಕಲಾವಿದರೊಂದಿಗೆ ಬಡಾವಣೆ ಜನ ಶ್ರೀವತ್ಸ ಅವರನ್ನು ಆತ್ಮೀಯವಾಗಿ ಸ್ವಾಗತಿಸಿದರು. ವಿವಿಧೆಡೆ ಮಾಲೆ ಹಾಕಿ ಅಭಿನಂದಿಸಿದರು. ಮನೆ ಮನೆಗೆ ತೆರಳಿ ಕರಪತ್ರ ನೀಡುವ ಮೂಲಕ ಪ್ರಚಾರ ನಡೆಸಿದ ಅವರು, ಮತ ನೀಡಿ ಆಶೀರ್ವದಿಸುವಂತೆ ಮನವಿ ಮಾಡಿದರು. ಬಿಜೆಪಿಯ ಅನೇಕ ಮುಖಂಡರು ಹಾಗೂ ಕಾರ್ಯಕರ್ತರು ಪ್ರಚಾರದಲ್ಲಿ ಭಾಗವಹಿಸಿದ್ದರು.



ಕೆ.ಆರ್.ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಟಿ.ಎಸ್.ಶ್ರೀವತ್ಸ, ಗೌರಿಶಂಕರನಗರ, ಗುಂಡೂರಾವ್‌ನಗರ ಹಾಗೂ ಕನಕಗಿರಿಯಲ್ಲಿ ಗುರುವಾರ ಮತ ಯಾಚಿಸಿದರು.

ಪ್ರಚಾರದ ವೇಳೆ ಮಾತನಾಡಿದ ಶ್ರೀವತ್ಸ, ದೇಶದ ಸಮಗ್ರ ಅಭಿವೃದ್ಧಿ ಬಿಜೆಪಿಯ ಗುರಿಯಾಗಿದೆ. ಟೀಕೆ, ಆರೋಪಗಳ ನಡುವೆ ಬಿಜೆಪಿ ಸರ್ಕಾರ ಅಭಿವೃದ್ಧಿಗಷ್ಟೇ ಗಮನ ನೀಡಿ, ಆ ನಿಟ್ಟಿನಲ್ಲಿ ಸಮರ್ಥವಾಗಿ ಕೆಲಸ ಮಾಡಿದೆ. ಚುನಾವಣೆ ಹಿನ್ನೆಲೆಯಲ್ಲಿ ಬಿಜೆಪಿ ಪ್ರಜಾ ಪ್ರಣಾಳಿಕೆ ರೂಪಿಸಿ, ಹಲವು ಯೋಜನೆಗಳನ್ನು ಘೋಷಿಸಿದೆ. ಅಧಿಕಾರಕ್ಕೆ ಬಂದ ನಂತರ ನುಡಿದಂತೆ ನಡೆದುಕೊಳ್ಳಲಿದೆ ಎಂದು ಹೇಳಿದರು.

ವರ್ಷಕ್ಕೆ 3 ಸಿಲಿಂಡರ್ ಉಚಿತ: ರಾಜ್ಯದ ಬಿಪಿಎಲ್ ಕಾರ್ಡ್‌ದಾರರಿಗೆ ಮೂರು ಪ್ರಮುಖ ಹಬ್ಬಗಳಿಗೆ ಉಚಿತವಾಗಿ ಸಿಲಿಂಡರ್ ನೀಡಲಾಗುವುದು. ಯುಗಾದಿ, ಗಣೇಶಚತುರ್ಥಿ, ದೀಪಾವಳಿಯಲ್ಲಿ ಸೇರಿ ಒಟ್ಟು 3 ಬಾರಿ ಸಿಲಿಂಡರ್ ವಿತರಿಸಲಾಗುವುದು. ಪ್ರತಿದಿನ ಅರ್ಧ ಲೀಟರ್ ನಂದಿನಿ ಹಾಲನ್ನು ಉಚಿತವಾಗಿ ಪೂರೈಸಲಾಗುವುದು. ಇದರಿಂದ ಸಹಕಾರ ಹಾಲು ಒಕ್ಕೂಟದ ವ್ಯಾಪಾರ ವಹಿವಾಟು ಕೂಡ ಹೆಚ್ಚಲಿದೆ. ಶ್ರೀ ಅನ್ನ ಯೋಜನೆಯಡಿ ಬಡಕುಟುಂಬಗಳಿಗೆ ಒಟ್ಟು 10 ಕೆ.ಜಿ. ಸಿರಿಧಾನ್ಯ ವಿತರಿಸಲಾಗುವುದು. ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಅಟಲ್ ಆಹಾರ ಕೇಂದ್ರ, ವರ್ಷದಲ್ಲಿ ಒಂದು ಬಾರಿ ಹಿರಿಯ ನಾಗರಿಕರ ಆರೋಗ್ಯ ತಪಾಸಣೆ, ಏಕರೂಪ ನಾಗರಿಕ ಸಂಹಿತೆ ಸೇರಿದಂತೆ ಹಲವಾರು ಯೋಜನೆ ಈಡೇರಿಸಲು ಬಿಜೆಪಿ ಬದ್ಧವಾಗಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಉಡಿಗಾಲ ಮಹದೇವಪ್ಪ, ಅಶೋಕ, ಡಿ.ಪಿ.ಸುರೇಶ, ದೊಡ್ಡಿ ಶಿವು, ರವಿ, ರಾಣಿ, ಸಿದ್ಧಪ್ಪ, ಮೀನಾಕ್ಷಿ, ಶಾರದಾ, ಉಮಾ, ನಾಗರಾಜ್, ವನಜಾಕ್ಷಿ, ಮುತ್ತಣ್ಣ, ಸಂತೋಷ್‌ಕುಮಾರ್, ಮನು ಸೇರಿದಂತೆ ಅನೇಕ ಮುಖಂಡರು, ಕಾರ್ಯಕರ್ತರು ಉಪಸ್ಥಿತರಿದ್ದರು.

ಬ್ರಾಹ್ಮಣ ಸಂಘ ಸಂಸ್ಥೆಗಳ ಬೆಂಬಲ



ಮೈಸೂರು,ಮೇ 4(ಪಿಎಂ)– ಕೃಷ್ಣರಾಜ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಟಿ.ಎಸ್.ಶ್ರೀವತ್ಸ ಅವರನ್ನು ಬೆಂಬಲಿಸಿ, ಅತ್ಯಧಿಕ ಮತಗಳಿಂದ ಗೆಲ್ಲಿಸಬೇಕೆಂದು ಕ್ಷೇತ್ರದ ಮತದಾರರಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಹಾಗೂ ಜಿಲ್ಲಾ ಬ್ರಾಹ್ಮಣ ಮಹಾಸಭಾ ಸೇರಿದಂತೆ ವಿವಿಧ ಬ್ರಾಹ್ಮಣ ಸಂಘ ಸಂಸ್ಥೆಗಳು ಮನವಿ ಮಾಡಿವೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಮಾಜಿ ಸಭಾಪತಿ ರಘುರಾಂ ವಾಜಪೇಯಿ, ಕ್ಷೇತ್ರದ ಹಾಲಿ ಶಾಸಕರ ಹೊರತಾಗಿ ಬ್ರಾಹ್ಮಣ ಸಮುದಾಯದ ಸಮರ್ಥರೊಬ್ಬರಿಗೆ ಬಿಜೆಪಿ ಟಿಕೆಟ್ ನೀಡುವಂತೆ ಸಮುದಾಯದ ಮುಖಂಡರ ಕೋರಿಕೆಯಂತೆ ಟಿ.ಎಸ್.ಶ್ರೀವತ್ಸ ಅವರಿಗೆ ಟಿಕೆಟ್ ನೀಡಲಾಗಿದೆ ಎಂದರು.

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಅಧ್ಯಕ್ಷ ಅಶೋಕ್ ಹಾರನಹಳ್ಳಿ ಅವರ ನಿರ್ದೇಶನದಂತೆ ಬ್ರಾಹ್ಮಣ ಸಂಘ–ಸಂಸ್ಥೆಗಳು ಟಿ.ಎಸ್.ಶ್ರೀವತ್ಸ ಅವರನ್ನು ಬೆಂಬಲಿಸಲು ತೀರ್ಮಾನಿಸಿವೆ. ಅಂತೆಯೇ ಕ್ಷೇತ್ರದ ಮತದಾರರಲ್ಲೂ ಅವರನ್ನು ಬೆಂಬಲಿಸಲು ಕೋರುತ್ತೇವೆ ಎಂದು ಹೇಳಿದರು. ಕರ್ನಾಟಕ ಬ್ರಾಹ್ಮಣ ಹಿರಿಯ ನಾಗರಿಕ ವೇದಿಕೆ, ಸಂಧ್ಯಾ ಸುರಕ್ಷಾ ಟ್ರಸ್ಟ್, ಜಿಲ್ಲಾ ಬ್ರಾಹ್ಮಣ ಮಹಿಳಾ ಸಂಘ, ಅಖಿಲ ಕರ್ನಾಟಕ ಬ್ರಾಹ್ಮಣ ಯುವ ಮಹಾಸಭಾ, ಬ್ರಾಹ್ಮಣ ಧರ್ಮ ಸಹಾಯ ಸಭಾ ಪ್ರತಿಷ್ಠಾನ ಸೇರಿದಂತೆ ಸಮುದಾಯದ ಎಲ್ಲಾ ಸಂಘ ಸಂಸ್ಥೆಗಳು ಶ್ರೀವತ್ಸರನ್ನು ಬೆಂಬಲಿಸಲು ಮತದಾರರಲ್ಲಿ ಮನವಿ ಮಾಡಿವೆ ಎಂದು ತಿಳಿಸಿದರು. ವಂಗೀಪುರ ಮಠದ ಇಳೈ ಆಳ್ವಾರ್ ಸ್ವಾಮೀಜಿ, ಜಿಲ್ಲಾ ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಬಿ.ಆರ್.ನಟರಾಜ್ ಜೋಯಿಸ್, ಬ್ರಾಹ್ಮಣ ಧರ್ಮ ಸಹಾಯಸಭಾ ಅಧ್ಯಕ್ಷ ಶ್ರೀನಿವಾಸ್, ಜಿಲ್ಲಾ ಬ್ರಾಹ್ಮಣ ಮಹಾಸಭಾ ಮಹಿಳಾ ಅಧ್ಯಕ್ಷೆ ವಿಜಯಲಕ್ಷ್ಮೀ ಗೋಷ್ಠಿಯಲ್ಲಿದ್ದರು.



ಚಾಮುಂಡೇಶ್ವರಿ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ವಿ.ಕವೀಶ್‌ಗೌಡ ಅವರು ಯಡಹಳ್ಳಿಯಲ್ಲಿ ಮನೆ ಮನೆ ಪ್ರಚಾರ ಮಾಡಿದರು. ಈ ವೇಳೆ ಮಂಡಲದ ಅಧ್ಯಕ್ಷ ಗೆಜ್ಜಗಳ್ಳಿ ಮಹೇಶ್, ಪ್ರಧಾನ ಕಾರ್ಯದರ್ಶಿ ವೈ.ಟಿ.ರವಿ. ದಾರಿಪುರ ಡಿ.ಚಂದ್ರಶೇಖರ್ ಬೂತ್ ಅಧ್ಯಕ್ಷ ಸಚ್ಚಿದಾನಂದ, ಯಡಹಳ್ಳಿ ಷಣ್ಮುಖ, ಜಿಲ್ಲಾ ರೈತ ಮೋರ್ಚಾ ಅಧ್ಯಕ್ಷ ಗುರೂರು ನಂಜುಂಡಸ್ವಾಮಿ, ಜಿಲ್ಲಾ ಉಪಾಧ್ಯಕ್ಷ ಗುರೂರು ಶಿವು, ಅಂಗಡಿ ಸುರೇಶ್, ಹಾಲಿನ ಮಣಿ, ವೈ.ಎನ್.ನವೀನ್ ಇನ್ನಿತರರು ಉಪಸ್ಥಿತರಿದ್ದರು.

ಜನತಂತ್ರ ವ್ಯವಸ್ಥೆ ಉಳಿವಿಗಾಗಿ ಬಿಜೆಪಿ ಸೋಲಿಸಿ: ದಸಂಸ ಮನವಿ



ಮೈಸೂರು,ಮೇ 4(ಪಿಎಂ)– ಜನತಂತ್ರ ವ್ಯವಸ್ಥೆಯ ಉಳಿವಿಗಾಗಿ ಈ ಬಾರಿಯ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಗಳನ್ನು ಸೋಲಿಸುವಂತಹ ಸಾಮರ್ಥ್ಯ ಹೊಂದಿರುವ ಅಭ್ಯರ್ಥಿಗಳಿಗೆ ಮತ ನೀಡುವಂತೆ ದಲಿತ ಸಂಘರ್ಷ ಸಮಿತಿ ಮನವಿ ಮಾಡಿದೆ. ಜಿಲ್ಲಾ ಪತ್ರಕರ್ತರ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ದಲಿತ ಸಂಘರ್ಷ ಸಮಿತಿಯ ಜಿಲ್ಲಾ ಸಂಚಾಲಕ ಚೋರನಹಳ್ಳಿ ಶಿವಣ್ಣ, ಕೇಂದ್ರ ಮತ್ತು ರಾಜ್ಯದಲ್ಲಿ ಆಡಳಿತ ನಡೆಸುತ್ತಿರುವ ಬಿಜೆಪಿ, ಸುಳ್ಳು ಮತ್ತು ಭಾವನಾತ್ಮಕ ವಿಚಾರಗಳನ್ನು ಮುಂದಿಟ್ಟುಕೊಂಡು ಸಂಘ ಪರಿವಾರದ ಮೂಲಕ ಜಾತಿ–ಧರ್ಮದ ಹೆಸರಿನಲ್ಲಿ ಸಮಾಜದಲ್ಲಿ ಅಶಾಂತಿ ಮೂಡಿಸುತ್ತಿದೆ ಎಂದು ದೂರಿದರು. ಜನವಿರೋಧಿ, ಸಂವಿಧಾನ ವಿರೋಧಿ ಮತ್ತು ಕೋಮುವಾದಿ ಆಗಿರುವ ಬಿಜೆಪಿ ಸೋಲಿಸಬೇಕು. ಈ ನಿಟ್ಟಿನಲ್ಲಿ ಪರ್ಯಾಯವಾಗಿ ಕಾಂಗ್ರೆಸ್ ಅಭ್ಯರ್ಥಿಗಳನ್ನು ಬೆಂಬಲಿಸುವುದು ಸೂಕ್ತ ಎಂದರು. ದಸಂಸ ಮುಖಂಡರಾದ ಕೆ.ವಿ.ದೇವೇಂದ್ರ, ಕಿರಂಗೂರು ಸ್ವಾಮಿ, ಶಿವಮೂರ್ತಿ ಶಂಕರಪುರ, ಶಿವರಾಜ್ ಗೋಷ್ಠಿಯಲ್ಲಿದ್ದರು.

ಕೃಷ್ಣರಾಜ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸೋಮಶೇಖರ್‌ಗೆ ವೀರಶೈವ ಲಿಂಗಾಯಿತರ ಬೆಂಬಲ



ಮೈಸೂರು, ಮೇ 4(ಎಂಕೆ)– ಕೆ.ಆರ್. ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ಕೆ. ಸೋಮಶೇಖರ್ ಗೆಲುವಿಗೆ ವೀರಶೈವ ಲಿಂಗಾಯಿತ ಸಮಾಜ ಬೆಂಬಲ ನೀಡಲಿದೆ ಎಂದು ಮಾಜಿ ಉಪ ಮೇಯರ್ ಓಂಕಾರ್ ಪ್ರಸಾದ್ ಹೇಳಿದರು.

ಕುವೆಂಪುನಗರದಲ್ಲಿರುವ ಚಿಕ್ಕಮ್ಮಾನಿಕೇತನ ಕಲ್ಯಾಣ ಮಂಟಪದ ಎದುರು ನಡೆದ ವೀರಶೈವ ಲಿಂಗಾಯಿತ ಮುಖಂಡರ ಸಭೆಯಲ್ಲಿ ಮಾತನಾಡಿದ ಅವರು, ಈ ಬಾರಿ ಎಲ್ಲರೂ ಒಗ್ಗಟ್ಟಾಗಿ ಸೋಮಶೇಖರ್ ಅವರಿಗೆ ಹೆಚ್ಚಿನ ಮತ ನೀಡಿ ಗೆಲ್ಲಿಸಲು ನಿರ್ಣಯ ಮಾಡಿದ್ದೇವೆ ಎಂದರು.

ಬಿಜೆಪಿ ಸರ್ಕಾರ ಯಡಿಯೂರಪ್ಪ, ಜಗದೀಶ್ ಶೆಟ್ಟರ್, ಲಕ್ಷ್ಮಣ್ ಸವದಿಯಂತ ಹಿರಿಯ ವೀರಶೈವ ಲಿಂಗಾಯಿತ ಸಮುದಾಯ ನಾಯಕರನ್ನು ಮೂಲೆಗುಂಪು ಮಾಡಿದೆ. ಹಾಗಾಗಿ ಈ ಬಾರಿ ರಾಜ್ಯದೆಲ್ಲೆಡೆ ವೀರಶೈವ ಲಿಂಗಾಯಿತ ಸಮಾಜ ಕಾಂಗ್ರೆಸ್ ಬೆಂಬಲಿಸಲಿದೆ. ಸೋಮಶೇಖರ್‌ರಂತಹ ಜನಪ್ರತಿನಿಧಿಗೆ ಸಮಾಜ ಬೆಂಬಲ ನೀಡುವುದರ ಮೂಲಕ ಇಡೀ ಕ್ಷೇತ್ರದ ಸರ್ವತೋಮುಖ ಅಭಿವೃದ್ಧಿಯಾಗುತ್ತದೆ ಎಂದರು. ನಗರಪಾಲಿಕೆ ಮಾಜಿ ಸದಸ್ಯ ಎಂ.ಪ್ರದೀಪ್‌ಕುಮಾರ್ ಮಾತನಾಡಿ, ಕ್ಷೇತ್ರದ ಮತದಾರರು ಬದಲಾವಣೆ ಬಯಸಿದ್ದು, ಸಾಮಾನ್ಯ ಜನರ ಕೈಗೆ ಸಿಗುವಂತಹ ವ್ಯಕ್ತಿಯನ್ನು ಬಯಸಿದ್ದಾರೆ. ಅದಕ್ಕೆ ಸೂಕ್ತವಾದ ವ್ಯಕ್ತಿ ನಮ್ಮ ಸೋಮಣ್ಣನವರು. ಕ್ಷೇತ್ರದಲ್ಲಿ ಜನೋಪಯೋಗಿ ಕಾರ್ಯಕ್ರಮದ ಮೂಲಕ ಜಾತಿ–ಧರ್ಮಗಳನ್ನು ಮೀರಿ ಎಲ್ಲರ ಮನೆ ಮನ ತಲುಪಿದ್ದಾರೆ. ನಾನು ಸಹ ಅವರ ಜೊತೆ ಪ್ರಚಾರದಲ್ಲಿ ತೊಡಗಿಸಿಕೊಂಡಿದ್ದು, ಅವರ ಗೆಲುವಿಗೆ ಪ್ರಾಮಾಣಿಕವಾಗಿ ಶ್ರಮಿಸುತ್ತೇನೆ ಎಂದರು. ನಗರಾಧ್ಯಕ್ಷ ಆರ್.ಮೂರ್ತಿ, ಮುಖಂಡರಾದ ಯೋಗೇಶ್, ಪ್ರತಿಧ್ವನಿ ಪ್ರಸಾದ್, ಮಹದೇವಪ್ಪ, ಗಂಗಾಧರಸ್ವಾಮಿ, ಚಿನ್ನಸ್ವಾಮಿ, ರವಿಶಂಕರ್, ಪ್ರದೀಪ್ ಕುಮಾರ್, ಮಹೇಶ್, ಕೇಬಲ್ ಶೇಖರ್, ದಿನೇಶ್, ಸುಬ್ಬಣ್ಣ, ರಾಕೇಶ್, ಅಗ್ರಹಾರ ಪ್ರಕಾಶ್, ಸೋಮು ಸರಗೂರು ಮತ್ತಿತರರಿದ್ದರು.

ರಾಜ್ಯದ ಅಭಿವೃದ್ಧಿಗಾಗಿ ಕಾಂಗ್ರೆಸ್ ಬೆಂಬಲಿಸಿ

ಚಾಮರಾಜ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಕೆ.ಹರೀಶ್‌ಗೌಡ ಮನವಿ



ಮೈಸೂರು, ಮೇ 4– ರಾಜ್ಯದ ಸಮಗ್ರ ಅಭಿವೃದ್ಧಿಗಾಗಿ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸುವುದರೊಂದಿಗೆ ನನ್ನನ್ನು ಆಶೀರ್ವದಿಸಬೇಕೆಂದು ಚಾಮರಾಜ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಕೆ.ಹರೀಶ್‌ಗೌಡ ಮನವಿ ಮಾಡಿದರು.

ಚಾಮರಾಜ ಕ್ಷೇತ್ರದ ಗೋಕುಲಂನಲ್ಲಿ ಪಾದಯಾತ್ರೆ ನಡೆಸಿ ಮತಯಾಚಿಸಿ ಮಾತನಾಡಿದ ಅವರು, ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ರಾಜ್ಯದ ಖಜಾನೆ ಬರಿದಾಗಿದ್ದು, ಯಾವುದೇ ಅಭಿವೃದ್ಧಿ ಕೆಲಸಗಳು ನಡೆಯುತ್ತಿಲ್ಲ. ಗುತ್ತಿಗೆಯಲ್ಲಿ 40% ಕಮಿಷನ್, ಪಿ.ಎಸ್.ಐ. ಹಗರಣ, ಮೊಟ್ಟೆ ಹಗರಣ, ಭ್ರಷ್ಟಾಚಾರಗಳನ್ನು ಮಾಡುತ್ತಾ, ರಾಜ್ಯವನ್ನು ಬಿಜೆಪಿ ಸರ್ಕಾರ ಲೂಟಿ ಹೊಡೆಯುತ್ತಿದೆ. ಶಾಲಾ ಮಕ್ಕಳಿಗೆ ಬೈಸಿಕಲ್ ಕೊಟ್ಟಿಲ್ಲ, ಶೂ ಕೊಟ್ಟಿಲ್ಲ, ಸ್ಕಾಲರ್‌ಶಿಪ್ ಕೊಟ್ಟಿಲ್ಲ, ಕಾಂಗ್ರೆಸ್ ಸರ್ಕಾರ ಜಾರಿಗೆ ತಂದಂತಹ ಹಲವು ಜನಪರ ಕಾರ್ಯಕ್ರಮಗಳನ್ನೆಲ್ಲಾ ನಿಲ್ಲಿಸಿದ್ದಾರೆ. ಈ ಬಾರಿ ಕಾಂಗ್ರೆಸ್ 140 ಸೀಟುಗಳನ್ನು ಗೆಲ್ಲುವ ಮೂಲಕ ಅಧಿಕಾರವನ್ನು ಹಿಡಿಯಲಿದೆ ಎಂದ ಅವರು, ನನ್ನನ್ನು ಆಶೀರ್ವದಿಸಿ ಆಯ್ಕೆ ಮಾಡಬೇಕೆಂದು ಮನವಿ ಮಾಡಿದರು. ಈ ವೇಳೆ ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ಮಾಜಿ ನಿರ್ದೇಶಕ ಚಂದ್ರಶೇಖರ್, ರಾಮಕೃಷ್ಣ, ಗೋಪಿ, ದಿನೇಶ್, ಶ್ರೀನಿವಾಸ್ ಕುಮಾರ್, ಮಹೇಶ್ ಇದ್ದರು.

ಬಿಜೆಪಿ ಸರ್ಕಾರದಿಂದ ಈಗಾಗಲೇ 11 ಸಾವಿರ ಪೌರಕಾರ್ಮಿಕರು ಖಾಯಂ

● ಉಳಿದವರ ನೇಮಕಾತಿಗೂ ಅನುಮೋದನೆ ● ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷ ಕೋಟೆ ಎಂ.ಶಿವಣ್ಣ ಮಾಹಿತಿ ● ಅಧಿಕಾರಕ್ಕೆ ಬಂದರೆ 25 ಸಾವಿರ ಪೌರಕಾರ್ಮಿಕರ ನೇಮಿಸುವ ಕಾಂಗ್ರೆಸ್ ಹೇಳಿಕೆಗೆ ಎದಿರೇಟು

ಮೈಸೂರು, ಮೇ 4(ಜಿಎ)– ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ, 25ಸಾವಿರ ಪೌರಕಾರ್ಮಿಕರನ್ನು ಖಾಯಂ ಮಾಡುತ್ತೇವೆ ಎಂದು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹಾಗೂ ಕರ್ನಾಟಕ ಉಸ್ತುವಾರಿ ರಣದೀಪ್ ಸುರ್ಜೇವಾಲ ಹೇಳುತ್ತಿದ್ದಾರೆ. ಆದರೆ, ಬಿಜೆಪಿ ಸರ್ಕಾರವು ಈಗಾಗಲೇ 11 ಸಾವಿರಕ್ಕೂ ಅಧಿಕ ಪೌರಕಾರ್ಮಿರನ್ನು ಖಾಯಂ ಮಾಡಿದ್ದು, ಉಳಿದವರ ನೇಮಕಾತಿಗೂ ಮಂಜೂರಾತಿ ನೀಡಲಾಗಿದೆ ಎಂದು ರಾಜ್ಯ ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷ ಕೋಟೆ ಎಂ.ಶಿವಣ್ಣ ತಿಳಿಸಿದರು.

ಮೈಸೂರಿನ ವಾಣಿವಿಲಾಸ ರಸ್ತೆಯಲ್ಲಿರುವ ಬಿಜೆಪಿ ಮೈಸೂರು ವಿಭಾಗ ಮಾಧ್ಯಮ ಕೇಂದ್ರದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಸವರಾಜ ಬೊಮ್ಮಾಯಿ ಅವರ ನೇತೃತ್ವದ ಸರ್ಕಾರದಲ್ಲಿ ಆಯೋಗದ ಅಧ್ಯಕ್ಷನಾಗಿ ಇಡೀ ರಾಜ್ಯದಲ್ಲಿ ಪ್ರವಾಸ ಮಾಡಿ, 4 ವರದಿಗಳನ್ನು ಸರ್ಕಾರಕ್ಕೆ ನೀಡಿದ್ದೆ. ರಾಜ್ಯದಲ್ಲಿ 53 ಸಾವಿರ ಪೌರಕಾರ್ಮಿಕರಿದ್ದು, ಈ ವರದಿಯ ಅನುಸಾರ 11,133 ಮಂದಿ ಪೌರಕಾರ್ಮಿಕರನ್ನು ಖಾಯಂಗೊಳಿಸಲಾಗಿದೆ. ಹಾಗೇ 12,300 2ನೇ ಹಂತ ಹಾಗೂ 15 ಸಾವಿರ ಪೌರಕಾರ್ಮಿಕರನ್ನು ಖಾಯಂಗೊಳಿಸಲು ಮುಖ್ಯಮಂತ್ರಿಗಳು ಆದೇಶಿಸಿದ್ದಾರೆ. ಆದರೆ, ಚುನಾವಣೆ ಹಿನ್ನೆಲೆಯಲ್ಲಿ ಅದು ತಡವಾಗಿದೆ. ಇದನ್ನು ತಿಳಿಯದೆ ಕಾಂಗ್ರೆಸ್‌ನ ಡಿ.ಕೆ. ಶಿವಕುಮಾರ್ ಹಾಗೂ ರಣದೀಪ್ ಸುರ್ಜೇವಾಲ ಅಧಿಕಾರಕ್ಕೆ ಬಂದರೆ, 25 ಸಾವಿರ ಪೌರಕಾರ್ಮಿಕರನ್ನು ಖಾಯಂ ಮಾಡುತ್ತೇವೆ ಎಂದು ಸುಳ್ಳು ಮಾಹಿತಿ ನೀಡುತ್ತಿದ್ದಾರೆ ಎಂದು ಆರೋಪಿಸಿದರು.



ಪೌರಕಾರ್ಮಿಕರಿಗಾಗಿ ವಿಶ್ರಾಂತಿ ಗೃಹ ನಿರ್ಮಾಣ, ಬೆಳಗಿನ ಉಪಾಹಾರ ಹಾಗೂ ಡ್ರೆಸ್ ಕೋಡ್ ಮಾಡಲಾಗಿದ್ದು, ಪೌರಕಾರ್ಮಿಕರ ಅಭಿವೃದ್ಧಿಗಾಗಿಯೇ 100 ಕೋಟಿ ರೂ. ಮೀಸಲಿಡಲಾಗಿದೆ. ಬಿಬಿಎಂಪಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಮಹಿಳೆಯರಿಗೆ ಎಲೆಕ್ಟ್ರಿಕ್ ಸ್ಕೂಟರ್ ವಿತರಿಸಲಾಗಿದೆ. ಹಾಗೇ ಪೌರಕಾರ್ಮಿಕರನ್ನು ಪೌರನೌಕರರು ಎಂದು ಘೋಷಣೆ ಮಾಡಿ ಸರ್ಕಾರಿ ನೌಕರರಿಗೆ ದೊರೆಯುತ್ತಿರುವ ಸೌಲಭ್ಯಗಳನ್ನು ನೀಡಲಾಗುತ್ತಿದೆ ಎಂದು ತಿಳಿಸಿದರು.

ನಂತರ ಮೈಸೂರು ಮೇಯರ್ ಶಿವಕುಮಾರ್ ಮಾತನಾಡಿ, ಬಿಜೆಪಿ ಸರ್ಕಾರ ಎಸ್‌ಸಿ, ಎಸ್‌ಟಿ ಸಮುದಾಯಗಳ ಬಹು ವರ್ಷಗಳ ಬೇಡಿಕೆಯನ್ನು ಈಡೇರಿಸುವ ಮೂಲಕ ಅವರಿಗೆ ಸಾಕಷ್ಟು ಅನುಕೂಲಗಳನ್ನು ಕಲ್ಪಿಸಿಕೊಟ್ಟಿದೆ. ನಾಯಕ ಸಮುದಾಯದ ಪರ್ಯಾಯ ಪದಗಳಾದ ತಳವಾರ ಹಾಗೂ ಪರಿವಾರವನ್ನು ಎಸ್ಟಿಗೆ ಸೇರಿಸಬೇಕೆಂದು ಬಹು ವರ್ಷಗಳ ಬೇಡಿಕೆಯಾಗಿತ್ತು. ಇದನ್ನು ರಾಜ್ಯ ಹಾಗೂ ಕೇಂದ್ರ ಬಿಜೆಪಿ ಸರ್ಕಾರ ಈಡೇರಿಸಿ, ಬಹಳ ವರ್ಷಗಳ ಸಂಕಷ್ಟದ ಸ್ಥಿತಿಯನ್ನು ನಿವಾರಿಸಿದೆ ಎಂದರು.

ಬಿ.ಎಸ್.ಯಡಿಯೂರಪ್ಪ ಅವರು ಪರಿಶಿಷ್ಟ ಪಂಗಡದ ಅಭಿವೃದ್ಧಿಗಾಗಿ ಅನೇಕ ಯೋಜನೆಗಳನ್ನು ನೀಡಿದ್ದು, ವಾಲ್ಮೀಕಿ ಜಯಂತಿ ಆಚರಣೆ ಆರಂಭಿಸಿತು. ರಾಜ್ಯದಾದ್ಯಂತ ವಾಲ್ಮೀಕಿ ಸಮುದಾಯ ಭವನಗಳನ್ನು ನಿರ್ಮಾಣ ಮಾಡಿದರು. ವಾಲ್ಮೀಕಿ ಅಭಿವೃದ್ಧಿ ನಿಗಮ ಸ್ಥಾಪಿಸುವ ಮೂಲಕ ಈ ಸಮುದಾಯದವರು ಸಮಾಜದ ಮುಖ್ಯವಾಹಿನಿಗೆ ಬರಲು ಅನುಕೂಲ ಮಾಡಿಕೊಟ್ಟಿದ್ದಾರೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದಲ್ಲಿ ಪರಿಶಿಷ್ಟ ಪಂಗಡಕ್ಕೆ ಇದ್ದ ಮೀಸಲಾತಿಯನ್ನು ಶೇಕಡ 3ರಿಂದ 7ಕ್ಕೆ ಹೆಚ್ಚಿಸುವ ಮೂಲಕ ಈ ಸಮುದಾಯಕ್ಕೆ ಆರ್ಥಿಕ, ಶೈಕ್ಷಣಿಕ, ಸಾಮಾಜಿಕವಾಗಿ ಅನುಕೂಲಗಳನ್ನು ಮಾಡಿಕೊಟ್ಟಿದ್ದಾರೆ ಎಂದು ತಿಳಿಸಿದರು.

ಮೈಸೂರು ನಗರ ಪಾಲಿಕೆಯಲ್ಲಿ ಪೌರಕಾರ್ಮಿಕರಿಗೆ ಬೆಳಗಿನ ಹೊತ್ತು ತಿಂಡಿ ನೀಡುವ ವ್ಯವಸ್ಥೆಯನ್ನು ಜಾರಿಗೊಳಿಸಲಾಗಿತ್ತು. ಆದರೆ, ಗುಣಮಟ್ಟದ ಉಪಾಹಾರ ನೀಡಲಾಗುತ್ತಿಲ್ಲ ಎಂಬ ದೂರಿನ ಹಿನ್ನೆಲೆಯಲ್ಲಿ ಉಪಾಹಾರದ ಹಣವನ್ನು ನೀಡುವಂತೆ ಬೇಡಿಕೆಯನ್ನು ಇಟ್ಟಿದ್ದರು ಅದರಂತೆ ಹಣವನ್ನು ಪೌರಕಾರ್ಮಿಕರಿಗೆ ನೀಡಲಾಗುತ್ತಿದೆ. ಪೌರಕಾರ್ಮಿಕರಿಗೆ ಗುಣಮಟ್ಟದ ಉಪಾಹಾರವನ್ನು ನೀಡುವ ವ್ಯವಸ್ಥೆಯನ್ನು ಮತ್ತೆ ಜಾರಿಗೆ ತರಲಾಗುತ್ತಿದೆ.ಇದಕ್ಕಾಗಿ ಈಗಾಗಲೇ ಟೆಂಡರನ್ನು ಕರೆಯಲಾಗಿದೆ. ವಿಧಾನಸಭೆ ಚುನಾವಣೆ ಮುಗಿದ ಬಳಿಕ ಬಜೆಟ್ ಮಂಡಿಸಲಿದ್ದು, ಅದರಲ್ಲಿ ಪೌರಕಾರ್ಮಿಕರಿಗೆ ಎಲೆಕ್ಟ್ರಾನಿಕ್ ವಾಹನಗಳನ್ನು ನೀಡುವುದಕ್ಕೆ ಹಣವನ್ನು ಮೀಸಲಿಡಲಾಗುವುದು ಎಂದು ಕೋಟೆ ಎಂ.ಶಿವಣ್ಣ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಯಶಸ್ವಿ ಸೋಮಶೇಖರ್, ಬಿಜೆಪಿ ಜಿಲ್ಲಾ ಸಹ ವಕ್ತಾರ ಡಾ.ಕೆ.ವಸಂತ್‌ಕುಮಾರ್, ಬಿಜೆಪಿ ಮೈಸೂರು ವಿಭಾಗ ಮಾಧ್ಯಮ ಕೇಂದ್ರದ ಸಂಯೋಜಕ ನಾಗೇಶ್, ಜಿಲ್ಲಾ ಮಾಧ್ಯಮ ಸಂಚಾಲಕ ಮಹೇಶ್ ರಾಜೇ ಅರಸ್ ಉಪಸ್ಥಿತರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಬಹುಮತದೊಂದಿಗೆ ಬಿಜೆಪಿ ಸರ್ಕಾರ ರಚನೆ

ಮೈಸೂರಲ್ಲಿ ಮಾಜಿ ಮುಖ್ಯಮಂತ್ರಿ ಡಿ.ವಿ.ಸದಾನಂದಗೌಡ ಅತೀವ ವಿಶ್ವಾಸ



ಬಿಜೆಪಿ ಅಭ್ಯರ್ಥಿಗಳ ಪರ ಪ್ರಚಾರಕ್ಕಾಗಿ ಗುರುವಾರ ಮೈಸೂರಿಗೆ ಆಗಮಿಸಿದ್ದ ಮಾಜಿ ಮುಖ್ಯಮಂತ್ರಿ ಡಿ.ವಿ. ಸದಾನಂದಗೌಡರನ್ನು ಮುಖಂಡರು ಆತ್ಮೀಯವಾಗಿ ಅಭಿನಂದಿಸಿದರು.

ಮೈಸೂರು, ಮೇ 4(ಆರ್‌ಕೆ)–ಈ ಬಾರಿ ಪೂರ್ಣ ಬಹುಮತದೊಂದಿಗೆ ಬಿಜೆಪಿ ಸರ್ಕಾರ ರಚಿಸಲಿದೆ ಎಂದು ಮಾಜಿ ಮುಖ್ಯಮಂತ್ರಿ ಡಿ.ವಿ.ಸದಾನಂದಗೌಡ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಚಾಮುಂಡೇಶ್ವರಿ ಕ್ಷೇತ್ರದ ಮಾವಿನಹಳ್ಳಿ ಗ್ರಾಮದಲ್ಲಿ ಬಿಜೆಪಿ ಅಭ್ಯರ್ಥಿ ಕವೀಶ್‌ಗೌಡರ ಪರ ಚುನಾವಣಾ ಪ್ರಚಾರ ನಡೆಸಿದ ಬಳಿಕ ಮಧ್ಯಾಹ್ನ ಮೈಸೂರಿನ ಎಂಜಿ ರಸ್ತೆಯ ಬಿಜೆಪಿ ಮಾಧ್ಯಮ ಕೇಂದ್ರದಲ್ಲಿ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡುತ್ತಿದ್ದ ಅವರು, ಪಕ್ಷದಲ್ಲಿನ ಕೆಲ ವ್ಯತ್ಯಾಸಗಳಿಂದ 2013ರ ಚುನಾವಣೆಯಲ್ಲಿ ನಮಗೆ ಸ್ಪಷ್ಟ ಬಹುಮತ ಬಂದಿರಲಿಲ್ಲ. 2018ರಲ್ಲೂ 104 ಸ್ಥಾನಗಳು ಬಿಜೆಪಿಗೆ ಲಭಿಸಿದ್ದವು. ಆದರೆ 2023ರ ಚುನಾವಣೆಯಲ್ಲಿ ನಿಚ್ಚಳ ದೊರೆಯಲಿದೆ ಎಂದರು.

ಸ್ಪಷ್ಟ ಬಹುಮತದೊಂದಿಗೆ ಸರ್ಕಾರ ರಚಿಸಲು ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ, ಕೇಂದ್ರ ರಕ್ಷಣಾ ಸಚಿವ ರಾಜ್‌ನಾಥ್‌ಸಿಂಗ್, ಸಿಎಂ ಬೊಮ್ಮಾಯಿ, ಮಾಜಿ ಸಿಎಂ ಯಡಿಯೂರಪ್ಪ ಸೇರಿದಂತೆ ಪಕ್ಷದ ಎಲ್ಲಾ ನಾಯಕರು ರಾಜ್ಯಾದ್ಯಂತ ಪ್ರಚಾರ ಕೈಗೊಂಡು ಸರ್ವ ಪ್ರಯತ್ನ ಮಾಡುತ್ತಿದ್ದಾರೆ. ಈ ಬಾರಿ ಯಾರ ಹಂಗಿಲ್ಲದೆಯೇ ಬಿಜೆಪಿ ಸರ್ಕಾರ ರಚಿಸುವುದು ಶತಸಿದ್ಧ ಎಂದರು.

ಸಿದ್ದರಾಮಯ್ಯ ಮನೆಗೆ: 13 ಬಾರಿ ಬಜೆಟ್ ಮಂಡಿಸಿದ ಸಿದ್ದರಾಮಯ್ಯರನ್ನು ಸ್ವಂತ ಊರಿನಲ್ಲೇ ಸೋಲಿಸಿ ಮನೆಗೆ ಕಳುಹಿಸುವುದು ಈ ಬಾರಿ ಬಿಜೆಪಿ ಸಾಧನೆಯಾಗಲಿದೆ. 2018ರ ಚುನಾವಣೆಯಲ್ಲೇ ಅವರು ಕಡೇ ಚುನಾವಣೆ ಎಂದಿದ್ದರು. ಆದರೆ, ತಮ್ಮ ಹುಟ್ಟೂರು ಒಳಗೊಂಡ ವರುಣ ಕ್ಷೇತ್ರದಲ್ಲಿ ಮತ್ತೆ ಸ್ಪರ್ಧಿಸಿದ್ದಾರೆ. ಅವರನ್ನು ಸೋಲಿಸುವ ಮೂಲಕ ನಾವೇ ಅವರ ಕೊನೇ ಚುನಾವಣೆ ಮಾಡಲಿದ್ದೇವೆ ಎಂದ ಸದಾನಂದಗೌಡರು, ಹತಾಶರಾದವರು ಗೂಂಡಾಗಿರಿ ಮಾಡುತ್ತಿದ್ದಾರೆ. ಅಪಪ್ರಚಾರ ಮಾಡುತ್ತಾರೆ. ಸೋಲಿನ ಭಯ ಇರುವವರು ಇನ್ನೊಬ್ಬರ ಮೇಲೆ ಗೂಬೆ ಕೂರಿಸುತ್ತಾರೆ. ಈ ಮೂರೂ ಸಿದ್ದರಾಮಯ್ಯರಿಗೆ ಅನ್ವಯಿಸಲಿವೆ ಎಂದರು.

ಬಿಜೆಪಿ ಅಭ್ಯರ್ಥಿಗಳು ಜಿಲ್ಲೆಯ 11ರ ಪೈಕಿ 6ರಿಂದ 7 ಕ್ಷೇತ್ರಗಳಲ್ಲಿ ಜಯ ಗಳಿಸಲಿದ್ದಾರೆ. ಮೈಸೂರು ನಗರದ ನಾಲ್ಕೂ ಕ್ಷೇತ್ರಗಳಲ್ಲಿ ಬಿಜೆಪಿ ಗೆಲ್ಲಲಿದ್ದು, ಸರ್ಕಾರದ ಸಾಧನೆ, ಅಭಿವೃದ್ಧಿಯಿಂದಾಗಿ ಚಾಮುಂಡೇಶ್ವರಿಯಲ್ಲಿ ಬಿಜೆಪಿ ಮತ ಒಟ್ಟುಗೂಡಲಿದೆ. ಅಲ್ಲದೆ ಈ ಕ್ಷೇತ್ರದಲ್ಲಿ ಗುರುಶಿಷ್ಯರು ಎದುರಾಳಿಯಾಗಿರುವುದರಿಂದ ಜೆಡಿಎಸ್, ಕಾಂಗ್ರೆಸ್ ಮತಗಳು ವಿಭಜನೆಯಾಗಲಿವೆ. ಈ ಬಾರಿ ರಾಜ್ಯದಲ್ಲಿ 92 ಹೊಸ ಮುಖಗಳಿಗೆ ಬಿಜೆಪಿ ಟಿಕೆಟ್ ನೀಡಿದೆ. ಅವರಲ್ಲಿ ಕವೀಶ್‌ಗೌಡ ಅವರೂ ಒಬ್ಬರು. ಸಾಮಾನ್ಯ ನಿಷ್ಠಾವಂತ ಕಾರ್ಯಕರ್ತರಾದ ಟಿ.ಎಸ್.ಶ್ರೀವತ್ಸ ಕೆ.ಆರ್.ಕ್ಷೇತ್ರದ ಅಭ್ಯರ್ಥಿಯಾಗಿದ್ದಾರೆ. ಚಾಮರಾಜ ಕ್ಷೇತ್ರದಲ್ಲಿ ಶಾಸಕ ಎಲ್.ನಾಗೇಂದ್ರ ಅವರ ಅಭಿವೃದ್ಧಿಗೆ ಜನ ಬೆಂಬಲವಿದೆ ಎಂದ ಅವರು, ಹಾಗಾಗಿ ಈ ನಾಲ್ಕೂ ಕ್ಷೇತ್ರಗಳಲ್ಲಿ ಪಕ್ಷದ ಅಭ್ಯರ್ಥಿಗಳು ಗೆಲುವು ಸಾಧಿಸಲಿದ್ದಾರೆ ಎಂದರು.

ಪಕ್ಷಾಂತರ ನಿಸ್ಸೀಮ: ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು ವಿಶ್ವಾಸಕ್ಕೆ ಅರ್ಹರಲ್ಲ ಎಂಬುದು ಜನರ ಮಾತುಗಳಿಂದ ತಿಳಿಯುತ್ತಿದೆ. ಅವರು ಪಕ್ಷಾಂತರ ಮಾಡುವುದರಲ್ಲೂ ನಿಸ್ಸೀಮರು. ಬಿಜೆಪಿಯಲ್ಲಿದ್ದು ಕರ್ನಾಟಕ ಗೃಹ ಮಂಡಳಿ ಅಧ್ಯಕ್ಷರಾದರು. ಸಿದ್ದರಾಮಯ್ಯರನ್ನು ವಿರೋಧಿಸುತ್ತಿದ್ದ ಅವರು ಬಳಿಕ ಅವರ ಚೇಂಬರ್‌ನಲ್ಲೇ ಕಾಣಿಸಿಕೊಂಡರು. ಅಪ್ಪ–ಮಗನಿಗೆ ಟಿಕೆಟ್ ಸಿಗುವುದಿಲ್ಲ ಎಂದು ಖಾತರಿಯಾದಾಗ ಬಿಜೆಪಿಗೆ ಬರಲೆತ್ನಿಸಿದ ಜಿಟಿಡಿ ವರ್ತನೆಯನ್ನು ಮೊದಲೇ ನೋಡಿದ್ದ ನಾವು ಹತ್ತಿರ ಬರುವುದು ಬೇಡ ಎಂದು ಹೇಳಿದೆವು ಎಂದು ನುಡಿದರು.

ಈ ವೇಳೆ ಮುಡಾ ಅಧ್ಯಕ್ಷ ಯಶಸ್ವಿ ಎಸ್.ಸೋಮಶೇಖರ್, ನರಸಿಂಹರಾಜ ಕ್ಷೇತ್ರದ ಅಭ್ಯರ್ಥಿ ಸಂದೇಶ್‌ಸ್ವಾಮಿ, ಕೆ.ಆರ್. ಕ್ಷೇತ್ರದ ಅಭ್ಯರ್ಥಿ ಟಿ.ಎಸ್.ಶ್ರೀವತ್ಸ ಮುಖಂಡರಾದ ಹೇಮಂತ್ ಕುಮಾರ್‌ಗೌಡ, ಗಿರಿಧರ್, ವಿನೋದ್ ಕುಮಾರ್ ಡಾ. ವಸಂತ ಕುಮಾರ್ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಜಾತ್ರೆ, ಉತ್ಸವಗಳ ಮುಂದೂಡಿಕೆಗೆ ಆದೇಶ

ಮೈಸೂರು, ಮೇ 4–ಭಾರತ ಚುನಾವಣಾ ಆಯೋಗದ ನಿರ್ದೇಶನದಂತೆ ವಿಧಾನಸಭಾ ಚುನಾವಣೆ ಮತದಾನವನ್ನು ಸುಸೂತ್ರವಾಗಿ ನಡೆಸಲು ಹಾಗೂ ಶಾಂತಿಯುತವಾಗಿ ಕಾನೂನು ಸುವ್ಯವಸ್ಥೆಯನ್ನು ಕಾಪಾಡುವ ದೃಷ್ಟಿಯಿಂದ ಸಿಆರ್‌ಪಿಸಿ 144ರನ್ವಯ ಮೇ 10 ರಂದು ಜಿಲ್ಲೆಯಲ್ಲಿ ನಡೆಯುವ ಎಲ್ಲಾ ರೀತಿಯ ಸಂತೆ, ಜಾತ್ರೆ, ಉತ್ಸವ ಇತ್ಯಾದಿಗಳನ್ನು ಮುಂದೂಡಲಾಗಿದೆ ಎಂದು ಚುನಾವಣಾಧಿಕಾರಿ ಡಾ.ರಾಜೇಂದ್ರ ಆದೇಶ ಹೊರಡಿಸಿದ್ದಾರೆ.

ಶ್ರೀವತ್ಸ ಪರ ಬ್ರಾಹ್ಮಣ ಸಂಘ ಬಿರುಸಿನ ಪ್ರಚಾರ



ಮೈಸೂರು,ಮೇ 4–ಕೃಷ್ಣರಾಜ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಟಿ.ಎಸ್.ಶ್ರೀವತ್ಸ ಪರವಾಗಿ ಮೈಸೂರು ಬ್ರಾಹ್ಮಣ ಸಂಘದ ವತಿಯಿಂದ ಡಿ.ಟಿ.ಪ್ರಕಾಶ್ ನೇತೃತ್ವದಲ್ಲಿ ಚಾಮುಂಡಿಪುರಂ ಬಡಾವಣೆ ಸುತ್ತಮುತ್ತಲಿನ ಮನೆಗಳಿಗೆ ತೆರಳಿ ಮತಯಾಚನೆ ಮಾಡಲಾಯಿತು.

ಇದೇ ವೇಳೆ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್ ಮಾತನಾಡಿ, ಮೇ10ರಂದು ನಡೆಯಲಿರುವ ಚುನಾವಣೆಯಲ್ಲಿ ಮನೆ ಮಂದಿಯೆಲ್ಲಾ ಕಡ್ಡಾಯವಾಗಿ ಮತದಾನ ಮಾಡಲು ಮುಂದಾಗಬೇಕು. ಮತದಾನ ಪ್ರತಿಯೊಬ್ಬ ನಾಗರಿಕರ ಹಕ್ಕು. ಬಿಜೆಪಿ ಅಭ್ಯರ್ಥಿ ಶ್ರೀವತ್ಸ ಅವರು ಬೂತ್ ಮಟ್ಟದಿಂದ ನಗರ ಮಟ್ಟದವರೆಗೂ ಬಿಜೆಪಿ ಪಕ್ಷದಲ್ಲಿ ಗುರುತಿಸಿಕೊಂಡು ಸಂಘಟನಾತ್ಮಕವಾಗಿ ಉತ್ತಮ ಕೆಲಸ ಮಾಡಿದ್ದಾರೆ. ಪ್ರಧಾನಿ ಮೋದಿ ಅವರ ಆಡಳಿತದಲ್ಲಿ ಕಾಶ್ಮೀರದಲ್ಲಿ ಶಾರದಾಪೀಠ ಉಳಿಸಿಕೊಂಡು, ಅಯೋಧ್ಯೆಯಲ್ಲಿ ರಾಮಮಂದಿರ ಸ್ಥಾಪನೆ ಮಾಡಲಾಗುತ್ತಿದೆ. ಈ ಬಾರಿ ಬ್ರಾಹ್ಮಣ ಸಮುದಾಯದವರು ಹೆಚ್ಚಿನ ಸಂಖ್ಯೆಯಲ್ಲಿ ಮತದಾನ ಮಾಡಲು ಮುಂದಾಗುತ್ತಿರುವ ವಾತಾವರಣ ಕಾಣುತ್ತಿದ್ದು, ಶ್ರೀವತ್ಸ ಅವರು ದಾಖಲೆ ಪ್ರಮಾಣದ ಮತಗಳ ಮುನ್ನಡೆ ಪಡೆಯಲಿದ್ದಾರೆ ಎಂದರು. ಪಾಲಿಕೆ ಸದಸ್ಯ ಮಾ.ವಿ.ರಾಂಪ್ರಸಾದ್, ಮಾಜಿ ಸದಸ್ಯೆ ಸೌಭಾಗ್ಯ ಮೂರ್ತಿ, ಡಾ.ಲಕ್ಷ್ಮಿ ದೇವಿ, ಪುರುಷೋತ್ತಮ್, ಅಜಯ್‌ಶಾಸ್ತ್ರಿ, ವಿಕ್ರಂ ಅಯ್ಯಂಗಾರ್, ಹರ್ಷ, ಅಪೂರ್ವ ಸುರೇಶ್, ಮಂಜುನಾಥ್, ಮುಳ್ಳೂರು ಸುರೇಶ್, ಅಮರ್, ಜೀವನ್ ಇದ್ದರು.

ಕಾಂಗ್ರೆಸ್ ಬೆಂಬಲಿಸಲು ಮಾಜಿ ಮೇಯರ್ ಮನವಿ

ಮೈಸೂರು,ಮೇ 4(ಪಿಎಂ)– ಎಲ್ಲಾ ಜಾತಿ–ಜನಾಂಗಗಳ



ಶ್ರೇಯೋಭಿವೃದ್ಧಿಗೆ ಕಾಂಗ್ರೆಸ್ ಶ್ರಮಿಸಿದ್ದು, ಈ ಚುನಾವಣೆಯಲ್ಲಿ ಮತದಾರರು ಕಾಂಗ್ರೆಸ್ ಬೆಂಬಲಿಸಬೇಕೆಂದು ಮಾಜಿ ಮೇಯರ್ ಹಾಗೂ ಕಾಂಗ್ರೆಸ್ ಮುಖಂಡ ಪುರುಷೋತ್ತಮ್ ಮನವಿ ಮಾಡಿದರು. ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಬಿಜೆಪಿ ತನ್ನ ಆಡಳಿತದಲ್ಲಿ ಸಂವಿಧಾನ ದುರ್ಬಲಗೊಳಿಸಲು ನಿರಂತರ ಪ್ರಯತ್ನ ನಡೆಸುತ್ತಿದೆ. ರಾಜ್ಯ ಬಿಜೆಪಿ ಸರ್ಕಾರದ ಕಳೆದ 4 ವರ್ಷಗಳ ಆಡಳಿತಾವಧಿಯಲ್ಲಿ ರಾಜ್ಯದಲ್ಲಿ 6,243 ದಲಿತರ ಮೇಲಿನ ದೌರ್ಜನ್ಯ ಪ್ರಕರಣಗಳು ದಾಖಲಾಗಿವೆ. ದೇಶದಲ್ಲಿ ಬಿಜೆಪಿ ಆಡಳಿತ ಬಂದ ಬಳಿಕ ದಲಿತರ ಮೇಲಿನ ದೌರ್ಜನ್ಯ ನಿರಂತರವಾಗಿ ನಡೆಯುತ್ತಿದೆ ಎಂದು ದೂರಿದರು.

ರಾಜ್ಯದಲ್ಲಿ ದಲಿತ ಸಮುದಾಯದ ಎಡ ಮತ್ತು ಬಲ ಸಮಾಜಗಳು ಒಗ್ಗಟ್ಟಿನಿಂದ ಇದ್ದು, ಈ ಎರಡು ಸಮುದಾಯಗಳನ್ನು ಒಡೆಯುವ ಪ್ರಯತ್ನ ಫಲ ಕೊಡುವುದಿಲ್ಲ. ವರುಣ ಕ್ಷೇತ್ರದಲ್ಲಿ ಅಮಿತ್ ಶಾ ಸೇರಿದಂತೆ ಯಾರೇ ಬಂದು ಬಿಜೆಪಿ ಪರ ಪ್ರಚಾರ ನಡೆಸಿದರೂ ಮಾಜಿ ಸಿಎಂ ಸಿದ್ದರಾಮಯ್ಯರನ್ನು ಸೋಲಿಸಲು ಸಾಧ್ಯವಿಲ್ಲ. ಈ ಚುನಾವಣೆಯಲ್ಲಿ ಕಾಂಗ್ರೆಸ್ 130 ರಿಂದ 135 ಸ್ಥಾನಗಳಲ್ಲಿ ಗೆಲುವು ಸಾಧಿಸಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಮುಖಂಡರಾದ ರಾಚಯ್ಯ, ಶಿವಣ್ಣ, ಕುಮಾರ್, ಮಹೇಶ್, ಚೋರನಹಳ್ಳಿ ಕೃಷ್ಣ ಗೋಷ್ಠಿಯಲ್ಲಿದ್ದರು.



ಮೈಸೂರಿನ ವಾರ್ಡ್ ನಂ.1 ಹೆಬ್ಬಾಳ ಬಡಾವಣೆಯಲ್ಲಿ ಸುಬ್ರಮಣ್ಯ ನಗರದಲ್ಲಿ ಮನೆ ಮನೆಗೆ ಮತದಾನದ ಗುರುತಿನ ಚೀಟಿ ವಿತರಿಸಿ, ಬಿಜೆಪಿ ಅಭ್ಯರ್ಥಿ ಶಾಸಕ ಎಲ್.ನಾಗೇಂದ್ರ ಪರ ಪ್ರಚಾರ ನಡೆಸಲಾಯಿತು. ಈ ವೇಳೆ ಬಿಜೆಪಿ ಯುವ ಮೋರ್ಚಾ ನಗರಾಧ್ಯಕ್ಷ ಎಂ.ಜೆ.ಕಿರಣ್‌ಗೌಡ, ಶಕ್ತಿ ಕೇಂದ್ರದ ಅಧ್ಯಕ್ಷ ಅರುಣ್ ಕಾಟಕರ್, ಬೂತ್ ಅಧ್ಯಕ್ಷರಾದ ಹರೀಶ್‌ಕುಮಾರ್, ದಿನೇಶ್, ದೀಪು, ಮೋಹನ್, ಸುನಂದಮ್ಮ, ಚಂದ್ರು ಮುಂತಾದವರು ಇದ್ದರು.

ಹುಟ್ಟೂರಲ್ಲಿ ಮಾಜಿ ಸಿಎಂ ಯಡಿಯೂರಪ್ಪ ಶಕ್ತಿ ಪ್ರದರ್ಶನ

ಕೆ.ಆರ್.ಪೇಟೆ ಸಮಗ್ರ ಅಭಿವೃದ್ಧಿಗೆ ಮತ್ತೊಮ್ಮೆ ನಾರಾಯಣಗೌಡರ ಕೈ ಹಿಡಿಯಿರಿ



ಕೆ.ಆರ್.ಪೇಟೆ, ಮೇ 4– ಅಭಿವೃದ್ಧಿ ವಿಚಾರದಲ್ಲಿ ಕೆಆರ್.ಪೇಟೆ ಹಿಂದುಳಿದಿತ್ತು. ಬಿಜೆಪಿ ಸರ್ಕಾರ ರಾಜ್ಯದಲ್ಲಿ ಅಸ್ತಿತ್ವಕ್ಕೆ ಬಂದ ಬಳಿಕ, ನಾರಾಯಣಗೌಡ ಸಚಿವರಾದ ಮೇಲೆ ತಾಲೂಕು ಅಭಿವೃದ್ಧಿಯತ್ತ ಮುಖ ಮಾಡಿದೆ. ಮತ್ತಷ್ಟು ಸಮಗ್ರ ಅಭಿವೃದ್ಧಿಗೆ ಕ್ಷೇತ್ರದ ಜನತೆ ಮತ್ತೊಮ್ಮೆ ಕೆ.ಸಿ.ನಾರಾಯಣಗೌಡರ ಕೈ ಹಿಡಿಯಬೇಕೆಂದು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಮನವಿ ಮಾಡಿದರು.

ಗುರುವಾರ ತಾಲೂಕಿನ ಬೂಕನಕೆರೆಯಲ್ಲಿ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಕೆ.ಸಿ.ನಾರಾಯಣಗೌಡ ಪರ ಆಯೋಜಿಸಿದ್ದ ಬೃಹತ್ ಪ್ರಚಾರ ಸಭೆ ಉದ್ಘಾಟಿಸಿ ಮಾತನಾಡಿದ ಅವರು, ಬಿಜೆಪಿ ಸರ್ಕಾರ ನನ್ನ ಹಾಗೂ ಬೊಮ್ಮಾಯಿ ಅವಧಿಯಲ್ಲಿ ಕೆ.ಆರ್.ಪೇಟೆ ಅಭಿವೃದ್ಧಿಗೆ ಸಾವಿರಾರು ಕೋಟಿ ಬಿಡುಗಡೆ ಮಾಡಿದೆ. ಶುದ್ಧ ಕುಡಿಯುವ ನೀರು, ಮೂಲ ಸೌಕರ್ಯ, ವಿದ್ಯುತ್, ನಾಲೆಗಳ ಅಭಿವೃದ್ಧಿ, ರಸ್ತೆ, ಬಸ್ ನಿಲ್ದಾಣ ಸೇರಿದಂತೆ ಸಾಕಷ್ಟು ಕೆಲಸಗಳನ್ನು ಮಾಡಿದೆ. ಈ ಎಲ್ಲಾ ಕೆಲಸಗಳು ಕ್ಷೇತ್ರದಲ್ಲಿ ಬಿಜೆಪಿ ಶಾಸಕರು ಗೆದ್ದಿದ್ದಕ್ಕೆ ಸುಲಭವಾಗಿ ಆಯಿತು ಎಂದರು.

ರಾಜ್ಯ ಪ್ರವಾಸ ಮಾಡಿ, ಎಲ್ಲಾ ಕಡೆ ಕಮಲ ಅರಳಿಸಿದ್ದ ಖುಷಿ ಇದ್ದ ನನಗೆ ನನ್ನ ಹುಟ್ಟೂರು ಮಂಡ್ಯ ಜಿಲ್ಲೆಯಲ್ಲಿ ಮಾತ್ರ ಬಿಜೆಪಿ ಗೆಲ್ಲಲಿಲ್ಲವಲ್ಲ ಎಂಬ ಚಿಂತೆ ಇತ್ತು. ಆದರೆ ಮಂಡ್ಯ ಜಿಲ್ಲೆಯ ಅದರಲ್ಲೂ ನನ್ನ ಹುಟ್ಟೂರು ಕೆ.ಆರ್.ಪೇಟೆಯಲ್ಲಿ ಬಿಜೆಪಿ ಗೆದ್ದಿದ್ದು ನನಗೆ ಬಹಳ ಖುಷಿ ಆಯಿತು. ಈ ಬಾರಿಯೂ ಕೇವಲ ಕೆ.ಆರ್.ಪೇಟೆ ಮಾತ್ರವಲ್ಲದೇ ಜಿಲ್ಲೆಯ ಹಲವೆಡೆ ಬಿಜೆಪಿ ಅಧಿಕ ಸ್ಥಾನದಲ್ಲಿ ಗೆಲುವು ಸಾಧಿಸಲಿದೆ ಎಂಬ ವಿಶ್ವಾಸ ನನಗಿದೆ ಎಂದರು. ಈ ದಿನ ನನಗೆ ಬಾಲ್ಯದ ನೆನಪು ಕಾಡುತ್ತದೆ. ನಾನು ನನ್ನ ಅಣ್ಣನ ಜೊತೆ ತೆಂಡೇಕೆರೆ ಸಂತೆಗೆ ಹೋಗಿ ಸಂಜೆ ಬರುತ್ತಿದ್ದೆ. ನಮ್ಮನ್ನು ಸಾಕಿದ ಅಣ್ಣ ಮತ್ತು ಮಾವ ಪರಿಶ್ರಮವೇ ಇಂತಹ ಸಂದರ್ಭ ನಾನು ಈ ಮಟ್ಟಕ್ಕೆ ಬಂದಿದ್ದೇನೆ ಎಂದು ಬಾಲ್ಯದ ನೆನಪುಗಳನ್ನು ಮೆಲುಕು ಹಾಕಿದರು.

ಗ್ರಾಪಂ ಸದಸ್ಯ ಸ್ಥಾನಕ್ಕೆ ರಾಜೀನಾಮೆ ನೀಡಲು ಹಿಂಜರಿಯುವ ಕಾಲದಲ್ಲಿ ನಾನು ಪಕ್ಷ ಸಂಘಟನೆಗಾಗಿ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದ್ದೇನೆ. ಪಕ್ಷ ನನಗೆ ಎಲ್ಲವನ್ನು ಕೊಟ್ಟಿದೆ. ಕಾಂಗ್ರೆಸ್ ಮುಳುಗುವ ಹಡಗು. ಪ್ರಧಾನಿ ಮೋದಿ ಮತ್ತು ಅಮಿತ್ ಶಾ ಮುಂದೆ ರಾಹುಲ್ ಏನೇನು ಅಲ್ಲ. ಜನ ಕಾಂಗ್ರೆಸ್ ತಿರಸ್ಕಾರ ಮಾಡಿದ್ದಾರೆ. ಮೋದಿ ಅವರು ನನ್ನ ಹುಟ್ಟುಹಬ್ಬಕ್ಕೆ ಬಂದಾಗ 5 ಲಕ್ಷ ಜನ ಸೇರಿದ್ದರು. ಇದಕ್ಕೆ ಮೋದಿ ನನ್ನ ಮೇಲೆ ಇಟ್ಟಿರುವ ವಿಶ್ವಾಸವೇ ಕಾರಣ. ಈ ಬಾರಿ ಚುನಾವಣೆಯಲ್ಲಿ 130 ಸ್ಥಾನ ಪಡೆದು ಬಿಜೆಪಿ ಸರ್ಕಾರ ರಚಿಸುವುದರಲ್ಲಿ ಅನುಮಾನವಿಲ್ಲ. ಅದೇ ರೀತಿ ನಾರಾಯಣಗೌಡರು ಸಚಿವರಾಗುವುದು ಖಚಿತ ಎಂದರು.

ನಮ್ಮ ಪಕ್ಷಕ್ಕೆ ಸ್ಪಷ್ಟ ಬಹುಮತ ಬಂದರೆ ಬಿಪಿಎಲ್ ಕಾರ್ಡುದಾರರಿಗೆ ಪ್ರತಿ ತಿಂಗಳು 10 ಕೆಜಿ ಅಕ್ಕಿ, ಯುಗಾದಿ, ಗಣೇಶ ಚತುರ್ಥಿ, ದೀಪಾವಳಿ ಹಬ್ಬದ ವೇಳೆ 3 ಉಚಿತ ಗ್ಯಾಸ್ ಸಿಲಿಂಡರ್, ಬಿಪಿಎಲ್ ಕುಟುಂಬಗಳಿಗೆ ಪ್ರತಿದಿನ ಅರ್ಧ ಲೀಟರ್ ನಂದಿನಿ ಹಾಲು, ಇದರ ಜೊತೆ ಬಿಪಿಎಲ್ ಕಾರ್ಡ್ ಹೊಂದಿರುವ ಕುಟುಂಬಗಳಿಗೆ ಪ್ರತಿ ತಿಂಗಳು 5 ಕೆಜಿ ಸಿರಿಧಾನ್ಯದ ಪಡಿತರ ಕಿಟ್, ರಾಜ್ಯದ ಏಕರೂಪ ನಾಗರಿಕ ಸಂಹಿತೆ ಜಾರಿಗೊಳಿಸಲಾಗುವುದು ಎಂದು ಭರವಸೆ ನೀಡಿದರು.

ಅಭ್ಯರ್ಥಿ ಕೆ.ಸಿ.ನಾರಾಯಣಗೌಡ ಮಾತನಾಡಿ, ಜೆಡಿಎಸ್ ಅಭಿವೃದ್ಧಿಗೆ ಸ್ಪಂದಿಸುತ್ತಿಲ್ಲ ಎಂದು ಆ ಪಕ್ಷ ತೊರೆದು ಬಿಜೆಪಿ ಸೇರಿದೆ. ನಾನು ಬಿಜೆಪಿ ಪಕ್ಷ ಸೇರಿದ್ದಕ್ಕೂ ಸಾರ್ಥಕವಾಗಿದೆ. ಏಕೆಂದರೆ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಬಿಜೆಪಿ ಸರ್ಕಾರ ಸ್ಪಂದಿಸಿದೆ. ಕೋಟ್ಯಾಂತರ ರೂ. ಹಣ ನೀಡಿ, ಅಭಿವೃದ್ಧಿಗೆ ಸಹಕರಿಸಿದೆ. ಈ ಅಭಿವೃದ್ಧಿ ಕಾರ್ಯ ಮುಂದುವರೆಯಬೇಕೆಂದರೆ ನಾನು ಮತ್ತೆ ಗೆಲ್ಲಬೇಕು. ರಾಜ್ಯದಲ್ಲಿ ಬಿಜೆಪಿ ಸರ್ಕಾರವನ್ನು ಅಸ್ತಿತ್ವಕ್ಕೆ ತರಬೇಕೆಂದು ಮನವಿ ಮಾಡಿದರು.

> ನಾನು ಕಳೆದ ಉಪ ಚುನಾವಣೆಯಲ್ಲಿ ನೀಡಿದ ಭರವಸೆ ಈಡೇರಿಸಿದ್ದೇನೆ. ಕೊಟ್ಟ ಮಾತಿನಂತೆ ನಾರಾಯಣಗೌಡರಿಗೆ ಸಚಿವ ಸ್ಥಾನ ನೀಡಿ, ತಾಲೂಕಿನ ಅಭಿವೃದ್ಧಿಗೆ 1800 ಕೋಟಿ ಹೆಚ್ಚಿನ ಅನುದಾನ ನೀಡಿದ್ದೇನೆ. ಇದರಲ್ಲಿ ನಮ್ಮ ರೈತರಿಗೆ ಅನುಕೂಲವಾಗಲೆಂದು ಸಂತೇಬಾಚಹಳ್ಳಿ, ಶೀಳನೆರೆ, ಬೂಕನಕೆರೆ, ಅಕ್ಕಿಹೆಬ್ಬಾಳು ಹೋಬಳಿಗಳಿಗೆ ಏತ ನೀರಾವರಿ ಯೋಜನೆ ಮಂಜೂರು ಮಾಡಿದ್ದೇನೆ. ಹಾಗಾಗಿ ನಮ್ಮ ಬಿಜೆಪಿ ಅಭ್ಯರ್ಥಿ, ಸಚಿವ ನಾರಾಯಣಗೌಡರನ್ನು ಚುನಾವಣೆಯಲ್ಲಿ ಗೆಲ್ಲಿಸುವ ಮೂಲಕ ನಮ್ಮ ಪಕ್ಷದಲ್ಲಿ ಮತ್ತೊಮ್ಮೆ ಸಚಿವರಾಗಲು ಅವಕಾಶ ನೀಡಬೇಕು.
>
> - ಯಡಿಯೂರಪ್ಪ, ಮಾಜಿ ಮುಖ್ಯಮಂತ್ರಿ

ನುಡಿದಂತೆ ನಡೆಯುವ ವ್ಯಕ್ತಿ ಎಂದರೆ ಅದು ಬಿ.ಎಸ್.ಯಡಿಯೂರಪ್ಪ. ನನ್ನನ್ನು ಪಕ್ಷಕ್ಕೆ ಕರೆಸಿಕೊಂಡು ಗೆಲ್ಲಿಸಿ, ಮಂತ್ರಿ ಮಾಡಿ, ಅಭಿವೃದ್ಧಿಗೆ ಸಹಕರಿಸಿದರು. ಕೆ.ಆರ್.ಪೇಟೆ ಈ ಮಟ್ಟಕ್ಕೆ ಅಭಿವೃದ್ಧಿ ಕಂಡಿದೆ ಎಂದರೆ ಅದಕ್ಕೆ ಬಿ.ಎಸ್.ಯಡಿಯೂರಪ್ಪ ಕಾರಣ. ಸುಳ್ಳು ಆಶ್ವಾಸನೆ ನೀಡಿ ಜನರನ್ನು ವಂಚಿಸುವ ಜೆಡಿಎಸ್‌ನಿಂದ ಯಾವುದೇ ಅಭಿವೃದ್ಧಿ ಸಾಧ್ಯವಿಲ್ಲ. ಈ ಬಾರಿ ಕೆ.ಆರ್.ಪೇಟೆ ಜನ ಜೆಡಿಎಸ್ ಹಾಗೂ ಕಾಂಗ್ರೆಸ್ ಅನ್ನು ತಿರಸ್ಕರಿಸಿ ಬಿಜೆಪಿ ಅಭ್ಯರ್ಥಿ ಆದ ನನ್ನನ್ನ ಗೆಲ್ಲಿಸಿ ಎಂದರು.

ಕಾರ್ಯಕ್ರಮಕ್ಕೂ ಮುನ್ನ ತಾಲೂಕಿನ ಅಗ್ರಹಾರಬಾಚಹಳ್ಳಿ ಗೇಟ್ ಬಳಿಯ ಹೆಲಿಪ್ಯಾಡ್‌ನಿಂದ ತೆರೆದ ವಾಹನದಲ್ಲಿ ನೂರಾರು ಬೈಕ್ ರ‍್ಯಾಲಿ ಮೂಲಕ ಪಟ್ಟಣದಲ್ಲಿ ರೋಡ್ ಶೋ ನಡೆಸಿದ ಯಡಿಯೂರಪ್ಪ ನಂತರ ಬೂಕನಕೆರೆ ಗ್ರಾಮಕ್ಕೆ ತೆರಳಿ ತಮ್ಮ ಮನೆ ದೇವರು ಅಕ್ಕಯ್ಯಮ್ಮ ಮತ್ತು ಗ್ರಾಮ ದೇವತೆ ಗೋಗಾಲಮ್ಮ ದೇವರಿಗೆ ವಿಶೇಷ ಪೂಜೆ ಸಲ್ಲಿಸಿ ನಂತರ ಕಾರ್ಯಕ್ರಮದಲ್ಲಿ ಭಾಗವಹಿಸಿದರು.

ವೇದಿಕೆಯಲ್ಲಿ ಸಂಸದೆ ಸುಮಲತಾ, ತಾಲೂಕು ಬಿಜೆಪಿ ಉಸ್ತುವಾರಿ ರಾಜೇಶ್ ಬಾಟಿಯಾ, ಜಿಪಂ ಮಾಜಿ ಸದಸ್ಯರಾದ ಕಿಕ್ಕೇರಿ ಪ್ರಭಾಕರ್, ಅಂಬರೀಷ್, ಪಾಪೇಗೌಡ, ಮುಡಾ ಅಧ್ಯಕ್ಷ ಕೆ.ಶ್ರೀನಿವಾಸ್, ಬಿಜೆಪಿ ಮುಖಂಡರಾದ ಮಂಜು, ಬಸ್ ಸಂತೋಷ್‌ಕುಮಾರ್, ರಾಜಾಹುಲಿ ದಿನೇಶ್, ಮೀನಾಕ್ಷಿ, ಜವರಾಯಿಗೌಡ, ವಿ.ಡಿ.ಹರೀಶ್, ಗ್ರಾಪಂ ಮಾಜಿ ಅಧ್ಯಕ್ಷ ರಮೇಶ್, ಮಾಜಿ ಸದಸ್ಯ ಕೆ.ಎಸ್.ಹರಪ್ರಸಾದ್, ಎಂಡಿಸಿಸಿ ಬ್ಯಾಂಕ್ ಮಾಜಿ ಅಧ್ಯಕ್ಷ ವಿ.ಡಿ.ಹರೀಶ್, ಚಂದ್ರಮೋಹನ್, ಭರತ್, ತಾಲೂಕು ಬಿಜೆಪಿ ಅಧ್ಯಕ್ಷ ಪರಮೇಶ್ ಅರವಿಂದ್, ಮಾಜಿ ಅಧ್ಯಕ್ಷ ಮಂಜು, ಕಾರ್ಯದರ್ಶಿ ಪ್ರಕಾಶ್, ಯಡಿಯೂರಪ್ಪ ಅಭಿಮಾನಿಗಳ ಸಂಘದ ಅಧ್ಯಕ್ಷ ಮಧುಸೂಧನ್, ಸಚಿವರ ಆಪ್ತ ಸಹಾಯಕ ದಯಾನಂದ್ ಸೇರಿದಂತೆ ಇತರರಿದ್ದರು.

ಜೆಡಿಎಸ್ ಅಭ್ಯರ್ಥಿ ರಾಮಚಂದ್ರ ಅಬ್ಬರದ ಪ್ರಚಾರ



ಮಂಡ್ಯ, ಮೇ 4– ಮಂಡ್ಯ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಬಿ.ಆರ್.ರಾಮಚಂದ್ರ ಅವರು ಕೆರಗೋಡು ಹೋಬಳಿಯ ವಿವಿಧ ಗ್ರಾಮಗಳಲ್ಲಿ ಅಬ್ಬರದ ಚುನಾವಣೆ ಪ್ರಚಾರ ನಡೆಸಿದರು.

ತಾಲೂಕಿನ ಆಲಕೆರೆ ಗ್ರಾಮದ ಬಸವೇಶ್ವರ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ ಹೊನಗಹಳ್ಳಿ ಮಠ, ಹೊಡಾಘಟ್ಟ, ಡಣಾಯಕನಪುರ, ಈಚಗೆರೆ, ಕೀಲಾರ, ಮುದ್ದಂಗೆರೆ, ನಲ್ಲಹಳ್ಳಿ, ಹೊನ್ನಾಯಕನಹಳ್ಳಿ, ಮಾರಗೌಡನಹಳ್ಳಿ, ದೊಡ್ಡ ಬಾಣಸವಾಡಿ ಸೇರಿದಂತೆ ವಿವಿಧ ಗ್ರಾಮಗಳಲ್ಲಿ ರೋಡ್ ಶೋ ನಡೆಸಿ ಚುನಾವಣಾ ಪ್ರಚಾರ ನಡೆಸಿದರು. ನಂತರ ಮಾತನಾಡಿದ ಬಿ.ಆರ್.ರಾಮಚಂದ್ರ ಅವರು, ಪಂಚರತ್ನ ಯೋಜನೆಗಳಲ್ಲಿ ರೈತರಿಗಾಗಿ ಯೋಜನೆಗಳನ್ನು ರೂಪಿಸಲಾಗಿದೆ. ಆರೋಗ್ಯ ವಿಚಾರಕ್ಕೆ ಹೆಚ್ಚಿನ ಆದ್ಯತೆ ನೀಡಲಾಗಿದೆ. ಯಾವುದೇ ಖಾಯಿಲೆ ಬರಲಿ ಎಲ್ಲದಕ್ಕೂ ಸರ್ಕಾರ ಹಣ ಭರಿಸುತ್ತದೆ. ರೈತರಿಗೆ ಬಿತ್ತನೆ, ಗೊಬ್ಬರ ತೆಗೆದುಕೊಳ್ಳುವುದಕ್ಕೆ 10 ಸಾವಿರ ನೀಡಲಾಗುವುದು. ರೈತನ ಮಕ್ಕಳನ್ನು ಮದುವೆಯಾಗುವ ಹೆಣ್ಣು ಮಕ್ಕಳಿಗೆ 2 ಲಕ್ಷ ರೂ. ಪ್ರೋತ್ಸಾಹಧನ ನೀಡುತ್ತೇವೆ. ಅಷ್ಟೇ ಅಲ್ಲದೇ ರೈತರಿಗೆ ಕೃಷಿ ಖರ್ಚಿಗಾಗಿ ವರ್ಷಕ್ಕೆ ಎಕರೆಗೆ 10 ಸಾವಿರ ರೂ.ಗಳಂತೆ 10 ಎಕರೆಯವರೆಗೆ ಸಹಾಯಧನ ನೀಡುತ್ತೇವೆ. ತಾವೆಲ್ಲರೂ ಜೆಡಿಎಸ್ ಪಕ್ಷಕ್ಕೆ ಮತ ನೀಡಿದರೆ ಕುಮಾರಸ್ವಾಮಿ ಮುಖ್ಯಮಂತ್ರಿ ಆಗಲು ಸಾಧ್ಯ. ಅದಕ್ಕಾಗಿ ನನಗೆ ಆಶೀರ್ವಾದ ಮಾಡಿ ಎಂದು ಮನವಿ ಮಾಡಿದರು.

ನಮ್ಮ ಪಕ್ಷದ ಕಾರ್ಯಕರ್ತರೇ ನಮ್ಮ ಸ್ಟಾರ್ ಪ್ರಚಾರಕರು. ಹಾಗಾಗಿ ಪ್ರಾದೇಶಿಕ ಪಕ್ಷವನ್ನು ನಮ್ಮ ಸ್ಟಾರ್‌ಗಳು ಕೈ ಬಿಡುವುದಿಲ್ಲ ಎಂದರು.

ಈ ವೇಳೆ ಮನ್‌ಮುಲ್ ಉಪಾಧ್ಯಕ್ಷ ಎಂ.ಎಸ್.ರಘುನಂದನ್, ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕ ಬಾಲು, ಮುಖಂಡರಾದ ಕೆ.ಎಲ್.ಕೃಷ್ಣ, ರಾಜು, ವಸಂತರಾಜು ಇತರರಿದ್ದರು.

ಶಾಸಕ ರವೀಂದ್ರ ಬೆಂಬಲಿಗರಿಂದ ಹಲ್ಲೆ, ಪ್ರಚಾರಕ್ಕೆ ಅಡ್ಡಿ



ಮಂಡ್ಯ, ಮೇ 4– ಶ್ರೀರಂಗಪಟ್ಟಣ ಕ್ಷೇತ್ರದ ವೇಳಾಪುರದಲ್ಲಿ ಪ್ರಚಾರ ನಡೆಸುವ ವೇಳೆ ಹಾಲಿ ಶಾಸಕ ರವೀಂದ್ರ ಶ್ರೀಕಂಠಯ್ಯ ಬೆಂಬಲಿಗರು ಪ್ರಚಾರಕ್ಕೆ ಅಡ್ಡಿಪಡಿಸಿದ್ದಾರೆ ಎಂದು ಕ್ಷೇತ್ರದ ಪಕ್ಷೇತರ ಅಭ್ಯರ್ಥಿ ತಗ್ಗಹಳ್ಳಿ ವೆಂಕಟೇಶ್ ಆರೋಪಿಸಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರಚಾರ ಮಾಡುವ ವೇಳೆ ಏಕಾಏಕಿ ಮಧ್ಯೆ ಪ್ರವೇಶಿಸಿ, ಅವಾಚ್ಯ ಶಬ್ದಗಳಿಂದ ನಿಂದಿಸಿ, ಭಾಷಣಕ್ಕೆ ಅಡ್ಡಿಪಡಿಸಿ, ನಮ್ಮ ಬೆಂಬಲಿಗರ ಮೇಲೆ ಹಲ್ಲೆಗೆ ಮುಂದಾದರು. ಈ ಸಂದರ್ಭದಲ್ಲಿ ಗ್ರಾಮದ ಮುಖಂಡರು ಮಧ್ಯೆ ಪ್ರವೇಶಿಸಿ ಪರಿಸ್ಥಿತಿ ತಿಳಿಗೊಳಿಸಿದರು. ಈ ಸಂಬಂಧ ಚುನಾವಣಾಧಿಕಾರಿಗಳಿಗೆ ದೂರು ಸಲ್ಲಿಸುವುದಾಗಿ ತಿಳಿಸಿದರು.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಎಲ್ಲರಿಗೂ ಪ್ರಚಾರ ನಡೆಸುವ ಹಕ್ಕಿದೆ. ಸೋಲಿನ ಭೀತಿಯಿಂದ ಹತಾಶರಾಗಿ ಶಾಸಕರು ಈ ರೀತಿ ಗೂಂಡಾವರ್ತನೆ ನಡೆಸುತ್ತಿದ್ದಾರೆ. ಈ ರೀತಿಯ ಗೂಂಡಾಗಿರಿಗೆಲ್ಲಾ ಹೆದರುವವರು ನಾವಲ್ಲ ಎಂದು ತಿರುಗೇಟು ನೀಡಿದರು.

ಹಾಲಿ–ಮಾಜಿ ಶಾಸಕರು ಹಾಗೂ ಬಿಜೆಪಿ ಅಭ್ಯರ್ಥಿ ಕ್ಷೇತ್ರದಲ್ಲಿ ಹಣ, ಹೆಂಡದ ಹೊಳೆ ಹರಿಸುತ್ತಿದ್ದಾರೆ. ಚುನಾವಣಾಧಿಕಾರಿಗಳು ಈ ಸಂಬಂಧ ಸೂಕ್ಷ್ಮ ಗಮನ ಹರಿಸಬೇಕೆಂದು ತಿಳಿಸಿದರು. ತಗ್ಗಹಳ್ಳಿ ವೆಂಕಟೇಶ್ ಕಣದಿಂದ ನಿವೃತ್ತಿ ಹೊಂದುತ್ತಿದ್ದಾರೆ ಎಂದು ಕ್ಷೇತ್ರದಲ್ಲಿ ನನ್ನ ವಿರುದ್ಧ ಅಪಪ್ರಚಾರ ಮಾಡುತ್ತಿದ್ದಾರೆ. ಕ್ಷೇತ್ರದ ಮತದಾರರು ಈ ಬಾರಿ ಬದಲಾವಣೆ ಬಯಸಿದ್ದು, ಗೆಲ್ಲುವ ವಿಶ್ವಾಸವಿದೆ ಎಂದು ಹೇಳಿದರು.

ನಾನು ಕೇವಲ ಕೊತ್ತತ್ತಿ ಪಂಚಾಯಿತಿ ವ್ಯಾಪ್ತಿಗೆ ಸೀಮಿತವಾಗಿಲ್ಲ. ನಮ್ಮ ಬೆಂಬಲಿಗರು ಹಿತೈಷಿಗಳು ಕ್ಷೇತ್ರಾದ್ಯಂತ ಇದ್ದಾರೆ. ಶಾಸಕರು ಹಾಗೂ ಬೆಂಬಲಿಗರು ಇದೇ ಧೋರಣೆ ಅನುಸರಿಸಿದರೆ ಪ್ರತಿಭಟನೆ ನಡೆಸುತ್ತಾರೆ. ಇನ್ನು ಮುಂದಾದರೂ ಈ ರೀತಿಯ ವರ್ತನೆ ಬಿಡಬೇಕು. ಶಾಸಕರು ತಮ್ಮ ಬೆಂಬಲಿಗರಿಗೆ ಬುದ್ಧಿ ಹೇಳಬೇಕು. ಇಲ್ಲದಿದ್ದರೆ ಮುಂದೆ ಆಗುವ ಅನಾಹುತಗಳಿಗೆ ಶಾಸಕರೇ ಜವಾಬ್ದಾರರಾಗಬೇಕಾಗುತ್ತದೆ ಎಂದು ಎಚ್ಚರಿಸಿದರು.

ನಾಮಪತ್ರ ಸಲ್ಲಿಸುವ ವೇಳೆ, ನನ್ನ ನಾಮಪತ್ರ ತಿರಸ್ಕರಿಸುವಂತೆ ಚುನಾವಣಾಧಿಕಾರಿಗಳಿಗೆ ಧಮ್ಕಿ ಹಾಕಿದ್ದರು. ನಾನು ಜನರ ಮಧ್ಯೆ ಇದ್ದುಕೊಂಡು ಗೌರವಯುತ ರಾಜಕಾರಣ ಮಾಡಿಕೊಂಡು ಬಂದಿದ್ದೇನೆ ಎಂದರು.

ಸುದ್ದಿಗೋಷ್ಠಿಯಲ್ಲಿ ಬೆಂಬಲಿಗರಾದ ಮೊತ್ತಹಳ್ಳಿ ಕೆಂಪೇಗೌಡ, ಹನಿಯಂಬಾಡಿ ಪುಟ್ಟೇಗೌಡ, ದರ್ಶನ್ ಚೀರನಹಳ್ಳಿ, ಮುರುಳಿ, ಮಂಗಲ ಲಂಕೇಶ್ ಹಾಜರಿದ್ದರು.

ವಚನ ಭ್ರಷ್ಟ ಬಿಜೆಪಿ ಸರ್ಕಾರ: ಸಿದ್ದರಾಮಯ್ಯ ಕಿಡಿ



ಮಳವಳ್ಳಿ, ಮೇ 4– ಕೊಟ್ಟ ಮಾತಿನಂತೆ ನಡೆಯದ ಪ್ರಧಾನಿ ಮೋದಿ 15 ಲಕ್ಷ ಯುವಕರಿಗೆ ಉದ್ಯೋಗ ನೀಡುತ್ತೇವೆ ಎಂದು ಹಲವು ಭರವಸೆ ನೀಡಿ ಅಧಿಕಾರ ಹಿಡಿದು ಬಳಿಕ ಯುವಕರಿಗೆ ಉದ್ಯೋಗ ನೀಡದೇ ಸುಳ್ಳಿನ ಸರಮಾಲೆ ಹೇಳಿಕೊಂಡು ಜನರಿಗೆ ಹಾಗೂ ಯುವಕರಿಗೆ ಮೋಸ ಮಾಡುತ್ತಿರುವ ಬಿಜೆಪಿಯದ್ದು ವಚನ ಭ್ರಷ್ಟ ಸರ್ಕಾರ ಎಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಕಿಡಿಕಾರಿದರು.

ಪಟ್ಟಣದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಪಿ.ಎಂ.ನರೇಂದ್ರಸ್ವಾಮಿ ಪರ ಮತಯಾಚನೆ ಹಾಗೂ ಕಾರ್ಯಕರ್ತರ ಸಭೆ ಉದ್ಘಾಟಿಸಿ ಮಾತನಾಡಿದ ಅವರು, ಜನರಿಗೆ ವಂಚಿಸುತ್ತಿರುವ ಬಿಜೆಪಿ ಸರ್ಕಾರ ಯಾವ ಮುಖ ಇಟ್ಟುಕೊಂಡು ಜನರ ಮುಂದೆ ಮತ ಕೇಳಲು ಬರುತ್ತಿದ್ದಾರೆ ಎಂದು ಪ್ರಶ್ನಿಸಿದರು. ಅಚ್ಛೇದಿನ್ ಎಂದು ಹೇಳುತ್ತಾರೆ. ಬೆಲೆ ಏರಿಕೆಯೇ ಬಿಜೆಪಿಯ ಅಚ್ಛೇದಿನ್ ಆಗಿದ್ದು, ಅಡಿಗೆ ಅನಿಲ ಬೆಲೆ ಹೆಚ್ಚಾಗಿ ಗೃಹಿಣಿಯರು ಸೌದೆ ಒಲೆಯತ್ತ ಮುಖ ಮಾಡುತ್ತಿದ್ದಾರೆ. ಇಂಧನ ಬೆಲೆ ಹೆಚ್ಚಾಗಿದೆ. ಕೇಂದ್ರದಲ್ಲಿ, ರಾಜ್ಯದಲ್ಲಿ ಭ್ರಷ್ಟಾಚಾರ ಸರ್ಕಾರ ನಡೆಸುತ್ತಿರುವ ನೀವು ಜನರಿಗೆ ಅಚ್ಛೇದಿನ್ ಎಂದು ಹೇಳುತ್ತೀರಾ? ಗುತ್ತಿಗೆದಾರ ಕೆಂಪಣ್ಣ 40 ಪರ್ಸೆಂಟ್ ಕಮಿಷನ್ ಕೇಳುತ್ತಿದ್ದಾರೆ ಎಂದು ನಿಮಗೆ ಪತ್ರ ಬರೆದರಲ್ಲ ಅದಕ್ಕೆ ಉತ್ತರವೇ ಕೊಡಲಿಲ್ಲ ಎಂದು ಮೋದಿ ವಿರುದ್ಧ ಕಿಡಿಕಾರಿದರು. ವೇದಿಕೆಯಲ್ಲಿ ಮಾಜಿ ಸಚಿವರಾದ ಎನ್.ಚಲುವರಾಯಸ್ವಾಮಿ, ಬಿ.ಸೋಮಶೇಖರ್, ವಿಧಾನಪರಿಷತ್ ಸದಸ್ಯ ಮರಿತಿಬ್ಬೇಗೌಡ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ದೇವರಾಜು, ಮಾಜಿ ತಾಪಂ ಅಧ್ಯಕ್ಷ ಸುಂದರೇಶ್, ಪುರಸಭೆ ಸದಸ್ಯ ಶಿವಸ್ವಾಮಿ, ಮುಖಂಡರಾದ ಕೃಷ್ಣ, ಸುಷ್ಮಾ ರಾಜು, ವೇದಮೂರ್ತಿ ಇತರರಿದ್ದರು.

ಮೂರನೇ ಪುಟದಿಂದ

ಮೈಸೂರಲ್ಲಿ ಮೊಳಗುತ್ತಿದೆ ಹನುಮಾನ್ ಚಾಲೀಸಾ



ಅಂಬಾಭವಾನಿ ಮಹಿಳಾ ಸಮಾಜದ ಕಚೇರಿಯಲ್ಲಿ ಮಹಿಳೆಯರು ಹನುಮಾನ್ ಚಾಲೀಸಾ ಪಠಿಸಿದರು.



ವಿದ್ಯಾರಣ್ಯಪುರಂನ ಗುರುದೇವಾಶ್ರಮದಲ್ಲಿ ಹಿಂದೂ ಕಾರ್ಯಕರ್ತರು ಹನುಮ ಭಜನೆ ಮಾಡಿದರು.

ವಿರುದ್ಧ ಸಿಡಿದೆದ್ದು, ಧರ್ಮ ವಿರೋಧಿ ಕೃತ್ಯ ನಡೆಸು ವವರಿಗೆ ಸಿಂಹಸ್ವಪ್ನವಾಗಿರುವ ಯುವಕರ ಸಂಘಟನೆ. ಚುನಾವಣೆಗಾಗಿ ಒಂದು ಸಮು ದಾಯದ ಓಲೈಕೆ ರಾಜಕಾರಣ ಮಾಡು ತ್ತಿರುವ ಕಾಂಗ್ರೆಸ್‌ಗೆ ಜನ ತಕ್ಕ ಪಾಠ ಕಲಿ ಸುತ್ತಾರೆ ಎಂದರು. ಈ ಸಂದರ್ಭದಲ್ಲಿ ಗುರುದೇವಾಶ್ರಮದ ಸುಬ್ರಹ್ಮಣ್ಯ, ಚೆಟ್ಟಪ್ಪ, ವಿಕ್ರಂ ಅಯ್ಯಂಗಾರ್, ಸೆಂದಿಲ್ ಕುಮಾರ್, ಶ್ರೀಧರ್, ತೇಜಸ್, ಪ್ರದೀಪ್, ಲೋಕೇಶ್, ನಾಗಭೂಷಣ್ ಮತ್ತಿತರರು ಉಪಸ್ಥಿತರಿದ್ದರು.

ಮಹಿಳೆಯರಿಂದ ಹನುಮಾನ್ ಚಾಲೀಸ್: ಚಾಮುಂಡಿ ಬೆಟ್ಟ ಪಾದದಲ್ಲಿರುವ ಅಂಬಾಭವಾನಿ ಮಹಿಳಾ ಸಮಾಜದ ಕಚೇರಿಯಲ್ಲಿ ಮಹಿಳೆಯರು ಸಾಮೂಹಿಕ ಹನುಮಾನ್ ಚಾಲೀಸ್ ಪಠಣದ ಮೂಲಕ ಭಜರಂಗದಳ ನಿಷೇಧಿಸುವುದಾಗಿ ಹೇಳಿರುವ ಕಾಂಗ್ರೆಸ್ ಇಂಗಿತವನ್ನು ವಿರೋಧಿಸಿದರು. ಸಮಾಜದ ಅಧ್ಯಕ್ಷೆ ಸವಿತಾ ಘಾಟ್ಕೆ, ರೂಪ ರಾಘವೇಂದ್ರ, ನಳಿನಾ ತಮ್ಮಯ್ಯ, ವಕೀಲೆ ಜಯಶ್ರೀ, ರತ್ನ, ಶಶಿ, ಪಾರ್ವತಿ, ಗೀತಾ ಗಣೇಶ್ ಮತ್ತಿತರರು ಭಾಗವಹಿಸಿದ್ದರು.

ಅಭಿಮಾನಿಯಾಗಿ ಸರಿ ಕಾಣಲಿಲ್ಲ: ಪ್ರತಾಪ್‌ಸಿಂಹ

ಹೊರತಾಗಿ ನೋಡುತ್ತೇವೆ. ಕನ್ನಡಿಗರೆಲ್ಲರಿಗೂ ರಾಜ್ ಕುಟುಂಬದ ಮೇಲೆ ಅಪಾರ ಪ್ರೀತಿ, ಗೌರವ ಇದೆ. ಸ್ವಾಭಿಮಾನದ ಸಂಕೇತವಾಗಿ ನಾವು ಅವರನ್ನು ನೋಡುತ್ತೇವೆ ಎಂದು ಹೇಳಿದರು. ಸೋಮಣ್ಣ ಅವರು ಅವರ ಕ್ಷೇತ್ರದಲ್ಲಿ ಆಸ್ಪತ್ರೆ ಕಟ್ಟಿ ಅದಕ್ಕೆ ಪುನೀತ್ ರಾಜ್ ಕುಮಾರ್ ಹೆಸರಿಟ್ಟರು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಪುನೀತ್‌ಗೆ ಕರ್ನಾಟಕ ರತ್ನ ಪ್ರಶಸ್ತಿಯನ್ನು ಘೋಷಿಸಿದರು. ಇದು ರಾಜ್ ಕುಟುಂಬವನ್ನು ನಾವು ರಾಜಕೀಯದ ಹೊರತಾಗಿಯೇ ನೋಡುತ್ತಿದ್ದೇವೆ ಎನ್ನುವುದಕ್ಕೆ ಸಾಕ್ಷಿ ಎಂದು ಪ್ರತಾಪ್ ಸಿಂಹ ಹೇಳಿದರು. ರಾಜ್‌ಕುಮಾರ್ ಅವರು ಜೀವಿತಾವಧಿಯಲ್ಲಿ ರಾಜಕೀಯದ ಗಂಧ–ಗಾಳಿ, ಸೋಂಕು ಅಂಟಿಸಿಕೊಂಡಿರಲಿಲ್ಲ. ಅವರು ಬಂಗಾರಪ್ಪನವರ ಬೀಗರಾಗಿದ್ದರೂ ರಾಜಕೀಯದ ಕಡೆ ತಿರುಗಿಯೂ ನೋಡಲಿಲ್ಲ. ಅಂಥ ಕುಟುಂಬದ ಶಿವರಾಜ್‌ಕುಮಾರ್ ಈಗ ಒಂದು ಪಕ್ಷದ ಪರವಾಗಿ, ವ್ಯಕ್ತಿಯ ಪರವಾಗಿ ಪ್ರಚಾರ ಮಾಡಿದ್ದು ವೈಯುಕ್ತಿಕವಾಗಿ ನಾನು ಆ ಕುಟುಂಬದ ಅಭಿಮಾನಿಯಾಗಿ ನನಗೆ ಸರಿ ಕಾಣಲಿಲ್ಲ ಎಂದರು. ಗೀತಾ ಶಿವರಾಜ್‌ಕುಮಾರ್ ರಾಜಕೀಯದ ಹಿನ್ನೆಲೆಯಿಂದ ಬಂದವರು, ಅವರ ತಂದೆಯಿಂದಲೇ ರಾಜಕೀಯ ಮೈಗೂಡಿಸಿಕೊಂಡವರು. ಈ ಹಿಂದೆ ಜೆಡಿಎಸ್‌ನಿಂದ ಶಿವಮೊಗ್ಗದಲ್ಲಿ ಲೋಕಸಭಾ ಚುನಾವಣೆಗೆ ಸ್ಪರ್ಧಿಸಿದ್ದರು. ಇಡೀ ಚಿತ್ರರಂಗ ಕ್ಯಾಂಪೇನ್ ಮಾಡಿತ್ತು. ಆಗಲೂ ಪುನೀತ್ ರಾಜ್‌ಕುಮಾರ್ ಪ್ರಚಾರಕ್ಕೆ ಹೋಗಿರಲಿಲ್ಲ. ಎಂದರು. ಬಿಜೆಪಿ ಸಂಸದನಾಗಿ ಅಲ್ಲ, ಅಣ್ಣಾವ್ರ ಅಭಿಮಾನಿಯಾಗಿ, ಪುನೀತ್ ಅಭಿಮಾನಿಯಾಗಿ, ಎಲ್ಲದ್ದಕ್ಕಿಂತ ಮುಖ್ಯವಾಗಿ ಶಿವಣ್ಣನ ಅಭಿಮಾನಿ ಕೂಡ ಹೌದು. ಅವರ ಆನಂದ್, ರಥಸಪ್ತಮಿ, ಮನಮೆಚ್ಚಿದ ಹುಡುಗಿ ಚಿತ್ರಗಳನ್ನು ನೋಡಿ ಹ್ಯಾಟ್ರಿಕ್ ಹೀರೋ ಎಂದು ಮೆಚ್ಚಿದ್ದವರು ನಾವು. ಈ ಕುಟುಂಬದವರು ನಮಗೆ ಕೇವಲ ನಟರಲ್ಲ, ಅವರೊಂದಿಗೆ ಭಾವನಾತ್ಮಕ ನಂಟು ಹೊಂದಿದ್ದೇವೆ ಎಂದು ಸಂಸದ ಪ್ರತಾಪ್ ಸಿಂಹ ತಿಳಿಸಿದ್ದಾರೆ.

ದರ್ಬಾರ್‌ಗೆ ಬಿಜೆಪಿ ಅಭ್ಯರ್ಥಿಗಳ ಅಪಸ್ವರ

ಕೇಂದ್ರದ ಯಾವ ನಾಯಕರ ಬಗ್ಗೆಯು ನಮ್ಮ ಮತದಾರರಿಗೆ ಪರಿಚಯವಿಲ್ಲ. ಇಂತಹವರನ್ನು ಮುಂದಿಟ್ಟುಕೊಂಡು ಪ್ರಚಾರ ನಡೆಸಿದರೆ, ಲಾಭಕ್ಕಿಂತ ನಷ್ಟವಾಗುತ್ತದೆ. ಕೊನೆಯ ದಿನಗಳಲ್ಲಿ ರಾಜ್ಯ ಹಾಗೂ ಕೇಂದ್ರ ಘಟಕಗಳು ಚುನಾವಣಾ ಪ್ರಚಾರದ ತಂತ್ರವನ್ನು ಒಂದಷ್ಟು ಬದಲಾವಣೆ ಮಾಡಿಕೊಳ್ಳಬೇಕೆಂಬ ಮಾಹಿತಿ ನೀಡಿದ್ದಾರೆ.

ಮೋದಿ, ಅಮಿತ್ ಷಾ, ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಸೇರಿದಂತೆ 19ಕ್ಕೂ ಹೆಚ್ಚು ದೆಹಲಿ ತಂಡವೇ ಇದೆ. ಇದಲ್ಲದೆ, ವಿವಿಧ ರಾಜ್ಯಗಳ ನಮ್ಮ ಪಕ್ಷದ ಶಾಸಕರು, ಸಚಿವರು ಕ್ಷೇತ್ರಗಳಲ್ಲಿ ಬಿಡಾರ ಹೂಡಿದ್ದಾರೆ. ನಾವು ನಮ್ಮ ಪ್ರಚಾರ ಮಾಡುತ್ತೇವೆ. ಕೇಂದ್ರೀಯ ಮಟ್ಟದಲ್ಲಿ ನೀವು ರೋಡ್ ಶೋ ಮತ್ತು ಪ್ರಚಾರ ಮಾಡಿ, ನಮ್ಮ ಮತದಾರರನ್ನು ಮುಟ್ಟಲು ನಮಗೂ ಒಂದಷ್ಟು ಸಮಯಾವಕಾಶ ಬೇಕಿದೆ ಎಂದಿದ್ದಾರೆ. ಸತತವಾಗಿ ರೋಡ್ ಶೋ ಮತ್ತು ಸಭೆಗಳಿಂದ ಜನತೆಗೂ ಒಂದಷ್ಟು ಬೇಸರ ಬಂದಿದೆ. ಅವರಿಗೆ ಬೇಸರ ತಂದು ನಾವು ಮತ ಪಡೆಯಲು ಸಾಧ್ಯವಿಲ್ಲ. ಇದನ್ನು ವರಿಷ್ಠರು ಅರ್ಥ ಮಾಡಿಕೊಳ್ಳಬೇಕೆಂದಿದ್ದಾರೆ. ಕೆಲವು ಅಭ್ಯರ್ಥಿಗಳಂತೂ ನೇರವಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ಬಳಿ ತಮ್ಮ ಅಳಲು ತೋಡಿಕೊಂಡಿದ್ದಾರೆ.

ಪ್ರಧಾನಿ ಮೋದಿ 40 ಕಿಮೀ ರೋಡ್ ಶೋ

ಮಂದಿಯನ್ನು ಸೇರಿಸಲು ಬಿಜೆಪಿ ನಿರ್ಧರಿಸಿರುವುದಲ್ಲದೆ, ನಗರದಲ್ಲಿ ಕಣಕ್ಕಿಳಿದಿರುವ ಪಕ್ಷದ ಅಭ್ಯರ್ಥಿಗಳು ಮತ್ತು ಕಾರ್ಯಕರ್ತರಿಗೆ ಕೆಲವು ಟಾಸ್ಕ್‌ಗಳನ್ನು ನೀಡಿದೆ. ರೋಡ್ ಶೋ ಸಂದರ್ಭದಲ್ಲಿ ಆರ್‌ಎಸ್‌ಎಸ್ ಪ್ರಮುಖ ಪಾತ್ರ ವಹಿಸಿ, ಮೋದಿ ಅವರ ರೋಡ್ ಶೋವನ್ನು ಬಿಜೆಪಿ ಪರ ಅಲೆ ಎಬ್ಬಿಸಲು ತಂತ್ರ ರೂಪಿಸಲಾಗಿದೆ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ನಗರದಲ್ಲಿ ಕಾಂಗ್ರೆಸ್ ಮೇಲುಗೈ ಸಾಧಿಸಿತ್ತು. ಆನಂತರ ಕಾಂಗ್ರೆಸ್‌ನ ಆರು ಶಾಸಕರು ಆಪರೇಷನ್ ಕಮಲಕ್ಕೆ ಒಳಗಾಗಿ ಬಿಜೆಪಿ ಸೇರ್ಪಡೆಗೊಂಡರು. 28 ಕ್ಷೇತ್ರಗಳಲ್ಲಿ ಕನಿಷ್ಠ 20 ಕ್ಷೇತ್ರಗಳನ್ನು ಬುಟ್ಟಿಗೆ ಹಾಕಿಕೊಳ್ಳಬೇಕೆಂದು ಹಠಕ್ಕೆ ಬಿದ್ದಿರುವ ಬಿಜೆಪಿ ಪ್ರಧಾನಿಯವರ ವರ್ಚಸ್ಸು ಬಳಕೆ ಮಾಡಲು ಮುಂದಾಗಿದೆ.

ಅಂಬಾರಿ ಹೊತ್ತಿದ್ದ ಬಲರಾಮ ಅಸ್ವಸ್ಥ

ಯಂತ್ರದ ಮೂಲಕ ಎಂಡೋಸ್ಕೋಪಿ ಸಹ ಮಾಡಲಾಗಿದ್ದು, ವರದಿಗಾಗಿ ಕಾಯಲಾಗುತ್ತಿದೆ

ರಾಗಿ ಗಂಜಿ, ಬಾಳೆ ಹಣ್ಣು: ಬಲರಾಮ ಕಳೆದ ಹತ್ತು ದಿನಗಳಿಂದ ತೀವ್ರ ಅಸ್ವಸ್ಥಗೊಂಡಿದ್ದು, ಪಶು ವೈದ್ಯರು ತೀವ್ರ ನಿಗಾ ವಹಿಸಿ, ಸೂಕ್ತ ಚಿಕಿತ್ಸೆ ನೀಡುತ್ತಿದ್ದಾರೆ. ಆನೆ ಚೇತರಿಸಿಕೊಳ್ಳುತ್ತಿದೆ. ಗಟ್ಟಿ ಆಹಾರ ಸೇವಿಸಲಾಗದ ಬಲರಾಮನಿಗೆ ರಾಗಿ ಗಂಜಿ, ರಾಗಿ ಹಿಟ್ಟು, ಬಾಳೆ ಹಣ್ಣು, ಕಲ್ಲಂಗಡಿ ಹಣ್ಣಿನಂತಹ ಮೆದು ಆಹಾರ ನೀಡಲಾಗುತ್ತಿದೆ.

ಮೈಸೂರು ಭಾಗದಲ್ಲಿ ಸ್ಟಾರ್ ಪ್ರಚಾರಕರ ಅಬ್ಬರ

ಹೈ ವೋಲ್ಟೇಜ್ ಕ್ಷೇತ್ರ ಮೈಸೂರಿನ ವರುಣದಲ್ಲಿ ಚುನಾವಣಾ ಕಣ ಕಾವೇರುತ್ತಿದ್ದು, ಪ್ರಬಲ ಅಭ್ಯರ್ಥಿಗಳಾಗಿರುವ ಮಾಜಿ ಸಿಎಂ ಸಿದ್ದರಾಮಯ್ಯ ಮತ್ತು ಸಚಿವ ವಿ.ಸೋಮಣ್ಣ ನಡುವೆ ತೀವ್ರ ಜಿದ್ದಾಜಿದ್ದಿಯೇ ನಡೆಯುತ್ತಿದೆ. ಈಗಾಗಲೇ ದೇಶದ ಪ್ರಧಾನಿ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ, ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್, ಸಿಎಂ ಬಸವರಾಜ ಬೊಮ್ಮಾಯಿ, ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ, ಉತ್ತರ ಪ್ರದೇಶ ಸಿಎಂ ಯೋಗಿ ಆದಿತ್ಯನಾಥ್, ಮಾಜಿ ಸಿಎಂ ಡಿ.ವಿ.ಸದಾನಂದಗೌಡ ಸೇರಿದಂತೆ ಹಲವು ಘಟಾನುಘಟಿ ನಾಯಕರು ಮೈಸೂರು ಭಾಗದಲ್ಲಿ ರೋಡ್ ಶೋ, ಬಹಿರಂಗ ಚುನಾವಣಾ ಪ್ರಚಾರ ಸಭೆಗಳನ್ನು ನಡೆಸಿದ್ದಾರೆ. ಖ್ಯಾತ ಚಿತ್ರನಟ ಕಿಚ್ಚ ಸುದೀಪ್, ಅಸ್ಸಾಂ ಸಿಎಂ ಹಿಮಂತ್ ಬಿಸ್ವಾ ಸರ್ಮಾ ಸಹ ಮೈಸೂರಿನ ವರುಣ ಮತ್ತು ಕೊಡಗು ಜಿಲ್ಲೆಯಲ್ಲಿ ಸಾರ್ವಜನಿಕ ರ‍್ಯಾಲಿ ನಡೆಸಲಿದ್ದಾರೆ ಎಂದು ಹೇಳಲಾಗುತ್ತಿದೆ. ಹಳೇ ಮೈಸೂರು ಮತ್ತು ಬೆಂಗಳೂರು ಪ್ರಾಂತ್ಯಗಳ ಪ್ರಾಮುಖ್ಯತೆ ಪರಿಗಣಿಸಿ ಪ್ರಧಾನಿ ನರೇಂದ್ರ ಮೋದಿ ಅವರು ಮೇ 6 ಮತ್ತು 7ರಂದು ಮತ್ತೆ 36.6 ಕಿ.ಮೀ. ರೋಡ್ ಶೋ ನಡೆಸಲು ನಿರ್ಧರಿಸಿದ್ದಾರೆ. ಹೈವೋಲ್ಟೇಜ್ ಕ್ಷೇತ್ರವಾಗಿರುವ ವರುಣದಲ್ಲಿ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ವಸತಿ ಸಚಿವ ವಿ.ಸೋಮಣ್ಣ ನಡುವೆ ತೀವ್ರ ಹಣಾಹಣಿ ನಡೆಯುತ್ತಿರುವು ದರಿಂದ ಕೇಂದ್ರ ಸಾರಿಗೆ ಸಚಿವ ನಿತಿನ್ ಗಡ್ಕರಿ, ಮಹಾರಾಷ್ಟ್ರ ಉಪ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಅವರು, ಬಿಜೆಪಿ ಅಭ್ಯರ್ಥಿ ಪರ ಪ್ರಚಾರ ನಡೆಸಲು ಕಾರ್ಯ ಕ್ರಮ ನಿಗದಿಯಾಗಿದೆ. ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಈಗಾಗಲೇ ಚಾಮರಾಜನಗರದಲ್ಲಿ ಪ್ರವಾಸ ಮಾಡಿದ್ದರೆ, ಅವರ ಸಹೋದರಿ, ಎಐಸಿಸಿ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕ ಗಾಂಧಿ ವಾದ್ರಾ ಅವರು ತಿ.ನರಸೀಪುರ, ವರುಣ, ನಂಜನಗೂಡಿನಲ್ಲಿ ಚುನಾವಣಾ ಪ್ರಚಾರ ನಡೆಸಿದ್ದಾರೆ. ಪ್ರಿಯಾಂಕ ಗಾಂಧಿ, ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಸಹ ಉಳಿದಿರುವ ದಿನಗಳಲ್ಲಿ ಪಕ್ಷದ ಅಭ್ಯರ್ಥಿಗಳ ಪರ ಅಬ್ಬರದ ಪ್ರಚಾರ ನಡೆಸುವರು ಎಂದು ಸ್ಥಳೀಯ ಕಾಂಗ್ರೆಸ್ ಮುಖಂಡರು ತಿಳಿಸಿದ್ದಾರೆ.

ಎಸ್‌ಆರ್‌ಹೆಚ್ ವಿರುದ್ಧ ಕೆಕೆಆರ್‌ಗೆ ಜಯ



ಹೈದರಾಬಾದ್, ಮೇ 4– ಕೊನೆವರೆಗೂ ಕುತೂಹಲ ಕೆರಳಿಸಿದ್ದ ಪಂದ್ಯದಲ್ಲಿ ಸನ್‌ರೈಸರ್ಸ್ ಹೈದರಾಬಾದ್ ವಿರುದ್ಧ ಕೋಲ್ಕತ್ತಾ ನೈಟ್ ರೈಡರ್ಸ್ 5 ರನ್‌ಗಳ ಗೆಲುವು ಸಾಧಿಸಿದೆ.

ಇಲ್ಲಿನ ರಾಜೀವ್ ಗಾಂಧಿ ಅಂತರ ರಾಷ್ಟ್ರೀಯ ಮೈದಾನದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಕೋಲ್ಕತ್ತಾ ನೈಟ್ ರೈಡರ್ಸ್ 20 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ 171ರನ್ ಗಳಿಸಿತು. ತಂಡದ ಪರ ಜೇಸನ್ ರಾಯ್ 20, ವೆಂಕಟೇಶ್ ಐಯ್ಯರ್ 7, ನಿತೀಶ್ ರಾಣಾ 42, ರಿಂಕು ಸಿಂಗ್ 46, ಆಂಡ್ರೆ ರಸೆಲ್ 24, ಅನುಕುಲ್ ರಾಯ್ 13 ರನ್ ಗಳಿಸಿದರು. ಹೈದರಾಬಾದ್ ಪರ ಮಾರ್ಕೊ ಜಾನ್ಸೆನ್, ಟಿ.ನಟರಾಜನ್ ತಲಾ 2, ಭುವನೇಶ್ವರ್ ಕುಮಾರ್, ಐಡನ್ ಮಾಕ್ರಮ್, ಕಾರ್ತಿಕ್ ತ್ಯಾಗಿ ಹಾಗೂ ಮಯಾಂಕ್ ಮಾರ್ಕಂಡೆ ತಲಾ ಒಂದೊಂದು ವಿಕೆಟ್ ಪಡೆದರು.

172 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಸನ್‌ರೈಸರ್ ಹೈದರಾಬಾದ್ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 166 ರನ್ ಗಳಿಸಲಷ್ಟೇ ಶಕ್ತವಾಗಿ ಸೋಲು ಅನುಭವಿಸಿತು. ತಂಡದ ಪರ ಅಭಿಷೇಕ್ ಶರ್ಮಾ 8, ಮಯಾಂಕ್ ಅಗರ್ವಾಲ್ 18, ರಾಹುಲ್ ತ್ರಿಪಾಠಿ 20, ಐಡನ್ ಮಾಕ್ರಮ್ 41, ಹೆನ್ರಿಕ್ ಕ್ಲಾಸೆನ್ 36, ಅಬ್ದುಲ್ ಸಮದ್ 21 ರನ್ ಗಳಿಸಿದರು. ತಂಡದ ಪರ ಶಾರ್ದೂಲ್ ಠಾಕೂರ್, ವೈಭವ್ ಅರೋರಾ ತಲಾ 2, ಹರ್ಷಿತ್ ರಾಣಾ, ಆಂಡ್ರೆ ರಸೆಲ್, ಅನುಕುಲ್ ರಾಯ್ ಹಾಗೂ ವರುಣ್ ಚಕ್ರವರ್ತಿ ತಲಾ ಒಂದೊಂದು ವಿಕೆಟ್ ಕಬಳಿಸಿದರು. ವರುಣ್ ಚಕ್ರವರ್ತಿ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಡಾ.ರಾಜ್ ಸ್ಮರಣಾರ್ಥ 'ಸಂಗೀತ ಸಂಜೆ'



ಮೈಸೂರು, ಮೇ 4(ಸಿಎನ್)–ಈ ಹಿಂದೆ ಕನ್ನಡ ಚಿತ್ರರಂಗ ಸಣ್ಣಪುಟ್ಟದ್ದಕ್ಕೆಲ್ಲಾ ಮದ್ರಾಸ್‌ಗೆ ಅಲೆಯುವ ಪರಿಸ್ಥಿತಿ ಇತ್ತು. ಎಲ್ಲಾ ತಾಂತ್ರಿಕ ಅಡೆತಡೆಯನ್ನು ಕೆಚ್ಚೆದೆಯಿಂದ ದಿಟ್ಟವಾಗಿ ಎದುರಿಸಿ, ಪ್ರತಿ ಬಾರಿಯೂ ಸಣ್ಣಪುಟ್ಟದ್ದಕ್ಕೆ ಚಿತ್ರರಂಗದವರು ಮದ್ರಾಸ್‌ಗೆ ಹೋಗುವುದನ್ನು ತಪ್ಪಿಸಿದ್ದು ನಮ್ಮ ಅಕ್ಕ ಪಾರ್ವತಮ್ಮನವರು ಎಂದು ಡಾ.ರಾಜ್ ಅಳಿಯ ಎಸ್.ಎ.ಗೋವಿಂದರಾಜು ನುಡಿದರು. ನಗರದ ಜೆಎಲ್‌ಬಿ ರಸ್ತೆಯ ನಾದಬ್ರಹ್ಮ ಸಂಗೀತ ಸಭಾಂಗಣದಲ್ಲಿ ಮೇರು ನಟ ಡಾ.ರಾಜ್ ಕುಮಾರ್ ಜನ್ಮದಿನದ ಅಂಗವಾಗಿ ಮಧುರ ಕಲಾವೃಂದದಿಂದ ಗುರುವಾರ ಆಯೋಜಿಸಿದ್ದ 'ಎರಡು ನಕ್ಷತ್ರಗಳು' ರಸಮಂಜರಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ನಮ್ಮ ವಜ್ರೇಶ್ವರಿ ಕಂಬೈನ್ಸ್‌ನಡಿ ನಿರ್ಮಿಸಿದ ಮೊದಲ ಚಿತ್ರ 'ಶ್ರೀನಿವಾಸ ಕಲ್ಯಾಣ'. ನಂತರ 'ತ್ರಿಮೂರ್ತಿ' ಸೇರಿದಂತೆ ಬರೋಬ್ಬರಿ 80 ಚಿತ್ರಗಳು ನಿರ್ಮಾಣವಾಗಿವೆ. ಈ ಮೂಲಕ ಇಡೀ ಕನ್ನಡ ಚಿತ್ರರಂಗ ಮದ್ರಾಸ್ ಅವಲಂಬಿಸದಂತೆ ನೋಡಿಕೊಂಡವರು ನಮ್ಮ ಪಾರ್ವತಮ್ಮನವರು ಎಂದರು. ಬಳಿಕ ಡಾ.ರಾಜ್ ಪುತ್ರಿ ಲಕ್ಷ್ಮಿ ಮಾತನಾಡಿ, ನಮ್ಮ ತಂದೆ ಮೇಲೆ ಮೈಸೂರು ಜನತೆಗೆ ವಿಶೇಷ ಅಭಿಮಾನವಿದ್ದು, ಅವರ ಕಾಲದಿಂದಲೂ ನಮ್ಮ ಕುಟುಂಬದ ಮೇಲೆ ನಿಮ್ಮ ಪ್ರೀತಿ, ಗೌರವ, ಅಭಿಮಾನ ಅಪಾರವಾಗಿದೆ. ಈಗ ನಮ್ಮ ಕುಟುಂಬದ ಕುಡಿಗಳು ಚಿತ್ರರಂಗಕ್ಕೆ ಪಾದಾರ್ಪಣೆ ಮಾಡಿದ್ದಾರೆ. ಅವರಿಗೂ ನಿಮ್ಮ ಆಶೀರ್ವಾದ, ಬೆಂಬಲ ಸದಾ ಹೀಗೆ ಮುಂದುವರಿಯಲಿ ಎಂದು ಮನವಿ ಮಾಡಿದರು. ಶ್ರೀ ಬಿ.ಬಿ.ಇಳೈ ಆಳ್ವಾರ್ ಸ್ವಾಮೀಜಿಗಳ ಸಾನಿಧ್ಯದಲ್ಲಿ ಕಾರ್ಯಕ್ರಮ ನೆರವೇರಿತು. ಮುಖ್ಯ ಅತಿಥಿಗಳಾಗಿ ಲಕ್ಷ್ಮಿ ಗೋವಿಂದರಾಜು, ಎಸ್.ಎ.ಗೋವಿಂದರಾಜು, ಎಸ್.ಎ. ಶ್ರೀನಿವಾಸ್, ಸಮಾಜ ಸೇವಕರಾದ ಕೆ.ರಘುರಾಂ ವಾಜಪೇಯಿ, ನಾಗರಾಜ್, ಉದ್ಯಮಿ ಬಿ.ಮೋಹನ್ ಲಾಲ್ ಜೈನ್ ಉಪಸ್ಥಿತರಿದ್ದರು.



ಮೈಸೂರು ಎಪಿಎಂಸಿ ಮಾಜಿ ಅಧ್ಯಕ್ಷ ದಾಸನಕೊಪ್ಪಲು ಹೊನ್ನಗಿರಿ ಗೌಡ, ಗೋಪಾಲಪುರ ನಾರಾಯಣಾಚಾರ್, ಗಂಗಾಧರ್, ವೆಂಕಟೇಶ್, ಕೃಷ್ಣ, ಮನು, ಸಂತೋಷ್, ವಕೀಲ ವೆಂಕಟೇಶ್, ರಾಜೇಶ್, ಹನುಮಂತ್, ರವಿಶಂಕರ್, ನಂಜಯ್ಯ, ಶಂಕರೇಗೌಡ, ಬಲ್ಲಳ್ಳಿ ಬಸವರಾಜು, ಬಿ.ಸಿ.ಶಿವಣ್ಣ, ಮರಟಿಕ್ಯಾತನಹಳ್ಳಿ ಕುಮಾರ್ ಕಾಂಗ್ರೆಸ್ ಅಭ್ಯರ್ಥಿ ಮಾವಿನಹಳ್ಳಿ ಸಿದ್ದೇಗೌಡ ಮತ್ತು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಬಿ.ಜೆವಿಜಯ್‌ಕುಮಾರ್ ಸಮ್ಮುಖದಲ್ಲಿ ಜೆಡಿಎಸ್ ತೊರೆದು ಕಾಂಗ್ರೆಸ್ ಸೇರ್ಪಡೆಗೊಂಡರು.



ಚಾಮುಂಡೇಶ್ವರಿ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ, ಹಾಲಿ ಶಾಸಕ ಜಿ.ಟಿ.ದೇವೇಗೌಡರು ಕಡಕೊಳ, ಕೆ.ಎಂ.ಹುಂಡಿ, ಗೆಜ್ಜಗಳ್ಳಿ, ಕುಪ್ಪಲೂರು ಹಾಗೂ ದಾಸನಕೊಪ್ಪಲು ಗ್ರಾಮಗಳಲ್ಲಿ ತಮ್ಮ ಅಪಾರ ಜನಸ್ತೋಮದೊಂದಿಗೆ ಭರ್ಜರಿ ಪ್ರಚಾರ ನಡೆಸಿದರು.

ಮಾವಿನಹಳ್ಳಿಯಲ್ಲಿ ಕವೀಶ್‌ಗೌಡ ಪರ ಡಿ.ವಿ.ಸದಾನಂದಗೌಡ ರೋಡ್ ಶೋ

ಮೈಸೂರು, ಮೇ 4(ಆರ್‌ಕೆ)–ಮಾಜಿ ಮುಖ್ಯಮಂತ್ರಿ ಡಿ.ವಿ.ಸದಾನಂದಗೌಡ ಅವರು ಚಾಮುಂಡೇಶ್ವರಿ ಕ್ಷೇತ್ರದ ಮಾವಿನಹಳ್ಳಿಯಲ್ಲಿ ಬಿಜೆಪಿ ಅಭ್ಯರ್ಥಿ ಕವೀಶ್‌ಗೌಡರ ಪರ ರೋಡ್ ಶೋ ಮೂಲಕ ಇಂದು ಮತ ಪ್ರಚಾರ ಮಾಡಿದರು.



ಕವೀಶ್‌ಗೌಡ, ಮುಡಾ ಅಧ್ಯಕ್ಷ ಯಶಸ್ವಿ ಎಸ್.ಸೋಮಶೇಖರ್, ಮುಖಂಡರಾದ ಹೇಮಂತ್‌ಕುಮಾರ್‌ಗೌಡ, ಗೆಜ್ಜಗಳ್ಳಿ ಮಹೇಶ್‌ರೊಂದಿಗೆ ಮಾವಿನಹಳ್ಳಿ ಗ್ರಾಮದಲ್ಲಿ ತೆರೆದ ವಾಹನದಲ್ಲಿ ರೋಡ್ ಶೋ ನಡೆಸಿದ ಅವರು, ಬಿಜೆಪಿ ಈ ಬಾರಿ ಹೊಸ ಮುಖಗಳಿಗೆ ಟಿಕೆಟ್ ನೀಡಿದ್ದು, ಯುವಕ ಕವೀಶ್‌ಗೌಡರನ್ನು ಚಾಮುಂಡೇಶ್ವರಿಯಲ್ಲಿ ಕಣಕ್ಕಿಳಿಸಿದೆ. ಹೊಸ ಆಲೋಚನೆ, ಅನ್ವೇಷಣೆಯೊಂದಿಗೆ ಹೈಟೆಕ್ ಮಾದರಿಯ ಶಿಕ್ಷಣ, ಆರೋಗ್ಯ, ಗ್ರಂಥಾಲಯಗಳಂತಹ ಗುಣಮಟ್ಟದ ಸೌಲಭ್ಯ ಒದಗಿಸುವ ಉದ್ದೇಶ ಹೊಂದಿರುವ ಕವೀಶ್ ಗೌಡರನ್ನು ಬೆಂಬಲಿಸಿ ಕ್ಷೇತ್ರದಲ್ಲಿ ಬದಲಾವಣೆಗೆ ನಾಂದಿ ಹಾಡಬೇಕೆಂದು ಮನವಿ ಮಾಡಿದರು. ಗ್ರಾಮೀಣ ಭಾಗದ ಜನರ ಜೀವನ ಬದಲಿಸಿ ಸರ್ಕಾರದ ಸೌಲಭ್ಯ ಬಳಸಿಕೊಂಡು ನಗರ ಪ್ರದೇಶದ ಯುವಕರಿಗೆ ಕೌಶಲ್ಯ ತರಬೇತಿ ನೀಡಿ ಉದ್ಯೋಗ ಸೃಷ್ಟಿಸುವುದು, ಕೃಷಿ, ತೋಟಗಾರಿಕೆ, ವಸತಿ, ಕುಡಿಯುವ ನೀರು, ಶೌಚಾಲಯ, ರಸ್ತೆ, ಚರಂಡಿ ಅಭಿವೃದ್ಧಿ, ಕೈಗಾರಿಕೆಗಳ ಸ್ಥಾಪನೆ, ಮಹಿಳಾ ಸಬಲೀಕರಣಗಳಂತಹ ಯೋಜನೆಗಳನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ ಯುವಕ ಕವೀಶ್‌ಗೌಡ ಸೂಕ್ತ ಅಭ್ಯರ್ಥಿಯಾಗಿದ್ದು, ಪ್ರಧಾನಿ ಮೋದಿ ಅವರ ಅಭಿವೃದ್ಧಿ ಮಂತ್ರ ಅನುಷ್ಠಾನಕ್ಕಾಗಿ ಈ ಬಾರಿ ಬಿಜೆಪಿ ಬೆಂಬಲಿಸುವಂತೆಯೂ ಸದಾನಂದಗೌಡರು ಮನವಿ ಮಾಡಿದರು.



ಚಾಮರಾಜ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಶಾಸಕ ಎಲ್.ನಾಗೇಂದ್ರ ಪರ ದೇವರಾಜ ಮೊಹಲ್ಲಾದಲ್ಲಿ ನಗರಪಾಲಿಕೆ ಮಾಜಿ ಸದಸ್ಯ ಪ್ರಶಾಂತ್‌ಗೌಡ ಪ್ರಚಾರ ನಡೆಸಿದರು. ಈ ವೇಳೆ ಬಿಜೆಪಿ ಮುಖಂಡರಾದ ಹರ್ಷ, ಮಹೇಶ್, ನಂದಕುಮಾರ್, ಗುರುಪ್ರಸಾದ್, ಪ್ರಶಾಂತ್, ಹರೀಶ್ ಗೌಡ, ಗುರುರಾಜ್ ಶೆಟ್ಟಿ, ಸಚಿನ್, ಪ್ರಮೋದ್, ಶಿವು, ಸಂತೋಷ್ ಇದ್ದರು.

'ಮಿತ್ರ'ನೊಂದಿಗೆ ಮುಕ್ತ ಮಾತುಕತೆ...

ಸಮಸ್ಯೆಯ ಸುಳಿಯಿಂದಲೇ ಬಂದ ನನಗೆ ಜನರ ಸಮಸ್ಯೆಗೆ ಪರಿಹಾರವೂ ಗೊತ್ತಿದೆ...

–ಶ್ರೀವತ್ಸ ಕೆಆರ್ ಕ್ಷೇತ್ರದ ಬಿಜೆಪಿ ಅಭ್ಯರ್ಥಿ

ಸಂದರ್ಶನ: ಎಸ್.ಬಿ.ದೇವರಾಜ

ಚುನಾವಣಾ ಕಣದಲ್ಲಿ ಅಭ್ಯರ್ಥಿಗಳು ಬಿರುಸಿನ ಪ್ರಚಾರ ನಡೆಸಿ, ಮತ ಯಾಚಿಸುತ್ತಿದ್ದಾರೆ. ರೋಡ್ ಶೋ ಮೂಲಕ ಪಕ್ಷದ ನಾಯಕರು, ಮುಖಂಡರು ತಮ್ಮ ಅಭ್ಯರ್ಥಿಗಳ ಪರ ಮತ ಬೇಟೆ ನಡೆಸಿದ್ದಾರೆ. ಕೃಷ್ಣರಾಜ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಟಿ.ಎಸ್.ಶ್ರೀವತ್ಸ ಅವರು ಬೆಳಗ್ಗೆಯಿಂದ ರಾತ್ರಿವರೆಗೂ ನಿರಂತರ ಮತಯಾಚನೆಯಲ್ಲಿ ತೊಡಗಿದ್ದಾರೆ. ಬಿ.ಕಾಂ ಪದವೀಧರ ಟಿ.ಎಸ್.ಶ್ರೀವತ್ಸ(56 ವರ್ಷ), ತಲಕಾಡಿನ ಟಿ.ಎನ್.ಶ್ರೀನಿವಾಸ ತಾತಾಚಾರ್ ಹಾಗೂ ರಂಗಲಕ್ಷ್ಮಿ ದಂಪತಿಯ 9 ಮಕ್ಕಳಲ್ಲಿ ಕೊನೆಯವರು. ಸದ್ಯ ಅಗ್ರಹಾರದ ರಾಮಾನುಜ ರಸ್ತೆ 2ನೇ ಕ್ರಾಸ್‌ನಲ್ಲಿ ನೆಲೆಸಿರುವ ಇವರು, ಅಗರ್‌ಬತ್ತಿ ಪ್ಯಾಕಿಂಗ್ ಉದ್ಯಮ ನಡೆಸುತ್ತಿದ್ದಾರೆ. 1988ರಿಂದ ಬಿಜೆಪಿಯಲ್ಲಿ ಸಕ್ರಿಯರಾಗಿದ್ದು, ಸದ್ಯ ಬಿಜೆಪಿ ಮೈಸೂರು ನಗರಾಧ್ಯಕ್ಷರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಮತದಾನಕ್ಕೆ ದಿನಗಣನೆ ಆರಂಭವಾಗಿರುವ ಹೊತ್ತಲ್ಲಿ 'ಮೈಸೂರು ಮಿತ್ರ'ನೊಂದಿಗೆ ಒಂದಷ್ಟು ಮುಖ್ಯವಾದ ಸಂಗತಿಗಳ ಹಂಚಿಕೊಂಡಿದ್ದಾರೆ.

ಮೈಸೂರು ಮಿತ್ರ: ನಿಮಗೆ ಸ್ಪರ್ಧೆಗೆ ಅವಕಾಶ ಸಿಕ್ಕಿದ ಬಗ್ಗೆ ನಿಮ್ಮ ಮೊದಲ ಪ್ರತಿಕ್ರಿಯೆ?


ಟಿ.ಎಸ್.ಶ್ರೀವತ್ಸ: ಸ್ಪರ್ಧೆಗೆ ಅವಕಾಶ ಸಿಕ್ಕಿದ್ದಕ್ಕೆ ತುಂಬಾ ಸಂತೋಷವಾಯ್ತು. ಬಿಜೆಪಿಯಲ್ಲಿ ಕೆಲಸವನ್ನು ನಿಷ್ಠೆಯಿಂದ ಮಾಡಿದರೆ ಖಂಡಿತ ಫಲ ಸಿಗುತ್ತದೆ ಎನ್ನುವುದು ಮತ್ತೊಮ್ಮೆ ಸಾಬೀತಾಯಿತು. ಅಂದರೆ ಸಾಮಾನ್ಯ ಕಾರ್ಯಕರ್ತ ಅವನ ಪಾಡಿಗೆ ಅವನ ಕೆಲಸವನ್ನು ಪ್ರಾಮಾಣಿಕತೆಯಿಂದ ಮಾಡುತ್ತಾ ಇದ್ದರೆ ಒಂದಲ್ಲ ಒಂದು ದಿನ ಅವಕಾಶ ಸಿಕ್ಕೇ ಸಿಗುತ್ತೆ ಎಂಬುದಕ್ಕೆ ನಾನೇ ಸಾಕ್ಷಿ.

ಮಿತ್ರ: ಕ್ಷೇತ್ರದ ಮತದಾರರ ಸ್ಪಂದನೆ ಹೇಗಿದೆ?

ಶ್ರೀವತ್ಸ: ಮತದಾರರ ಸ್ಪಂದನೆ ಸ್ಮರಣೀಯ ಹಾಗೂ ತುಂಬಾ ಪಾಸಿಟಿವ್ ಆಗಿದೆ. ಹೋದಲ್ಲೆಲ್ಲಾ ಮತದಾರರ ಪ್ರತಿಕ್ರಿಯೆ ಅತೀವ ಉತ್ಸಾಹ ಹಾಗೂ ಗೆಲುವಿಗೆ ಪೂರಕವಾಗಿದೆ. ಮೇಲಾಗಿ ಪ್ರತಿ ಮತದಾರನ ಸ್ಪಂದನೆ ಸಕಾರಾತ್ಮಕವಾಗಿದೆ. ಎಷ್ಟರ ಮಟ್ಟಿಗೆ ಎಂದರೆ ನನ್ನ ನಿರೀಕ್ಷೆಗೂ ಮೀರಿ.

ಮಿತ್ರ: ಕ್ಷೇತ್ರದ ಸಮಸ್ಯೆಗಳ ಅರಿವಿದೆಯೇ?

> “ ಕ್ಷೇತ್ರದ ಸಮಸ್ಯೆಗಳ ಬಗ್ಗೆ ಅರಿವಿದೆ. ಸಮಸ್ಯೆಗಳ ಬಗ್ಗೆ ಪಟ್ಟಿ ಮಾಡಿದ್ದೀವಿ. ನನ್ನ ಬದುಕಿನ ಬಹಳಷ್ಟು ಕಾಲ ಕ್ಷೇತ್ರದಲ್ಲೇ ಕಳೆದಿರುವುದರಿಂದ ಪ್ರತಿ ನಿವಾಸಿಯ ಸಮಸ್ಯೆಯೂ ನನ್ನ ಸಮಸ್ಯೆ ಎಂಬಷ್ಟು ಅನುಭವವಾಗಿದೆ. ಹೇಳಿಕೇಳಿ ನಾನು ಸಹ ಸಮಸ್ಯೆಗಳ ಸುಳಿಯಿಂದಲೇ ಬಂದವನಾದ್ದರಿಂದ ಜನರ ಸಮಸ್ಯೆಗಳಿಗೆ 24X7 ಸ್ಪಂದಿಸುತ್ತೇನೆ.



ಶ್ರೀವತ್ಸ ಅವರು ಈಗ ವಾಸವಿರುವ ಮನೆ.


ಶ್ರೀವತ್ಸ: ಕ್ಷೇತ್ರದ ಸಮಸ್ಯೆಗಳ ಬಗ್ಗೆ ಅರಿವಿದೆ. ಸಮಸ್ಯೆಗಳ ಬಗ್ಗೆ ಪಟ್ಟಿ ಮಾಡಿದ್ದೀವಿ. ನನ್ನ ಬದುಕಿನ ಬಹಳಷ್ಟು ಕಾಲ ಕ್ಷೇತ್ರದಲ್ಲೇ ಕಳೆದಿರುವುದರಿಂದ ಪ್ರತಿ ನಿವಾಸಿಯ ಸಮಸ್ಯೆಯೂ ನನ್ನ ಸಮಸ್ಯೆ ಎಂಬಷ್ಟು ಅನುಭವವಾಗಿದೆ. ಹೇಳಿಕೇಳಿ ನಾನು ಸಹ ಸಮಸ್ಯೆಗಳ ಸುಳಿಯಿಂದಲೇ ಬಂದವನಾದ್ದರಿಂದ ಜನರ ಸಮಸ್ಯೆಗೆ ಪರಿಹಾರ ನನಗೆ ಗೊತ್ತಿದೆ.

ಮಿತ್ರ ಗೆದ್ದರೆ ನಿಮ್ಮ ಮೊದಲ ಆದ್ಯತೆ ಯಾವುದಕ್ಕೆ?

ಶ್ರೀವತ್ಸ: ಸೀವೇಜ್ ಫಾರಂನ ಸಮಸ್ಯೆ. ಇದು ಕ್ಷೇತ್ರದ ಜನರ ಜೀವ ಹಿಂಡುತ್ತಿದೆ. ಇದಕ್ಕೆ ಪರಿಹಾರ ಶತಸಿದ್ಧ. ಹಾಗೆಯೇ ಕೆ.ಸಿ.ಲೇಔಟ್ ಖಾತಾ ಸಮಸ್ಯೆಯನ್ನು ಆದ್ಯತೆ ಮೇರೆಗೆ ಪರಿಹರಿಸಬೇಕು ಎಂದುಕೊಂಡಿದ್ದೇನೆ.

ಮಿತ್ರ: ಪ್ರಚಾರದ ವೇಳೆ ಮತದಾರರಿಗೆ ಯಾವ ಭರವಸೆ ನೀಡಲು ಬಯಸುತ್ತೀರಾ?

ಶ್ರೀವತ್ಸ: ನಾನೊಬ್ಬ ಜನಸ್ನೇಹಿ ಶಾಸಕನಾಗಿ ನಿಮ್ಮೊಂದಿಗೆ ಇರುತ್ತೇನೆ. ಶಾಸಕರ ಕಚೇರಿ, ಮನೆಗೆ ಅಲೆದಾಡುವುದನ್ನು ತಪ್ಪಿಸುವ ರೀತಿಯಲ್ಲಿ ಕೆಲಸ ಮಾಡುತ್ತೇನೆ ಎಂದು ಭರವಸೆ ನೀಡುತ್ತೇನೆ. ಮಿಗಿಲಾಗಿ ಸಾಮಾನ್ಯರಲ್ಲಿ ಸಾಮಾನ್ಯನಾಗಿ ಇರಲು ಬಯಸಿದ್ದೇನೆ.



ಮಿತ್ರ: ಈಗ ಮತದಾರರು ಮುಂದಿಡುತ್ತಿರುವ ಗಂಭೀರ ಸಮಸ್ಯೆ ಯಾವುದು?

ಶ್ರೀವತ್ಸ: ರಾಜಕಾಲುವೆ ಸಮಸ್ಯೆ, ಉದ್ಯಾನಗಳ ಅಭಿವೃದ್ಧಿ, ಮಣ್ಣುಮಿಶ್ರಿತ ನೀರು ಸರಬರಾಜು ಇನ್ನಿತರ ಸಮಸ್ಯೆಗಳ ಬಗ್ಗೆ ಗಮನ ಸೆಳೆದಿದ್ದಾರೆ. ಮಳೆ ಬಂದಂತಹ ಸಮಯದಲ್ಲಿ ಬಹುತೇಕ ಭಾಗ ಜಲಮಯವಾಗುತ್ತಿದೆ. ಇಂತಹ ವೇಳೆ ಜನರ ನೆಮ್ಮದಿ ಹಾಳಾಗುತ್ತಿದೆ. ಅದಕ್ಕೆ ಶಾಶ್ವತ ಪರಿ ಹಾರ ನನ್ನ ಕನಸಾಗಿದೆ.

ಮಿತ್ರ: ಯುವ ಮತದಾರರ ಸೆಳೆಯಲು ಯಾವ ಕಾರ್ಯತಂತ್ರ ಅನುಸರಿಸುತ್ತಿದ್ದೀರಾ?

ಶ್ರೀವತ್ಸ: ಯುವ ಮತದಾರರ ಭವಿಷ್ಯದ ದಿಕ್ಸೂಚಿಯಾಗಿರುವ ನಮೋ ಆ್ಯಪ್ ಡೌನ್‌ಲೋಡ್ ಮಾಡಿಸಿದ್ದೇವೆ. ನರೇಂದ್ರ ಮೋದಿ ಅವರ ವಿಚಾರಗಳನ್ನು ಮುಂದಿಡುತ್ತಿದ್ದೇವೆ. ಮೋದಿ ಅವರು ಈ ದೇಶಕ್ಕಾಗಿ ಏನೆಲ್ಲಾ ಕೆಲಸ ಮಾಡಿದ್ದಾರೆ ಎಂಬುದನ್ನು ತಿಳಿಸುತ್ತಿದ್ದೇವೆ. ಇಡೀ ದೇಶದ ಯುವ ಜನತೆ ಪ್ರಧಾನಿ ಮೋದಿಯವರ ಮೇಲೆ ಭರವಸೆ ಇಟ್ಟಿದೆ. ಹಾಗಾಗಿ ಅವರು ಈಗಾಗಲೇ ಬಿಜೆಪಿಯೇ ಆಯ್ಕೆ ಎಂದು ನಿರ್ಧರಿಸಿದ್ದಾರೆ. ಅವರ ಭವಿಷ್ಯಕ್ಕೆ ಹೆದ್ದಾರಿ ನಿರ್ಮಾಣ ಮಾಡಲು ಪ್ರಧಾನಿ ಮೋದಿ ನಿರ್ಧರಿಸಿದ್ದಾರೆ. ಮುಂದಿನ ದಿನಗಳಲ್ಲಿ ಅದು ದೇಶದ ಜನತೆಗೆ ಅರಿವಾಗಲಿದೆ.

ಮೇ 7ರಂದು ಮೈಸೂರಲ್ಲಿ ಯುವ ನಾಗರಿಕರೊಂದಿಗೆ ವಿದೇಶಾಂಗ ಸಚಿವ ಎಸ್.ಜೈಶಂಕರ್ ಸಂವಾದ

ಮೈಸೂರು, ಮೇ 4(ಆರ್‌ಕೆ)–ಮೈಸೂರಿನ ಮುಕ್ತ ಗಂಗೋತ್ರಿಯಲ್ಲಿರುವ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಭವನದಲ್ಲಿ ಮೇ 7ರಂದು



ಪ್ರಧಾನಿ ನರೇಂದ್ರ ಮೋದಿ ಸರ್ಕಾರದ ವಿದೇಶಾಂಗ ನೀತಿ ಕುರಿತು ಭಾಷಣ

(ಭಾನುವಾರ) ವಿದೇಶಾಂಗ ವ್ಯವಹಾರಗಳ ಸಚಿವ ಎಸ್.ಜೈ ಶಂಕರ್ ಅವರು ಮೈಸೂರಿನ ಪ್ರಮುಖ ಯುವ ನಾಗರಿಕರೊಂದಿಗೆ ಸಂವಾದ ನಡೆಸುವರು. ಮೈಸೂರಿನ ಚಿಂತಕರ ವೇದಿಕೆ ವತಿಯಿಂದ ಅಂದು ಬೆಳಗ್ಗೆ 9.45ರಿಂದ 11.30 ಗಂಟೆವರೆಗೆ ಸಂವಾದ ಕಾರ್ಯಕ್ರಮ ಆಯೋಜಿಸಲಾಗಿದ್ದು, 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ವ್ಯವಸ್ಥಾಪಕ ಸಂಪಾದಕರಾದ ಕೆ.ಜಿ.ವಿಕ್ರಂ ಮುತ್ತಣ್ಣ ಅವರು ಸಂವಾದಗೋಷ್ಠಿ ನಡೆಸಿಕೊಡಲಿದ್ದಾರೆ.

ಕಾರ್ಯಕ್ರಮ ಸಂಪೂರ್ಣ ರಾಜಕೀಯೇತರವಾಗಿದ್ದು, ಯಾವುದೇ ರಾಜಕೀಯ ಪಕ್ಷ ಅಥವಾ ಅಭ್ಯರ್ಥಿ ಕುರಿತಂತೆ ಚರ್ಚೆಗೆ ಅವಕಾಶವಿಲ್ಲ ಎಂದು ಆಯೋಜಕರು ತಿಳಿಸಿದ್ದಾರೆ. ಕಾಲೇಜು ವಿದ್ಯಾರ್ಥಿಗಳು, ಉದ್ಯಮಿಗಳು, ಕೈಗಾರಿಕೋದ್ಯಮಿ ಗಳು ಹಾಗೂ ಮೈಸೂರಿನ ಪ್ರಮುಖ ನಾಗರಿಕರನ್ನು ಕಾರ್ಯಕ್ರಮಕ್ಕೆ ಆಹ್ವಾನಿಸಲಾಗಿದೆ.

ಅಂತಾರಾಷ್ಟ್ರೀಯ ವಿದೇಶಾಂಗ ನೀತಿ ಕುರಿತಂತೆ ಅಪಾರ ಪರಿಣತಿ ಹೊಂದಿರುವ ವಿದೇಶಾಂಗ ವ್ಯವಹಾರಗಳ ಸಚಿವರೊಂದಿಗೆ ಸಂವಾದಿಸಲು ಪ್ರೇಕ್ಷಕರಿಗೆ ಅವಕಾಶ ಕಲ್ಪಿಸುವ ಉದ್ದೇಶದಿಂದ ಈ ಕಾರ್ಯಕ್ರಮ ಆಯೋಜಿಸಿದ್ದು, ಹೆಸರು ನೋಂದಾಯಿತರಿಗೆ ಮಾತ್ರ ಪಾಲ್ಗೊಳ್ಳಲು ಅವಕಾಶವಿರುತ್ತದೆ. ಆಸಕ್ತಿಯುಳ್ಳವರು ಹೆಸರು ನೋಂದಾಯಿಸಿಕೊಳ್ಳಲು ದರ್ಶನ್ ರಾಜ್ (99010-10990) ಅಥವಾ ರಾಕೇಶ್ (97434-45870) ಅವರನ್ನು ಸಂಪರ್ಕಿಸಬಹುದಾಗಿದೆ. ಭಾಗವಹಿಸುವವರು ಗುರುತಿನ ಚೀಟಿಯೊಂದಿಗೆ ಕಾರ್ಯಕ್ರಮ ಆರಂಭವಾಗುವ ಕನಿಷ್ಠ 30 ನಿಮಿಷ ಮೊದಲೇ ಸಭಾಂಗಣದಲ್ಲಿ ಹಾಜರಿರುವಂತೆ ಸಂಘಟಕರು ಕೋರಿದ್ದಾರೆ.

ವಿವೇಕಾನಂದನಗರ ಬ್ರಾಹ್ಮಣ ಮಹಾಸಭಾ ವತಿಯಿಂದ ನರಸಿಂಹ ಜಯಂತಿ ಆಚರಣೆ

ಮೈಸೂರು, ಮೇ 4– ಮೈಸೂರಿನ ವಿವೇಕಾನಂದನಗರದ ಬ್ರಾಹ್ಮಣ ಮಹಾಸಭಾ ವತಿಯಿಂದ ಲಕ್ಷ್ಮೀನರಸಿಂಹ ಸ್ವಾಮಿ ದೇವಸ್ಥಾನದಲ್ಲಿ ನರಸಿಂಹ ಜಯಂತಿಯ ಅಂಗವಾಗಿ ನರಸಿಂಹ ಸ್ವಾಮಿಗೆ ವಿಶೇಷ ಅಲಂಕಾರ, ಪಂಚಾಮೃತ ಅಭಿಷೇಕ, ಕುಂಕುಮಾರ್ಚನೆ, ಅಷ್ಟೋತ್ತರವನ್ನು ಅರ್ಚಕರಾದ ವಿದ್ವಾನ್ ಪ್ರಶಾಂತ್ ಭಟ್ಟರು ನೆರವೇರಿಸಿದರು. ನರಸಿಂಹ ದೇವರ ಸ್ತೋತ್ರ ಪಠಿಸಲಾಯಿತು. ಮಹಾ ನೈವೇದ್ಯದ ನಂತರ ಭಕ್ತಾದಿಗಳಿಗೆ ಪ್ರಸಾದ ವಿನಿಯೋಗ ಮಾಡಲಾಯಿತು.



ಇದೇ ಸಂದರ್ಭದಲ್ಲಿ ವಿವೇಕಾನಂದ ಬ್ರಾಹ್ಮಣ ಮಹಾಸಭೆ ಅಧ್ಯಕ್ಷ ಜಯರಾಮ್, ಉಪಾಧ್ಯಕ್ಷ ನರಸಿಂಹ ಪ್ರಸಾದ್, ಕಾರ್ಯದರ್ಶಿ ನಿರಂಜನ್, ಸಹ ಕಾರ್ಯದರ್ಶಿ ಕೆ.ಎಸ್. ಮಂಜುನಾಥ್, ಖಜಾಂಚಿ ನಾಗರಾಜ್ ಹಾಗೂ ಆಡಳಿತ ಮಂಡಳಿ, ಇನ್ನಿತರರು ಹಾಜರಿದ್ದರು.

ನಿಧನ



ರಮಾಬಾಯಿ

ಮೈಸೂರು, ಮೇ 4– ಮೈಸೂರಿನ ಕಾಳಿದಾಸ ರಸ್ತೆಯಲ್ಲಿರುವ ನ್ಯೂ ರವಿ ಟೈಲರ್ಸ್ ಮಾಲೀಕರಾದ ಕೃಷ್ಣಕುಮಾರ್ ಅವರ ಪತ್ನಿ ರಮಾಬಾಯಿ(75) ಅವರು ಬುಧವಾರ ಬೆಳಗ್ಗೆ ವಿ.ವಿ. ಮೊಹಲ್ಲಾದಲ್ಲಿರುವ ತಮ್ಮ ನಿವಾಸದಲ್ಲಿ ನಿಧನರಾದರು. ದಿವಂಗತರು ಪತಿ ಕೃಷ್ಣಮೂರ್ತಿ, ಓರ್ವ ಪುತ್ರಿ, ಇಬ್ಬರು ಪುತ್ರರು, ಅಳಿಯ, ಸೊಸೆಯಂದಿರು ಮತ್ತು ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಬುಧವಾರ ಸಂಜೆ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಹರಿಶ್ಚಂದ್ರ ಘಾಟ್‌ನಲ್ಲಿ ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ವಿಶೇಷಚೇತನರಿಂದ ಮತ ಜಾಗೃತಿ ಜಾಥಾ

ಮೈಸೂರು, ಮೇ 4 (ಆರ್‌ಕೆ)– ತ್ರಿಚಕ್ರ ವಾಹನಗಳ ಜಾಥಾ ನಡೆಸುವ ಮೂಲಕ ವಿಶೇಷಚೇತನರು ಮೈಸೂರಲ್ಲಿ ಇಂದು ಮತ ಚಲಾಯಿಸುವಂತೆ ಜನರಲ್ಲಿ ಜಾಗೃತಿ ಮೂಡಿಸಿದರು. ಜಿಲ್ಲಾ ಸ್ವೀಪ್ ಸಮಿತಿ ಹಾಗೂ ವಿಕಲಚೇತನರ ಕಲ್ಯಾಣ ಇಲಾಖೆ ವತಿಯಿಂದ ಆಯೋಜಿಸಿದ್ದ ಜಾಥಾಗೆ ಜಿಪಂ ಕಚೇರಿ ಆವರಣದಲ್ಲಿ ಜಿಲ್ಲಾ ಸ್ವೀಪ್ ಸಮಿತಿ ನೋಡಲ್ ಅಧಿಕಾರಿ ಕೆ.ಎಂ.ಗಾಯತ್ರಿ ಹಸಿರು ನಿಶಾನೆ ತೋರಿದರು. ವಿಶೇಷ ಚೇತನರಿಗಾಗಿ ಮತಗಟ್ಟೆಗಳಲ್ಲಿ ರ‍್ಯಾಂಪ್ ನಿರ್ಮಿಸಿ ಗಾಲಿ ಚೇರ್ ವ್ಯವಸ್ಥೆ ಮಾಡಿದ್ದು, ಸಹಾಯಕ್ಕಾಗಿ ಸ್ಕೌಟ್ಸ್ ಮತ್ತು ಗೈಡ್ಸ್ ಸ್ವಯಂ ಸೇವಕರನ್ನು ನಿಯೋಜಿಸಿರುವುದರಿಂದ ಪ್ರತಿಯೊಬ್ಬರೂ ತಪ್ಪದೇ ಬಂದು ಮತ ಚಲಾಯಿಸುವಂತೆ ಜಾಥಾ ಮೂಲಕ ವಿಶೇಷ ಚೇತನರು ಅರಿವು ಮೂಡಿಸಿದರು. ಜಿಲ್ಲಾ ಪಂಚಾಯ್ತಿ ಕಚೇರಿಯಿಂದ ಆರಂಭವಾದ ತ್ರಿಚಕ್ರ ವಾಹನ ಜಾಥಾವು ಏಕಲವ್ಯ ಸರ್ಕಲ್, ಜೆಎಲ್‌ಬಿ ರಸ್ತೆ, ರಾಮಸ್ವಾಮಿ ಸರ್ಕಲ್, ಸರ್ಕಾರಿ ಸಂಸ್ಕೃತ ಪಾಠ ಶಾಲೆ, ಗನ್‌ಹೌಸ್ ಸರ್ಕಲ್, ಹಾರ್ಡಿಂಗ್ ವೃತ್ತದ ಮೂಲಕ ಅರಮನೆ ಉತ್ತರ ದ್ವಾರದ ಬಳಿಗೆ ತೆರಳಿ ಅಂತ್ಯಗೊಂಡಿತು. ನಾವು ಮತ ಚಲಾಯಿಸುತ್ತಿದ್ದೇವೆ. ನೀವೂ ಹಕ್ಕು ಚಲಾಯಿಸಿ ಪ್ರಜಾಪ್ರಭುತ್ವವನ್ನು ಗಟ್ಟಿಗೊಳಿಸಿ ಎಂಬ ಸಂದೇಶದ ಮೂಲಕ ವಿಶೇಷಚೇತನರಿಗೆ ವಿಶ್ವಾಸ ಮೂಡಿಸಿದ ಜಾಥಾ ನಿರತರು, ಸಾರ್ವಜನಿಕರಿಗೂ ಅರಿವು ಮೂಡಿಸಿದರು. ಜಿಪಂ ಉಪ ಕಾರ್ಯದರ್ಶಿ (ಅಭಿವೃದ್ಧಿ) ಕೃಷ್ಣಂರಾಜು, ಸಹಾಯಕ ನಿರ್ದೇಶಕ ವಿಶ್ವನಾಥ್, ಕ್ಷೇತ್ರ ಶಿಕ್ಷಣಾಧಿಕಾರಿ ಕೃಷ್ಣ, ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಮಾಲಿನಿ, ಜಿಲ್ಲಾ ವಿಕಲಚೇತನರ ಒಕ್ಕೂಟದ ಅಧ್ಯಕ್ಷ ಶ್ರೀಧರ ದೀಕ್ಷಿತ್ ಜಾಥಾದಲ್ಲಿ ಇದ್ದರು.



ಬಜರಂಗದಳ ರಾಜಕೀಯ ಪಕ್ಷದ ವಿಭಾಗ

ಮೈಸೂರು,ಮೇ 4(ಎಂಟಿವೈ)– ಬಜರಂಗದಳ ರಾಜಕೀಯ ಪಕ್ಷವೊಂದಕ್ಕೆ ಸೇರಿದ ವಿಭಾಗ. ಆಂಜನೇಯನಿಗೂ ಬಜರಂಗದಳಕ್ಕೂ ಹೋಲಿಕೆ ಮಾಡಲೇಬಾರದು ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ತಿರುಗೇಟು ನೀಡಿದ್ದಾರೆ.

ಚಾಮುಂಡಿಬೆಟ್ಟಕ್ಕೆ ಗುರುವಾರ ಆಗಮಿಸಿ, ನಾಡದೇವಿಯ ದರ್ಶನ ಪಡೆದ ಬಳಿಕ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಹನುಮಂತನ ಹೆಸರು ಇಟ್ಟುಕೊಂಡವರೆಲ್ಲ ಆಂಜನೇಯ ಆಗಲು ಸಾಧ್ಯವೇ ಇಲ್ಲ. ಬಜರಂಗದಳಕ್ಕೂ ಆಂಜನೇಯನಿಗೂ ಸಂಬಂಧ ಇಲ್ಲವೇ ಇಲ್ಲ. ಬಜರಂಗದಳ ಒಂದು ರಾಜಕೀಯ ಪಕ್ಷದ ವಿಭಾಗ. ನೈತಿಕ ಪೊಲೀಸ್‌ಗಿರಿ ಮಾಡುವ ಮೂಲಕ ಭಯದ ವಾತಾವರಣ ಸೃಷ್ಟಿಸುತ್ತಿದ್ದಾರೆ. ಹಾಗಾಗಿ ಕಾಂಗ್ರೆಸ್ ಪ್ರಣಾಳಿಕೆ ನೋಡಿ ಬಿಜೆಪಿಯವರಿಗೆ ಗಾಬರಿ ಆಗಿದೆ. ದೇವರ ಹೆಸರನ್ನು ರಾಜಕೀಯವಾಗಿ ಬಳಸಿಕೊಳ್ಳಲು ಬಿಜೆಪಿ ಯತ್ನಿಸುತ್ತಿದೆ. ಬಿಜೆಪಿಯವರು ಒಂದಾದರೂ ಆಂಜನೇಯ ದೇಗುಲ ಕಟ್ಟಿದ್ದಾರೆಯೇ? ಎಂದು ಪ್ರಶ್ನಿಸಿದರು.

ರಾಜ್ಯದಲ್ಲಿ ಆಂಜನೇಯ ಹುಟ್ಟಿದ್ದಕ್ಕೆ ಸಾಕ್ಷಿ ಇದೆ. ಕಾಂಗ್ರೆಸ್ ಅಧಿಕಾರಕ್ಕೆ ಬಂದ ನಂತರ




ಆಂಜನೇಯ ದೇಗುಲ ಅಭಿವೃದ್ಧಿಗೆ ಒತ್ತು ನೀಡಲಾಗುವುದು. ಅಂಜನಾದ್ರಿ ಬೆಟ್ಟದ ಅಭಿವೃದ್ಧಿಗೆ ವಿಶೇಷ ಮಂಡಳಿ ಮಾಡಲಾಗುವುದು. ಯುವಕರಲ್ಲಿ ಆಂಜನೇಯ ಸಿದ್ಧಾಂತ ಬೆಳೆಸಲು ಪ್ರತ್ಯೇಕ ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದು ಎಂದರು.

ಮಾಜಿ ಸಚಿವ ಕೆ.ಎಸ್.ಈಶ್ವರಪ್ಪ ಕಾಂಗ್ರೆಸ್ ಪ್ರಣಾಳಿಕೆ ಪ್ರತಿಯನ್ನು ಸುಟ್ಟ ವಿಚಾರ ಕುರಿತು ಪ್ರತಿಕ್ರಿಯಿಸಿದ ಶಿವಕುಮಾರ್, ಬಿಜೆಪಿಯವರು ಕೆ.ಎಸ್.ಈಶ್ವರಪ್ಪರನ್ನೇ ಸುಟ್ಟಿ ಹಾಕಿದ್ದಾರೆ. ಭ್ರಷ್ಟಾಚಾರ ತಾಂಡವವಾಡುತ್ತಿದೆ ಎಂದು ಈಶ್ವರಪ್ಪರನ್ನೇ ಸುಟ್ಟಿ ಹಾಕಿದರು. ಇದರೊಂದಿಗೆ ಆ ಕಾರ್ಯಕರ್ತನ ಆತ್ಮಕ್ಕೆ ಶಾಂತಿ ಸಿಕ್ಕಿತು ಎಂದು ವ್ಯಂಗ್ಯವಾಡಿದರು.

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಉಪಾಧ್ಯಕ್ಷರಾಗಿ ನಂ.ಶ್ರೀಕಂಠಕುಮಾರ್ ನೇಮಕ

ಮೈಸೂರು, ಮೇ 4– ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಉಪಾಧ್ಯಕ್ಷರನ್ನಾಗಿ ಅಂಕಣಕಾರ ನಂ. ಶ್ರೀಕಂಠಕುಮಾರ್ ಅವರನ್ನು ನೇಮಕ ಮಾಡಲಾಗಿದೆ ಎಂದು ಮಹಾಸಭಾದ ರಾಜ್ಯಾಧ್ಯಕ್ಷ ಅಶೋಕ ಹಾರನಹಳ್ಳಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ನಂ.ಶ್ರೀಕಂಠಕುಮಾರ್

ವ್ಯಕ್ತಿ ಪರಿಚಯ: ನೇರ, ದಿಟ್ಟ, ನಿರಂತರ..... ಇದು ವಾಹಿನಿಯ ಘೋಷಣೆಯಷ್ಟೇ ಅಲ್ಲ, ಸುಮಾರು 46 ವರ್ಷಗಳಿಂದ ಸಮಾಜ ಸೇವೆಯಲ್ಲಿ ತೊಡಗಿರುವ ನಂ. ಶ್ರೀಕಂಠಕುಮಾರ್‌ರವರ ಸಾಧನೆ.

ಕೊಳ್ಳೇಗಾಲ ನಗರದಲ್ಲಿ ಹುಟ್ಟಿ ಬೆಳೆದು, ವಿದ್ಯಾಭ್ಯಾಸವನ್ನು ಪೂರೈಸಿದ ಇವರು 1977ರ ತುರ್ತು ಪರಿಸ್ಥಿತಿ ಸಂದರ್ಭದಲ್ಲಿ ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡು ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್, ವಿಶ್ವ ಹಿಂದೂ ಪರಿಷತ್, ಭಾರತೀಯ ಜನತಾ ಪಾರ್ಟಿ ಹಾಗೂ ಕನ್ನಡ ಕ್ರಿಯಾ ಸಮಿತಿಯಲ್ಲಿ ವಿವಿಧ ಜವಾಬ್ದಾರಿಗಳನ್ನು ಯಶಸ್ವಿಯಾಗಿ ನಿರ್ವಹಿಸಿದ್ದಾರೆ. ಹೋರಾಟ ಮನೋಭಾವದ ಇವರು 1982ರ ಕನ್ನಡ ಪರ ಗೋಕಾಕ್ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದ ಹೆಮ್ಮೆಯಿದೆ. ಸಹಕಾರ ಕ್ಷೇತ್ರದಲ್ಲೂ ಸೇವೆ ಸಲ್ಲಿಸಿದ್ದಾರೆ.

ಅನೇಕ ಧಾರ್ಮಿಕ ಸಂಘ-ಸಂಸ್ಥೆಗಳಲ್ಲೂ ತೊಡಗಿಸಿಕೊಂಡಿದ್ದಾರೆ. ಇವರ ಸಾಮಾಜಿಕ ಚಟುವಟಿಕೆಗಳನ್ನು ಗುರುತಿಸಿ ಮೈಸೂರು ಜಿಲ್ಲಾಡಳಿತದ ವತಿಯಿಂದ 2019ರಲ್ಲಿ ಕನ್ನಡ ರಾಜ್ಯೋತ್ಸವ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ. 2022ರಲ್ಲಿ ಮೈಸೂರಿನ ದತ್ತಪೀಠದ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರ 80ನೇ ವರ್ಧಂತೋತ್ಸವ ಸಮಾರಂಭದಲ್ಲಿ "ದತ್ತಬಂಧು" ಪುರಸ್ಕಾರವನ್ನು ನೀಡಲಾಗಿದೆ. ಇವರ ಸ್ನೇಹಿತರು "ನಂಮನ" ಛಾಯಾಚಿತ್ರ ಸಂಚಿಕೆಯನ್ನು ಹೊರತಂದಿರುವುದು ಇವರ ಸಾಮಾಜಿಕ ಚಟುವಟಿಕೆಗಳಿಗೆ ಹಿಡಿದ ಕೈಗನ್ನಡಿಯಾಗಿದೆ. ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಅಧ್ಯಕ್ಷರಾದ ಅಶೋಕ ಹಾರನಹಳ್ಳಿ ಅವರು ಈಗ ಇವರನ್ನು ಮಹಾಸಭಾದ ರಾಜ್ಯ ಉಪಾಧ್ಯಕ್ಷರನ್ನಾಗಿ ನೇಮಿಸಿರುವುದು ಮಹಾ ಗೌರವ ಸಂದಿದೆ.

ಚಾಮುಂಡೇಶ್ವರಿ ಕ್ಷೇತ್ರದಲ್ಲಿ ನನಗೊಮ್ಮೆ ಅವಕಾಶ ನೀಡಿ: ಸಿದ್ದೇಗೌಡ

ಮೈಸೂರು, ಮೇ 4–ಚಾಮುಂಡೇಶ್ವರಿ ಕ್ಷೇತ್ರವನ್ನು ಮಾದರಿ ಕ್ಷೇತ್ರವನ್ನಾಗಿ ಮಾಡಲು ಹಾಗೂ ನಿಮ್ಮ ಸೇವೆ ಮಾಡಲು ನನಗೊಮ್ಮೆ ಅವಕಾಶ ನೀಡಬೇಕೆಂದು ಚಾಮುಂಡೇಶ್ವರಿ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಸ್.ಸಿದ್ದೇಗೌಡ ಮನವಿ ಮಾಡಿದರು.

ಚಾಮುಂಡೇಶ್ವರಿ ಕ್ಷೇತ್ರದ ಬೀರಿಹುಂಡಿ, ಕುಮಾರಬೀಡು, ಗೋಹಳ್ಳಿ, ಜಟ್ಟಿಹುಂಡಿ ಗ್ರಾಮಗಳಲ್ಲಿ ಪಾದಯಾತ್ರೆ, ರೋಡ್‌ಶೋ ನಡೆಸಿ ಮತಯಾಚಿಸಿ ಮಾತನಾಡಿದ ಅವರು, ಜೆಡಿಎಸ್ ಶಾಸಕರಿಗೆ ಎರಡು ಬಾರಿ ಅವಕಾಶ ನೀಡಿದ್ದೀರಿ. ಆದರೆ ನಾನು ಒಬ್ಬ ರೈತರ ಮಗನಾಗಿದ್ದು ಗ್ರಾಮ ಪಂಚಾಯಿತಿ ಅಧ್ಯಕ್ಷನಾಗಿ, ಪತ್ತಿನ ಸಹಕಾರ ಸಂಘದ ಅಧ್ಯಕ್ಷನಾಗಿ, ಎಪಿಎಂಸಿ ಅಧ್ಯಕ್ಷನಾಗಿ, ಮೈಮುಲ್ ಅಧ್ಯಕ್ಷನಾಗಿ ಗ್ರಾಮೀಣ ರೈತರ, ಬಡವರ ಪರವಾಗಿ ಕೆಲಸ ಮಾಡಿದ್ದೇನೆ. ನನಗೂ 40 ವರ್ಷಗಳ ರಾಜಕೀಯದ ಅನುಭವವಿದೆ. ಹಲವು ಜನ ಟಿಕೆಟ್ ಆಕಾಂಕ್ಷಿಗಳಿದ್ದರೂ ಸಹ ಸಿದ್ದರಾಮಯ್ಯರವರು ನನಗೆ ಟಿಕೆಟ್ ನೀಡಿದ್ದಾರೆ. ನಿಮ್ಮೆಲ್ಲರ ಆಶೀರ್ವಾದದಿಂದ ಈ ಬಾರಿ ಗೆಲ್ಲುವ ಅವಕಾಶವಿದ್ದು, ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರಲಿದೆ ಎಂದರು.

ಜೆಡಿಎಸ್, ಬಿಜೆಪಿ ಪಕ್ಷದ ಯಾವುದೇ ಆಮಿಷಗಳಿಗೆ ಒಳಗಾಗದೆ ನುಡಿದಂತೆ ನಡೆದ ಕಾಂಗ್ರೆಸ್ ಬೆಂಬಲಿಸಿದರೆ ಸರ್ಕಾರ ಬಂದ ತಕ್ಷಣದಲ್ಲೇ ಪ್ರತಿ ಕುಟುಂಬದ ಮಹಿಳೆಗೆ 2 ಸಾವಿರ ರೂಪಾಯಿ, ಪ್ರತಿಯೊಬ್ಬರಿಗೂ 10 ಕೆ.ಜಿ. ಅಕ್ಕಿ, ಉಚಿತ ವಿದ್ಯುತ್, ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ, ನಿರುದ್ಯೋಗಿ ಪದವೀಧರರಿಗೆ ತಿಂಗಳಿಗೆ 3 ಸಾವಿರ ರೂ.ಗಳನ್ನು ಸರ್ಕಾರ ನೀಡುತ್ತದೆ. ಆದ್ದರಿಂದ ನನ್ನನ್ನು ಹೆಚ್ಚು ಮತಗಳ ಅಂತರದಿಂದ ಆಯ್ಕೆ ಮಾಡಬೇಕೆಂದು ಮನವಿ ಮಾಡಿದರು. ಈ ಸಂದರ್ಭದಲ್ಲಿ ಜಿ.ಪಂ. ಮಾಜಿ ಅಧ್ಯಕ್ಷ ಕೆ.ಮರೀಗೌಡ, ಜಿ.ಪಂ. ಮಾಜಿ ಸದಸ್ಯ ಬೀರಿಹುಂಡಿ ಬಸವಣ್ಣ, ಮುಖಂಡರಾದ ಕೃಷ್ಣಕುಮಾರ್ ಸಾಗರ್, ಕೆಂಚಪ್ಪ, ಮಾಕಿಮಹದೇವ, ಕೆಂಪೇಗೌಡ, ಹಳೆಕಾಮನಕೊಪ್ಪಲು ಕರೀಗೌಡ, ರಟ್ನಳ್ಳಿ ಮಹಾದೇವ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಿ.ಗುರುಸ್ವಾಮಿ, ರವಿ, ಮಹೇಶ್, ರಾಜಣ್ಣ, ಮಲ್ಲೇಶ್ ಹಾಜರಿದ್ದರು.



ಬಿ.ಕೆ. ಹರಿಪ್ರಸಾದ್ ಭೇಟಿಯಾದ ನಾಚಪ್ಪ



ಮಡಿಕೇರಿ, ಮೇ 4– ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆಯ ಅಧ್ಯಕ್ಷ ಎನ್.ಯು.ನಾಚಪ್ಪ ಅವರು ವಿಧಾನಪರಿಷತ್‌ನ ವಿರೋಧ ಪಕ್ಷದ ನಾಯಕ ಬಿ.ಕೆ.ಹರಿಪ್ರಸಾದ್ ಅವರನ್ನು ಭೇಟಿಯಾಗಿ ಚರ್ಚೆ ನಡೆಸಿದರು. ಹಿರಿಯರಾದ ಬೊಟ್ಟೋಳಂಡ ಮಿಟ್ಟು ಚೆಂಗಪ್ಪ ಅವರ ನಿವಾಸದಲ್ಲಿ ಭೇಟಿಯಾದ ನಾಚಪ್ಪ ಹಾಗೂ ಹರಿಪ್ರಸಾದ್ ಕೊಡವ ಲ್ಯಾಂಡ್ ಜಿಯೋ–ರಾಜಕೀಯದ ಬಹುಕಾಲದ ಬೇಡಿಕೆಯ ಕುರಿತು ಚರ್ಚಿಸಿದರು.

ಇಂದು ಸ್ವೀಪ್‌ನಿಂದ ಮತದಾನ ಮಹತ್ವದ ಬೃಹತ್ ಜಾಗೃತಿ ಜಾಥಾ

ಮಡಿಕೇರಿ, ಮೇ 4– ಕೊಡಗು ಜಿಲ್ಲಾ ಮತದಾರರ ಶಿಕ್ಷಣ ಮತ್ತು ಸಹಭಾಗಿತ್ವ ಸಮಿತಿ (ಸ್ವೀಪ್) ಹಾಗೂ ಜಿಲ್ಲಾ ಸ್ಕೌಟ್ಸ್ ಮತ್ತು ಗೈಡ್ಸ್ ವತಿಯಿಂದ ಮೇ 5 ರಂದು ಮಡಿಕೇರಿ ನಗರದಲ್ಲಿ ವಿವಿಧ ಸಂಘ ಸಂಸ್ಥೆಗಳ ಸಹಭಾಗಿತ್ವದಲ್ಲಿ ಬೃಹತ್ ಜಾಥಾ ನಡೆಯಲಿದೆ ಎಂದು ಜಿಪಂ ಸಿಇಒ ಮತ್ತು ಸ್ವೀಪ್ ಸಮಿತಿ ಅಧ್ಯಕ್ಷ ಡಾ.ಎಸ್.ಆಕಾಶ್ ತಿಳಿಸಿದ್ದಾರೆ.

ಅಂದು ಬೆಳಗ್ಗೆ 10 ಗಂಟೆಗೆ ಮಡಿಕೇರಿ ನಗರದ ಎ.ವಿ.ಶಾಲೆ ಬಳಿಯಿಂದ ಮತದಾನದ ಮಹತ್ವ ಸಾರುವ ಸಂದೇಶದೊಂದಿಗೆ ಜಾಥಾ ಆರಂಭವಾಗಲಿದೆ. ಮಡಿಕೇರಿ ಮಾರುಕಟ್ಟೆ, ಮಹದೇವಪೇಟೆ ಮೂಲಕ ಸಾಗಿ ಹಳೆ ಬಸ್ ನಿಲ್ದಾಣದಲ್ಲಿ ಜಾಥಾ ಸಮಾಪನ ಗೊಳ್ಳಲಿದೆ. ಜಾಥಾದಲ್ಲಿ ಎಲ್ಲಾ ಸಂಘ ಸಂಸ್ಥೆಗಳು, ಸರ್ಕಾರಿ ಇಲಾಖೆಗಳ ಅಧಿಕಾರಿ, ಸಿಬ್ಬಂದಿಗಳು, ಕಾಲೇಜು ವಿದ್ಯಾರ್ಥಿಗಳು ಪಾಲ್ಗೊಂಡು ಜಾಥಾವನ್ನು ಯಶಸ್ವಿಗೊಳಿಸುವಂತೆ ಡಾ.ಎಸ್. ಆಕಾಶ್ ಹಾಗೂ ಜಿಲ್ಲಾ ಸ್ಕೌಟ್ಸ್ ಮತ್ತು ಗೈಡ್ಸ್ ಪ್ರಧಾನ ಆಯುಕ್ತ ಕೆ.ಟಿ. ಬೇಬಿ ಮ್ಯಾಥ್ಯೂ ಕೋರಿದ್ದಾರೆ.

ಉಚಿತ ಕೊಡುಗೆಗಳ ಅನುಷ್ಠಾನಕ್ಕೆ ಹಣವೆಲ್ಲಿದೆ

ಮಡಿಕೇರಿಯಲ್ಲಿ ವಿಧಾನಪರಿಷತ್ ಸದಸ್ಯ ಎ.ಹೆಚ್. ವಿಶ್ವನಾಥ್ ಪ್ರಶ್ನೆ

ಉಚಿತ ಕೊಡುಗೆ ಬಿಟ್ಟು ಉಚಿತ ಶಿಕ್ಷಣ, ಆರೋಗ್ಯ ಕುರಿತು ಮಾತನಾಡಿ



ಮಡಿಕೇರಿ, ಮೇ 4– ಚುನಾವಣಾ ಹಂತದಲ್ಲಿ ಎಲ್ಲ ರಾಜಕೀಯ ಪಕ್ಷಗಳು ಕೊಡುಗೆಗಳ ಕುರಿತು ಮಾತನಾಡುವುದಕ್ಕೂ ಮಿಗಿಲಾಗಿ ಉಚಿತ ಶಿಕ್ಷಣ, ಉಚಿತ ಆರೋಗ್ಯ ಕಾರ್ಯಕ್ರಮಗಳ ಕುರಿತು ಮಾತನಾಡಬೇಕು. ಹೀಗಿದ್ದೂ ರಾಜಕೀಯ ಪಕ್ಷಗಳು ಓಟಿಗೋಸ್ಕರ ಹೇಳಬೇಕಾದ್ದನ್ನು ಹೇಳುತ್ತಿಲ್ಲ ಎಂದು ವಿಧಾನಪರಿಷತ್ ಸದಸ್ಯ ಎ.ಹೆಚ್. ವಿಶ್ವನಾಥ್ ವಿಷಾದ ವ್ಯಕ್ತಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಚುನಾವಣಾ ಹಂತದಲ್ಲಿ ಎಲ್ಲ ಪಕ್ಷಗಳು ಉಚಿತ ಕೊಡುಗೆಗಳ ಬಗ್ಗೆ ಮಾತನಾಡಿವೆ. ಇವುಗಳನ್ನು ಕಾರ್ಯಗತಗೊಳಿಸಲು ಹಣವೆಲ್ಲಿದೆ ಎಂದು ಪ್ರಶ್ನಿಸಿದರಲ್ಲದೆ, ಬೊಮ್ಮಾಯಿ ಅವರು 3.17 ಲಕ್ಷ ಕೋಟಿಯ ಬಜೆಟ್ ತಮ್ಮದೆಂದು ಹೇಳಿಕೊಳ್ಳುತ್ತಾರೆ. ಇದರಲ್ಲಿ 1.76 ಲಕ್ಷ ಕೋಟಿ ವೇತನಕ್ಕೆ ಬಳಕೆಯಾಗಿ ಹೋಗುತ್ತಿದೆ. ಇದರ ಮೇಲೆ 7 ಸಾವಿರ ಕೋಟಿ ಸಾಲವಿದ್ದು, ಉಚಿತ ಕೊಡುಗೆಗಳಿಗೆ ಹಣ ಎಲ್ಲಿದೆ ಎಂದು ಪ್ರಶ್ನಿಸಿದರು.

ನಾನು ಸ್ವತಂತ್ರ ವ್ಯಕ್ತಿ: ಪ್ರಶ್ನೆಯೊಂದಕ್ಕೆ ಉತ್ತರಿಸಿದ ಅವರು, ಇಂದು ನಾನು ನಾಮನಿರ್ದೇಶಿತ ವಿಧಾನಪರಿಷತ್‌ನ ಸದಸ್ಯನಾಗಿದ್ದು, ಯಾವುದೇ ಪಕ್ಷದಲ್ಲಿ ಇಲ್ಲದ ಸ್ವತಂತ್ರ ವ್ಯಕ್ತಿಯಾಗಿದ್ದು, ಕಾಂಗ್ರೆಸ್‌ನ್ನು ಬೆಂಬಲಿಸುತ್ತಿರುವುದಾಗಿ ಸ್ಪಷ್ಟಪಡಿಸಿದರು. ಪ್ರಜಾತಂತ್ರ ವ್ಯವಸ್ಥೆಯಡಿ ಯಾರು ಯಾವುದೇ ಪಕ್ಷದಲ್ಲಿರಲು ಅವಕಾಶವಿದೆ. ಅದರಂತೆ ತಾನು ವಿವಿಧ ಪಕ್ಷಗಳಲ್ಲಿ ಇದ್ದೆನಾದರು, ಆ ಎಲ್ಲಾ ಪಕ್ಷಗಳಲ್ಲಿ ತನ್ನ ಅನಿಸಿಕೆಗಳನ್ನು ದಿಟ್ಟವಾಗಿ ಮುಂದಿಟ್ಟಿದ್ದೇನೆ. ತನ್ನ ಚಿಂತನೆಗಳಿಗೆ ಸರಿ ಹೊಂದಲಿಲ್ಲ ಎನ್ನುವ ಕಾರಣಕ್ಕಾಗಿ ಆಯಾ ಪಕ್ಷಗಳಿಂದ ಹೊರ ಹೋಗಿದ್ದೇನೆಂದು ಸ್ಪಷ್ಟಪಡಿಸಿದರು.

ಮುಸ್ಲಿಮರಿಗೆ ಏಕಿಲ್ಲ ಟಿಕೆಟ್: ರಾಷ್ಟ್ರದ ಸಂವಿಧಾನ, ಅದನ್ನು ರಚಿಸಿದ ಡಾ. ಅಂಬೇಡ್ಕರ್ ಅವರನ್ನು ಗೌರವಿಸುವುದಾಗಿ ಹೇಳಿಕೊಳ್ಳುವ ಬಿಜೆಪಿ, ಚುನಾವಣೆಯಲ್ಲಿ ಅಲ್ಪಸಂಖ್ಯಾತ ಸಮೂಹದ ಮುಸ್ಲಿಮರಿಗೆ ಏತಕ್ಕೆ ಟಿಕೆಟ್ ನೀಡಿಲ್ಲವೆಂದು ಪ್ರಶ್ನಿಸಿದರು.

ಭಜರಂಗದಳ–ಆಂಜನೇಯ ಬೇರೆ: ಕಾಂಗ್ರೆಸ್ ಪ್ರಣಾಳಿಕೆಯಲ್ಲಿ ಭಜರಂಗದಳವನ್ನು ನಿಷೇಧಿಸುವ ಅಂಶ ಪ್ರಸ್ತಾಪಿಸಿದ ಬಗ್ಗೆ ಕೇಳಿದ ಪ್ರಶ್ನೆಗೆ ಅವರು, ಭಜರಂಗದಳ ಮತ್ತು ಆಂಜನೇಯ ಎರಡೂ ಬೇರೆ ಬೇರೆ. ಭಜರಂಗದಳ ಎನ್ನುವುದು ಒಂದು ಸಂಘಟನೆ ಮಾತ್ರ. ಈ ಸಂಘಟನೆ ನೈತಿಕ ಪೊಲೀಸ್‌ಗಿರಿಯಲ್ಲಿ ನಿರತವಾಗಿದೆ ಎಂದು ವಿಶ್ವನಾಥ್ ಟೀಕಿಸಿದರು. ಇದಕ್ಕೆ ಕೊನೆ ಹಾಡಬೇಕಾಗಿದೆ ಎಂದು ತಿಳಿಸಿದರಲ್ಲದೇ, ನಾನು ಕೂಡ ಆಂಜನೇಯ ಹಾಗೂ ರಾಮ ಭಕ್ತ. ಆದರೆ 'ವಿರಾಟ್ ರಾಮ'ನ ಭಕ್ತನಲ್ಲ ಎಂದು ಸ್ಪಷ್ಟಪಡಿಸಿದರು.

ಬದಲಾವಣೆ ಬಯಸಿದ್ದಾರೆ: ಪ್ರಸ್ತುತ ಚುನಾವಣೆಯಲ್ಲಿ ಸುಧಾರಣೆಗೋಸ್ಕರ ಜನತೆ ಬದಲಾವಣೆಯನ್ನು ಬಯಸಿದ್ದಾರೆ ಎಂದು ವಿಶ್ವನಾಥ್ ಹೇಳಿದರು. ಕೊಡಗಿನ ಎರಡು ಕ್ಷೇತ್ರಗಳ ಕಾಂಗ್ರೆಸ್ ಅಭ್ಯರ್ಥಿಗಳಾದ ಡಾ. ಮಂಥರ್ ಗೌಡ ಮತ್ತು ಎ.ಎಸ್. ಪೊನ್ನಣ್ಣ ಅವರನ್ನು ಇಂತಹ ಬದಲಾವಣೆಗಾಗಿ ಜಿಲ್ಲೆಯ ಜನತೆ ಗೆಲ್ಲಿಸುವ ಮೂಲಕ ಹೊಸ ಗಾಳಿ ಬೀಸುವಂತಾಗಲಿ ಎಂದು ಆಶಿಸಿದರು.

ಕಾಂಗ್ರೆಸ್ ಮುಖಂಡರಾದ ಹೆಚ್.ಎಸ್. ಚಂದ್ರಮೌಳಿ ಅವರು ಮಾತನಾಡಿ, ಕೊಡಗಿನಲ್ಲಿ ರಾಜಕೀಯ ಬದಲಾವಣೆಯ ತಂಗಾಳಿ ಬೀಸುತ್ತಿದೆ. ಸುದೀರ್ಘ ಆಡಳಿತ ನಡೆಸಿದವರಿಗೆ ವಿರಾಮ ನೀಡಿ ಕಾಂಗ್ರೆಸ್ ಅಭ್ಯರ್ಥಿಗಳಿಗೆ ಜನತೆ ಆಶೀರ್ವದಿಸಬೇಕೆಂದು ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ಟಿ.ಪಿ. ರಮೇಶ್, ಕೆ.ಎಂ. ಲೋಕೇಶ್, ಎಂ.ಎ. ಉಸ್ಮಾನ್, ಪಿ.ಸಿ. ಹಸೈನಾರ್ ಉಪಸ್ಥಿತರಿದ್ದರು.

ಅಪ್ಪಚ್ಚುರಂಜನ್ ಪರ ಮಾಜಿ ಸಿಎಂ ಸದಾನಂದ ಗೌಡ ಪ್ರಚಾರ



ಗುಡ್ಡೆಹೊಸೂರು, ಮೇ 4– ಮಡಿಕೇರಿ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಅಪ್ಪಚ್ಚು ರಂಜನ್ ಪರ ಗುಡ್ಡೆಹೊಸೂರು ಗೌಡ ಸಮಾಜದ ಸದಸ್ಯರ ಸಮ್ಮುಖದಲ್ಲಿ ಇಲ್ಲಿನ ಸಮುದಾಯ ಭವನದಲ್ಲಿ ಮಾಜಿ ಮುಖ್ಯಮಂತ್ರಿ ಡಿ.ವಿ. ಸದಾನಂದಗೌಡ ಮತಯಾಚಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಬಿಜೆಪಿ ಅಧ್ಯಕ್ಷ ರಾಬಿನ್ ದೇವಯ್ಯ ಇಲ್ಲಿನ ಸಮಾಜದ ಅಧ್ಯಕ್ಷ ಗುಡ್ಡೆಮನೆ ವಿಶು ಕುಮಾರ್, ಶಕ್ತಿಕೇಂದ್ರದ ಅಧ್ಯಕ್ಷ ಕುಡೆಕ್ಕಲ್ ನಿತ್ಯಾನಂದ, ಕುಶಾಲನಗರ ಗೌಡ ಸಮಾಜದ ಅಧ್ಯಕ್ಷ ಚಿಲ್ಲನ ಗಣಿಪ್ರಸಾದ್ ಮತ್ತು ಸಮಾಜದ ಅಧಿಕ ಮಂದಿ ಹಾಜರಿದ್ದರು. ಈ ಸಂದರ್ಭದಲ್ಲಿ ಮಾತನಾಡಿದ ಗೌಡರು, ಜಿಲ್ಲೆಯಲ್ಲಿ ಮತ್ತು ಈ ಕ್ಷೇತ್ರದಲ್ಲಿ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದ ಹಲವು ಯೋಜನೆಗಳ ಬಗ್ಗೆ ವಿವರಿಸಿದರು. ರಾಬಿನ್ ದೇವಯ್ಯ ಮಾತನಾಡಿದರು. ಅಲ್ಲದೆ ಇಂದು ಜನಾಂಗದ ಮತಕ್ಕಾಗಿ ರಾಷ್ಟ್ರಭಕ್ತಿ ಹೊಂದಿರುವ ಭಜರಂಗದಳವನ್ನು ನಿಷೇಧಿಸುವ ಆ ಪಕ್ಷದ ಪ್ರಣಾಳಿಕೆಯ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದರು. ಈ ಬಾರಿ ಕೊಡಗಿನ ಎರಡು ಕ್ಷೇತ್ರಗಳು ಬಿಜೆಪಿ ಪಾಲಾಗಲಿದೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು.

ನಾಳೆ ಮೂರ್ನಾಡುವಿನಲ್ಲಿ ಮತದಾನ ಮಹತ್ವದ ಸಂದೇಶದ ಮ್ಯಾರಥಾನ್

ಮಡಿಕೇರಿ, ಮೇ 4– ಜಿಲ್ಲಾಡಳಿತ, ಕೊಡಗು ಜಿಲ್ಲಾ ಮತದಾರರ ಶಿಕ್ಷಣ ಮತ್ತು ಸಹಭಾಗಿತ್ವ ಸಮಿತಿ (ಸ್ವೀಪ್) ಹಾಗೂ ರೋಟರ್ಯಾಕ್ಟ್ ಕ್ಲಬ್ ಪದವಿ ಕಾಲೇಜು ಮೂರ್ನಾಡು ಸಹಯೋಗದಲ್ಲಿ ಮೇ 6 ರಂದು ಬೆಳಗ್ಗೆ 8 ಗಂಟೆಗೆ ಮತದಾನ ಮಹತ್ವ ಸಾರುವ ಮ್ಯಾರಥಾನ್ ಆಯೋಜಿಸಲಾಗಿದೆ.

ಅಂದು ಬೆಳಗ್ಗೆ 8 ಗಂಟೆಗೆ ಮೂರ್ನಾಡು ರಸ್ತೆಯ ಎಚ್.ಪಿ.ಪೆಟ್ರೋಲ್ ಬಂಕ್ ಬಳಿಯಿಂದ ಮೂರ್ನಾಡುವಿನ ಬಾಚೆಟ್ಟಿರ ಲಾಲು ಮುದ್ದಯ್ಯ ಕ್ರೀಡಾಂಗಣದವರೆಗೆ ಮತದಾನ ಮಹತ್ವ ಸಾರುವ ಮ್ಯಾರಥಾನ್ ಆಯೋಜಿಸಲಾಗಿದೆ ಜಿಲ್ಲಾಧಿಕಾರಿ ಡಾ.ಬಿ.ಸಿ. ಸತೀಶ್, ಸ್ವೀಪ್ ಸಮಿತಿ ಅಧ್ಯಕ್ಷ ಡಾ.ಎಸ್. ಆಕಾಶ್ ಪಾಲ್ಗೊಳ್ಳಲಿದ್ದಾರೆ.

ಸಾರ್ವಜನಿಕರು, ಕ್ರೀಡಾಪಟುಗಳು, ಸಂಘ–ಸಂಸ್ಥೆಗಳ ಸದಸ್ಯರು ಪಾಲ್ಗೊಂಡು ಮತದಾನದ ಮಹತ್ವದ ಸಂದೇಶವನ್ನು ಮ್ಯಾರಥಾನ್ ಮೂಲಕ ತಿಳಿಸಬೇಕೆಂದು ಮೂರ್ನಾಡು ಪದವಿ ಕಾಲೇಜಿನ ರೋಟರ್ಯಾಕ್ಟ್ ಪ್ರಮುಖರು ಕೋರಿದ್ದಾರೆ.

ಸ್ಪರ್ಧಾರ್ಥಿಗಳು ಮೇ 6 ರಂದು ಬೆಳಗ್ಗೆ 7.30 ಗಂಟೆಗೆ ಸ್ಥಳದಲ್ಲಿ ಹಾಜರಿರಬೇಕು. ವಿಜೇತರಿಗೆ ಆಕರ್ಷಕ ಬಹುಮಾನ ನೀಡಲಾಗುತ್ತದೆ. ಸ್ಪರ್ಧೆಗೆ ಹೆಸರು ನೋಂದಾಯಿಸಲು ಕೊನೆ ದಿನ ಮೇ 5 ರ ಸಂಜೆ 6 ಗಂಟೆಯಾಗಿದೆ. ನೋಂದಣಿಗೆ ಕರೆ ಮಾಡಬೇಕಾದ ಸಂಖ್ಯೆ– 9110874244, 9481589533.

ಹೆಬ್ಬಾಲೆಯಲ್ಲಿ ವಿವಿಧ ಪಕ್ಷಗಳ ಕಾರ್ಯಕರ್ತರು ಕಾಂಗ್ರೆಸ್ ಸೇರ್ಪಡೆ



ಕುಶಾಲನಗರ, ಮೇ 4– ಸಮೀಪದ ಹೆಬ್ಬಾಲೆ ಗ್ರಾಮದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಡಾ.ಮಂಥರ್ ಗೌಡ ಅವರು ಮತಯಾಚನೆ ಮಾಡಿದರು.

ಇಲ್ಲಿನ ಸಮುದಾಯ ಭವನದಲ್ಲಿ ಏರ್ಪಡಿಸಿದ್ದ ಪ್ರಚಾರ ಕಾರ್ಯಕ್ರಮದಲ್ಲಿ ಗ್ರಾಪಂ ಮಾಜಿ ಅಧ್ಯಕ್ಷ ಶೇಖರ್ ನೇತೃತ್ವದಲ್ಲಿ ವಿವಿಧ ಪಕ್ಷಗಳ ಮುಖಂಡರಿಗೆ ಮಂಥರ್‌ಗೌಡ ಪುಷ್ಪಾಹಾರ ಹಾಕಿ ಪಕ್ಷಕ್ಕೆ ಬರಮಾಡಿಕೊಂಡರು. ಈ ಸಂದರ್ಭದಲ್ಲಿ ಮಾತನಾಡಿದ ಅವರು, ಈ ಬಾರಿ ಕಾಂಗ್ರೆಸ್ ಪಕ್ಷಕ್ಕೆ ಬೆಂಬಲ ನೀಡಬೇಕು ಎಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ವಿ.ಪಿ.ಶಶಿಧರ್, ಕೆಪಿಸಿಸಿ ಕಾರ್ಯದರ್ಶಿ ಕೆ.ಪಿ.ಚಂದ್ರಕಲಾ, ಸದಸ್ಯ ಸಂಜಯ್ ಜೀವಿಜಯ, ನಟೇಶ್ ಗೌಡ, ಚುನಾವಣಾ ಉಸ್ತುವಾರಿ ಮಂಜುನಾಥ್ ಗುಂಡೂರಾವ್, ಡಿಸಿಸಿ ಸದಸ್ಯ ಯಾಕುಬ್, ಶಾಜಿ, ಗ್ರಾಮದೇವತಾ ಸಮಿತಿ ಅಧ್ಯಕ್ಷ ಯಜಮಾನ ಬಸವರಾಜು, ಗ್ರಾಪಂ ಅಧ್ಯಕ್ಷ ಮಂಜುನಾಥ್, ಮಾಜಿ ಅಧ್ಯಕ್ಷ ಎಚ್.ಟಿ. ದಿನೇಶ್, ಎಪಿಸಿಎಂಎಸ್ಸಿ ಮಾಜಿ ಉಪಾಧ್ಯಕ್ಷ ಟಿ.ಬಿ.ಜಗದೀಶ್, ಚಂದ್ರಶೇಖರ್, ಮೋಹನ್ ಇದ್ದರು.

ವಿರಾಜಪೇಟೆಯಲ್ಲಿ ಶಾಸಕರ ಸಾಧನೆ ಶೂನ್ಯ

ಕಾಂಗ್ರೆಸ್ ಅಭ್ಯರ್ಥಿ ಎ.ಎಸ್. ಪೊನ್ನಣ್ಣ ಗೆಲುವು ಖಚಿತ



ವಿರಾಜಪೇಟೆ, ಮೇ 4– ವಿರಾಜಪೇಟೆ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಕಳೆದ 20 ವರ್ಷಗಳಿಂದಲೂ ಯಾವುದೇ ಅಭಿವೃದ್ಧಿ ಕೆಲಸಗಳು ಆಗಿಲ್ಲ. ಜನರ ಮುಂದೆ ಕೋಟಿ ಕೋಟಿ ಅನುದಾನದ ಹೆಸರು ಹೇಳುವ ಜನಪ್ರತಿನಿಧಿಗಳು ಅಭಿವೃದ್ಧಿಯಲ್ಲಿ ಶೂನ್ಯವಾಗಿದ್ದು, ಶಾಸಕರ ವೈಫಲ್ಯ ಎದ್ದು ಕಾಣುತ್ತಿದೆ ಎಂದು ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ಮಳವಂಡ ಅರವಿಂದ್ ಕುಟ್ಟಪ್ಪ ಆಪಾದಿಸಿದ್ದಾರೆ.

ವಿರಾಜಪೇಟೆ ಪ್ರೆಸ್‌ಕ್ಲಬ್‌ನಲ್ಲಿ ಕರೆದಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ಗೋಣಿಕೊಪ್ಪಲುವಿನಲ್ಲಿ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣಕ್ಕೆ 5 ಕೋಟಿ ಅನುದಾನದ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿದ ಬಳಿಕ ಶಾಸಕರು ತಿರುಗಿ ನೋಡಿಲ್ಲ, ಕಾಮಗಾರಿ ನಡೆಯುವುದಾಗಿ ಅನೇಕ ವರ್ಷಗಳಿಂದ ಹೇಳಿಕೊಂಡು ಬರುತ್ತಿರುವ ಶಾಸಕರು ಇದುವರೆಗು ಬರಿ ಸುಳ್ಳು ಭರವಸೆಗಳನ್ನು ನೀಡುತ್ತ ಬಂದಿದ್ದಾರೆ ಎಂದರು.

ಗೋಣಿಕೊಪ್ಪಲು ವ್ಯಾಪ್ತಿಯ ದಲಿತರು, ಕಾರ್ಮಿಕರು, ಹಿಂದುಳಿದ ವರ್ಗಗಳಿಗೆ 40 ವರ್ಷಗಳಿಂದಲೂ ಮನೆಗೆ ಹಕ್ಕುಪತ್ರ ದೊರಕಿಲ್ಲ, ಇನ್ನು ಪಟ್ಟಣದ ರಾಜಕಾಲುವೆ, ತೋಡುಗಳ ಬದಿಯಲ್ಲಿಯೇ ಕೋಳಿ, ಹಂದಿ, ಮೀನು ತ್ಯಾಜ್ಯಗಳನ್ನು ಸುರಿಯುತ್ತಾರೆ. ಇದನ್ನು ಗಮನಿಸಿದ್ದರು ಮೌನವಹಿಸಿರುವುದು ಸರಿಯಲ್ಲ. ಸ್ಥಳೀಯ ಶಾಸಕರು ತ್ಯಾಜ್ಯ ವಿಲೇವಾರಿ ಘಟಕವನ್ನು ಮಾಡುವುದಾಗಿ ಹಲವು ವರ್ಷಗಳಿಂದ ಭರವಸೆ ನೀಡುತ್ತಿದ್ದಾರೆ. ಆದರೆ ಕಾಮಗಾರಿ ನಡೆದಿಲ್ಲ. ಈ ಕಾರಣದಿಂದ ಜನತೆ ಈ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದತ್ತ ಒಲವು ತೋರುತ್ತಿದ್ದಾರೆ. ಅಭ್ಯರ್ಥಿ ಎ.ಎಸ್. ಪೊನ್ನಣ್ಣ ಗೆಲುವು ಖಚಿತ ಎಂದರು.

ಕಾಂಗ್ರೆಸ್ ಪಕ್ಷದ ಜಿಲ್ಲಾ ಕಾನೂನು ಘಟಕದ ಮಾಜಿ ಅಧ್ಯಕ್ಷ ಡಿ.ಸಿ.ದ್ರುವ ಕುಮಾರ್ ಮಾತನಾಡಿ, ವಿರಾಜಪೇಟೆ ವಿಧಾನಸಭಾ ಕ್ಷೇತ್ರದಲ್ಲಿ ಕಳೆದ 20 ವರ್ಷಗಳಿಂದಲೂ ಅಭಿವೃದ್ಧಿ ಕೆಲಸ ಮಾಡಿದ್ದರೆ ಈಗ ಬೀದಿ ಬೀದಿಯಲ್ಲಿ ಮತ ಕೇಳುವ ಪರಿಸ್ಥಿತಿ ಬರುತ್ತಿರಲಿಲ್ಲ. ಬಿಜೆಪಿ ಪಕ್ಷದ ಶಾಸಕರಿದ್ದು ಅವರದ್ದೆ ಸರಕಾರ ರಾಜ್ಯದಲ್ಲಿದ್ದರು ಅಭಿವೃದ್ಧಿ ಶೂನ್ಯ, ಸಾರ್ವಜನಿಕ ಆಸ್ಪತ್ರೆಯಲ್ಲಿ ಮೂಲಭೂತ ಸೌಲಭ್ಯಗಳಿಲ್ಲ, ವೈದ್ಯರುಗಳ ಕೊರತೆ, ಇನ್ನು ರಸ್ತೆಗಳು ಎಲ್ಲಿ ನೋಡಿದರು ಗುಂಡಿಗಳೆ ಎದ್ದು ಕಾಣುತ್ತಿವೆ ಎಂದು ಅವರು ಹೇಳಿದರು. ಸುದ್ದಿಗೋಷ್ಠಿಯಲ್ಲಿ ನಗರ ಕಾಂಗ್ರೆಸ್ ಮಾಜಿ ಅಧ್ಯಕ್ಷ ಜಿ.ಜಿ.ಮೋಹನ್, ಪಕ್ಷದ ಜಿಲ್ಲಾ ಸಮಿತಿಯ ಮರ್ವಿನ್ ಲೋಭೋ ಮತ್ತು ಕಾಂಗ್ರೆಸ್ ಪಕ್ಷದ ಕೊಡಗು ಮೈಸೂರು ಸಮಿತಿಯ ಎ.ಆರ್. ಹರ್ಷದ್ ಫರೂಕ್ ಮಾತನಾಡಿದರು.

ಚಾ.ನಗರದಲ್ಲಿ ಬಿಜೆಪಿ, ಕಾಂಗ್ರೆಸ್, ಜೆಡಿಎಸ್, ಬಿಎಸ್‌ಪಿ ಪಕ್ಷ ಬಿರುಸಿನ ಪ್ರಚಾರ

ಚಾಮರಾಜನಗರ, ಮೇ 4– ಚಾಮರಾಜನಗರದಲ್ಲಿ ಕಾಂಗ್ರೆಸ್, ಬಿಜೆಪಿ, ಜೆಡಿಎಸ್, ಬಿಎಸ್‌ಪಿ ಮತ್ತು ವಾಟಾಳ್ ಪಕ್ಷದ ಪರವಾಗಿ ಅಭ್ಯರ್ಥಿಗಳು ಮತ್ತು ಅವರ ಬೆಂಬಲಿಗರು ಬಿರುಸಿನ ಚುನಾವಣಾ ಪ್ರಚಾರ ನಡೆಸಿ, ಮತದಾರರ ಗಮನ ಸೆಳೆದರು.

ಕಾಂಗ್ರೆಸ್ ಅಭ್ಯರ್ಥಿ ಪುಟ್ಟರಂಗಶೆಟ್ಟಿ ಬಿರುಸಿನ ಮತಯಾಚನೆ



ಚಾಮರಾಜನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಕಾಂಗ್ರೆಸ್ ಅಭ್ಯರ್ಥಿ ಶಾಸಕ ಸಿ.ಪುಟ್ಟರಂಗಶೆಟ್ಟಿ ಅವರು ಇಂದು ಹೆಬ್ಬಸೂರು, ಹರಳೀಪುರ ಸೇರಿದಂತೆ ವಿವಿಧ ಗ್ರಾಮಗಳಲ್ಲಿ ವ್ಯಾಪ್ತಿಯಲ್ಲಿ ಕಾರ್ಯಕರ್ತರು ಹಾಗೂ ಮುಖಂಡರೊಂದಿಗೆ ಮನೆ ಮನೆಗೆ ತೆರಳಿ ಬಿರುಸಿನ ಮತಯಾಚನೆ ಮಾಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ತಮ್ಮ ಶಾಸಕತ್ವದ ಅವಧಿಯಲ್ಲಿ ಕ್ಷೇತ್ರ ವ್ಯಾಪ್ತಿಯಲ್ಲಿ ಕೈಗೊಂಡ ಅಭಿವೃದ್ಧಿ ಕೆಲಸಗಳು, ಸಿಎಂ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ರಾಜ್ಯದಲ್ಲಿ ಜನಪರ ಆಡಳಿತ ನೀಡಿ ಹಿಂದೆಂದೂ ಮಾಡದ ಅಭಿವೃದ್ಧಿ ಕೆಲಸಗಳು ಕಾಂಗ್ರೆಸ್ ಸರ್ಕಾರದಿಂದ ಆಗಿದ್ದು, ನೀಡಿದ ಹೆಚ್ಚು ಭರವಸೆ ಈಡೇರಿಸಿ ಜನರ ಕಲ್ಯಾಣದ ಗುರಿ ಸಾಧಿಸಿದೆ. ಕೈಗೊಂಡ ಅಭಿವೃದ್ಧಿ ಕೆಲಸಗಳನ್ನು ಮುಂದಿಟ್ಟುಕೊಂಡು ಇಂದು ಮತಯಾಚಿಸುತ್ತಿದ್ದು, ಜಿಲ್ಲೆಯ ಅಭಿವೃದ್ಧಿಗೆ ಸಾಕಷ್ಟು ಅನುದಾನ ತಂದು ಇಂದು ಕ್ಷೇತ್ರದ ಸರ್ವತೋಮುಖ ಅಭಿವೃದ್ಧಿ ಮಾಡಿದ್ದೇನೆ ಎಂದರು.

ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಚಿಕ್ಕಮಹದೇವ್, ಆರ್. ಮಹದೇವ್, ತಾಲೂಕು ಪ್ರಚಾರ ಸಮಿತಿ ಅಧ್ಯಕ್ಷ ಆಲೂರು ಪ್ರದೀಪ್, ಹೆಬ್ಬಸೂರು ರಂಗಸ್ವಾಮಿ, ವೀರಭದ್ರಸ್ವಾಮಿ, ಉಮೇಶ್, ಕನಿಷ್ಠ ವೇತನ ನಿಗಮದ ಮಾಜಿ ಅಧ್ಯಕ್ಷ ಆರ್. ಉಮೇಶ್, ರಾಜಶೇಖರ್, ತಾಪಂ ಮಾಜಿ ಸದಸ್ಯ ಕಾಗಲವಾಡಿ ಶಿವಸ್ವಾಮಿ, ಕಾಗಲವಾಡಿ ಚಂದ್ರು, ಕೆಪಿಸಿಸಿ ಸದಸ್ಯ ಸೈಯದ್‌ರಫಿ, ಸ್ವಾಮಿ, ಸಂಘದ ಅಧ್ಯಕ್ಷ ಅರಕಲವಾಡಿ ಸೋಮನಾಯಕ್, ಪಕ್ಷದ ಕಾರ್ಯಕರ್ತರು ಮುಖಂಡರು ಹೆಚ್ಚಿನ ಸಂಖ್ಯೆಯಲ್ಲಿ ಇದ್ದರು.

ಸೋಮಣ್ಣ ಪರ ದಲಿತ ನಾಯಕರ ಬಿರುಸಿನ ಪ್ರಚಾರ



ಚಾಮರಾಜನಗರ, ಮೇ 4– ಬಿಜೆಪಿ ಅಭ್ಯರ್ಥಿ ವಿ. ಸೋಮಣ್ಣ ಅವರ ಪರವಾಗಿ ಕ್ಷೇತ್ರಾದ್ಯಂತ ಬಿಜೆಪಿ ದಲಿತ ಮುಖಂಡರು ಬಿರುಸಿನ ಪ್ರಚಾರ ನಡೆಸಿದರು.

ರಾಷ್ಟ್ರೀಯ ಬಿಜೆಪಿ ದಲಿತ ಮೋರ್ಚಾದ ಪ್ರಧಾನ ಕಾರ್ಯದರ್ಶಿ ಚಿನ್ನರಾಮು, ಜಿಪಂ ಮಾಜಿ ಅಧ್ಯಕ್ಷ ಎಸ್. ಮಹದೇವಯ್ಯ, ವೆಂಕಟರಮಣ ಸ್ವಾಮಿ (ಪಾಪು), ಬಿಜೆಪಿ ರೈತ ಮುಖಂಡ ಮಲ್ಲೇಶ್, ಆಲೂರು ಬಾಬು, ನಟರಾಜು ಸೇರಿದಂತೆ ಹಲವರು ಮತಯಾಚಿಸಿದರು.

ತಾಲೂಕಿನ ಹಡರಕಳ್ಳಿ, ಮಾದಾಪುರ, ದೊಡ್ಡರಾಯಪೇಟೆ, ವಂಡರಬಾಳು, ನಾಗವಳ್ಳಿ, ನಲ್ಲೂರು ದಲಿತ ಜನಾಂಗದ ಬೀದಿಗಳಿಗೆ ತೆರಳಿ ಸಚಿವ ಸೋಮಣ್ಣನವರ ಪರ ಕಮಲದ ಗುರುತಿಗೆ ಮತಯಾಚಿಸಿದರು.

ದಲಿತ ಜನಾಂಗದವರನ್ನು ಭೇಟಿಯಾದ ದಲಿತ ನಾಯಕರು ಕಾಂಗ್ರೆಸ್ ಪಕ್ಷ ಡಾ. ಬಿ.ಆರ್. ಅಂಬೇಡ್ಕರ್ ಅವರನ್ನು ಬಹಳ ಕೆಟ್ಟದಾಗಿ ನಡೆಸಿಕೊಂಡ ಪಕ್ಷ. ಅಂಬೇಡ್ಕರ್ ಅವರ ಸಾವಿನಲ್ಲೂ ಕಾಂಗ್ರೆಸಿಗರು ಗೌರವ ತೋರಲಿಲ್ಲ. ಅಂಬೇಡ್ಕರ್ ಅವರನ್ನು ಚುನಾವಣೆಯಲ್ಲಿ ಸೋಲಿಸಿ ಅಟ್ಟಹಾಸ ತೋರಿದರು. ಈಗಲೂ ದಲಿತರ ಬಗ್ಗೆ ಕೆಟ್ಟ ಅಭಿಪ್ರಾಯ ಕಾಂಗ್ರೆಸ್ಸಿನಲ್ಲಿದೆ. ಈ ಕಾರಣಕ್ಕಾಗಿಯೇ ಕಳೆದ ಬಾರಿ ಡಾ.ಜಿ. ಪರಮೇಶ್ವರ್ ಅವರನ್ನು ಹೀನಾಯವಾಗಿ ಸೋಲಿಸಲು ಸಂಚು ಮಾಡಿದ್ದರು. ಹಾಗೆಯೇ ಖರ್ಗೆ, ಕೋಲಾರದ ಮುನಿಯಪ್ಪ ಮುಂತಾದ ದಿಗ್ಗಜರನ್ನು ಸೋಲಿಸಿ ಖುಷಿಪಟ್ಟಿದ್ದರು. ಈ ಕಾರಣಕ್ಕಾಗಿ ಈ ಬಾರಿ ವರುಣಾ ಕ್ಷೇತ್ರದಲ್ಲಿ ಸಿದ್ದರಾಮಯ್ಯ ಅವರನ್ನು ಸೋಲಿಸಲೇಬೇಕು ಹಾಗೂ ಚಾಮರಾಜನಗರದಲ್ಲಿ ಪುಟ್ಟರಂಗಶೆಟ್ಟಿಯನ್ನು ಸೋಲಿಸುವುದರ ಮೂಲಕ ಕಾಂಗ್ರೆಸ್ ವಿರುದ್ಧ ದಲಿತರು ಸೇಡು ತೀರಿಸಿಕೊಳ್ಳಬೇಕು ಎಂದು ದಲಿತ ಜನಾಂಗದವರಿಗೆ ಮನವರಿಕೆ ಮಾಡಿಕೊಟ್ಟರು.

ಅಂಬೇಡ್ಕರ್ ಅವರ ಆಸೆ ಕೈಗೂಡಬೇಕಾದಲ್ಲಿ ದಲಿತರು ಸೋಮಣ್ಣನವರನ್ನು ಗೆಲ್ಲಿಸುವುದರ ಮೂಲಕ ಒಂದು ಹೊಸ ಅಧ್ಯಾಯ ಬರೆಯಬೇಕೆಂದು ದಲಿತರಲ್ಲಿ ಮನವಿ ಮಾಡಿಕೊಂಡರು.

ಜೆಡಿಎಸ್ ಅಭ್ಯರ್ಥಿ ಪರ ಬೆಂಬಲಿಗರು ಬಿರುಸಿನ ಪ್ರಚಾರ



ಚಾಮರಾಜನಗರ, ಮೇ 4– ಚಾಮರಾಜನಗರ ವಿಧಾನಸಭಾ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಎ.ಎಂ.ಮಲ್ಲಿಕಾರ್ಜುನ ಸ್ವಾಮಿ (ಆಲೂರು ಮಲ್ಲು) ಪರ ಬೆಂಬಲಿಗರು ನಗರದ ನಾನಾ ಕಡೆಗಳಲ್ಲಿ ಬಿರುಸಿನ ಮತಯಾಚನೆ ನಡೆಸಿದರು.

ಚಾಮರಾಜನಗರ ವಿಧಾನಸಭಾ ಕ್ಷೇತ್ರದ ಪಟ್ಟಣದ ಗಾಳೀಪುರ, ವರದರಾಜುಪುರ, ಸಿದ್ಧಾರ್ಥ ಬಡಾವಣೆ, ಎ.ಪಿ. ಮೊಹಲ್ಲಾ ಇತರೆ ಬಡಾವಣೆಗಳಲ್ಲಿ ಬೆಂಬಲಿಗರು ಮನೆ–ಮನೆಗೆ ತೆರಳಿ ಮತಯಾಚಿಸಿದರು.

ಜೆಡಿಎಸ್ ರಾಜ್ಯ ಕಾರ್ಯದರ್ಶಿ ಹೊಂಗನೂರು ರಾಜು ಮಾತನಾಡಿ, ಚಾಮರಾಜನಗರ ವಿಧಾನಸಭಾ ಕ್ಷೇತ್ರದ ಸರ್ವ ಜನಾಂಗದ ಏಳಿಗೆಗಾಗಿ ಜೆಡಿಎಸ್ ಪಕ್ಷದ ಅಭ್ಯರ್ಥಿಯಾದ ಆಲೂರುಮಲ್ಲು ಅವರನ್ನು ಬೆಂಬಲಿಸಬೇಕು ಎಂದು ಮನವಿ ಮಾಡಿದರು. ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಅವರು ಪಂಚರತ್ನ ಯೋಜನೆಯನ್ನು ರೂಪಿಸಿದ್ದು, ಈ ಯೋಜನೆ ಜಾರಿಯಾಗಬೇಕಾದರೆ ಕುಮಾರಣ್ಣ ಮುಖ್ಯಮಂತ್ರಿಯಾಗಬೇಕು. ಹಾಗಾಗಿ ಮೇ 10 ರಂದು ನಡೆಯುವ ವಿಧಾನ ಸಭಾ ಚುನಾವಣೆಯಲ್ಲಿ ಜೆಡಿಎಸ್‌ಗೆ ಮತ ಹಾಕುವ ಮೂಲಕ ಪಕ್ಷದ ಅಭ್ಯರ್ಥಿ ಆಲೂರು ಮಲ್ಲು ಅವರನ್ನು ಆಯ್ಕೆ ಮಾಡಿ ಕುಮಾರಣ್ಣ ಮತ್ತೆ ರಾಜ್ಯದ ಮುಖ್ಯಮಂತ್ರಿಯನ್ನಾಗಿ ಮಾಡಲು ಸಹಕರಿಸಬೇಕು ಎಂದರು. ಈ ಸಂದರ್ಭದಲ್ಲಿ ಜೆಡಿಎಸ್ ಜಿಲ್ಲಾ ಸಂಘಟನಾ ಕಾರ್ಯದರ್ಶಿ ಇಂದ್ರೇಶ್, ತಾಲೂಕು ಎಸ್‌ಟಿ ಘಟಕದ ಅಧ್ಯಕ್ಷ ಹರದನಹಳ್ಳಿ ರಾಮ ಚಂದ್ರ, ಚಂದ್ರ, ಮಹೇಶ್, ರಂಗರಾಜ್, ಚೆಲುವರಾಜ್ ಇತರರು ಹಾಜರಿದ್ದರು.

ಓಟು ಉಳ್ಳವರು ಗೆಲ್ಲಬೇಕು, ನೋಟು ಉಳ್ಳವರು ಸೋಲಬೇಕು

ಬಿಎಸ್‌ಪಿ ಅಭ್ಯರ್ಥಿ ಹ.ರಾ. ಮಹೇಶ್ ಪರ ಮತ ಪ್ರಚಾರ



ಚಾಮರಾಜನಗರ, ಮೇ 4– ದೇಶದಲ್ಲಿ ಪ್ರಜಾಪ್ರಭುತ್ವ ಹಾಗೂ ಸಂವಿಧಾನ ರಕ್ಷಣೆಗಾಗಿ ಬಹುಜನ ಸಮಾಜ ಪಕ್ಷ ಬೆಂಬಲಿಸಿ ಎಂದು ಮೈಸೂರಿನ ಉರಿಲಿಂಗಪೆದ್ದಿ ಮಠದ ಪೀಠಾಧ್ಯಕ್ಷ ಶ್ರೀಜ್ಞಾನಪ್ರಕಾಶ ಸ್ವಾಮೀಜಿ ಕರೆ ನೀಡಿದರು.

ನಗರದ ಗಾಳೀಪುರ ಬಡಾವಣೆಯಲ್ಲಿ ಗುರುವಾರ ಆಯೋಜಿಸಿದ್ದ ಬಹುಜನ ಸಮಾಜ ಪಕ್ಷದ ಚುನಾವಣಾ ಪ್ರಚಾರದಲ್ಲಿ ಭಾಗವಹಿಸಿ ಮಾತನಾಡಿದ ಅವರು, ರಾಜ್ಯದಲ್ಲಿ ಯಾವುದೇ ದಲಿತರ ಸಮುದಾಯದ ಸಮಸ್ಯೆ ಬಂದಾಗ, ಹೋರಾಟಗಳಲ್ಲಿ ಹ.ರಾ.ಮಹೇಶ್ ಮುಂಚೂಣಿಯಲ್ಲಿ ನಿಲ್ಲುತ್ತಾರೆ. ಪ್ರಜಾಪ್ರಭುತ್ವದ ಮೌಲ್ಯವನ್ನು ಉಸಿರಾಗಿಸಿಕೊಂಡು ಬಹುಜನ ಚಳುವಳಿಗಾಗಿ ದುಡಿಯುತ್ತಿದ್ದಾರೆ. ದೇಶದಲ್ಲಿ ಪ್ರಜಾಪ್ರಭುತ್ವ ಉಳಿವಿಗಾಗಿ, ಸಂವಿಧಾನ ರಕ್ಷಣೆಗಾಗಿ ಹ.ರಾ.ಮಹೇಶ್ ಅಂತವರು ವಿಧಾನಸೌಧ ಪ್ರವೇಶಿಸಬೇಕು ಎಂದು ತಿಳಿಸಿದರು.

ಬಹುಜನ ಸಮಾಜ ಪಕ್ಷ ಹಾಗೂ ಎಸ್‌ಡಿಪಿಐ ಎರಡು ಪಕ್ಷಗಳು ಸಂವಿಧಾನದ ಆಶಯದ ಮೇಲೆ ಸ್ಥಾಪಿತವಾಗಿದೆ. 'ಓಟು ಉಳ್ಳವರು ಗೆಲ್ಲಬೇಕು, ನೋಟು ಉಳ್ಳವರು ಸೋಲಬೇಕು'ಎಂಬುದೇ ಪ್ರಜಾಪ್ರಭುತ್ವದ ಆಶಯವಾಗಿದೆ. ಓಟು ಉಳ್ಳವರಾದ ಎಸ್ಸಿ ಎಸ್ಟಿ ಓಬಿಸಿ ಸಮುದಾಯದ ಪ್ರಜ್ಞಾವಂತ ಜನರು ವಿಧಾನಸಭೆಗೆ ಆಯ್ಕೆಯಾಗಬೇಕು. ನೋಟು ಉಳ್ಳವರು ಗೆದ್ದರೆ ಈ ದೇಶದ ಸಂವಿಧಾನಕ್ಕೆ ಕುತ್ತು ಉಂಟುಮಾಡುತ್ತಾರೆ ಎಂದು ಎಚ್ಚರಿಸಿದರು.

ಈ ಸಂದರ್ಭದಲ್ಲಿ ಸವಿತಾ ಸಮಾಜದ ಸವಿತಾನಂದ ಶ್ರೀ, ಬಿಎಸ್ಪಿ ಜಿಲ್ಲಾಧ್ಯಕ್ಷ ಎನ್.ನಾಗಯ್ಯ, ಅಭ್ಯರ್ಥಿ ಹ.ರಾ.ಮಹೇಶ್, ಎಸ್ಡಿಪಿಐ ಜಿಲ್ಲಾಧ್ಯಕ್ಷ ಅಬ್ರಾರ್ ಅಹ್ಮದ್, ದೇವನೂರು ಪಟ್ಟನಂಜಯ್ಯ, ಮಹೇಶ್ ಗಾಳೀಪುರ, ಬಾ.ಮ.ಕೃಷ್ಣಮೂರ್ತಿ, ಬಾಬು ರಾಮಸಮುದ್ರ ಇತರರಿದ್ದರು.

ವೈಭವದ ಬಿಳಿಗಿರಿರಂಗನಬೆಟ್ಟದ ಮಹಾರಥೋತ್ಸವ

ಸಾವಿರಾರು ಭಕ್ತರು ಭಾಗಿ, ಮೊಳಗಿದ ಉಘೇ ರಂಗಪ್ಪ.... ಘೋಷಣೆ



ಯಳಂದೂರು, ಮೇ 4– ತಾಲೂಕಿನ ಬಿಳಿಗಿರಿರಂಗನಬೆಟ್ಟದಲ್ಲಿ ಬಿಳಿಗಿರಿರಂಗನಾಥಸ್ವಾಮಿ ಮಹಾ ರಥೋತ್ಸವ (ದೊಡ್ಡ ಜಾತ್ರೆ) ಸಾವಿರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ಜರುಗಿತು.

ರಥೋತ್ಸವ ಹಿನ್ನೆಲೆಯಲ್ಲಿ ಏ.27 ರಿಂದಲೇ ದೇವಸ್ಥಾನದಲ್ಲಿ ವಿವಿಧ ಧಾರ್ಮಿಕ ವಿಧಿ ವಿಧಾನಗಳು ನಡೆದವು. ರಥೋತ್ಸವದ ಪ್ರಯುಕ್ತ ಬೆಳಗ್ಗೆ 5 ಗಂಟೆಗೆ ಕಲ್ಯಾಣೋತ್ಸವ, 7 ಗಂಟೆಗೆ ಪಸ್ಥಾನ ಮಂಟಪೋತ್ಸವಗಳು ಜರುಗಿತು. ಮಧ್ಯಾಹ್ನ 12.10 ರಿಂದ 12.24 ಗಂಟೆಯೊಳಗೆ ಸಲ್ಲುವ ಶುಭ ಕರ್ಕಾಟಕ ಲಗ್ನದ ಧನುರ್ಗುರು ನಾವಾಂಶ ಶುಭ ಮುಹೂರ್ತದಲ್ಲಿ ಡೋಲಾಯ ಮಾನಂ ಗೋವಿಂದಂ, ಮಂಚಸ್ಥಂ ಮಧುಸೂದನಂರಥಸ್ಥಂ ಕೇಶವಂ ದೃಷ್ಟ್ವಾ ಪುನರ್ಜನ್ಮ ನವಿದ್ಯತೆ ಎಂಬ ಮರ್ಯಾದೆಯಲ್ಲಿ ರಥಾರೋಹಣ ನಂತರ ಮಹಾರಥೋತ್ಸವ ಜರುಗಿತು.

ರಥಕ್ಕೆ ಚಾಲನೆ ಕೊಡುತ್ತಿದ್ದಂತೆ ಉಘೇ.. ಉಘೇ ರಂಗಪ್ಪ ಎಂಬ ಹರ್ಷೋದ್ಗಾರ ಮೊಳಗಿತು. ವಿವಿಧ ಪುಷ್ಪಗಳಿಂದ ಅಲಂಕರಿಸಿದ್ದ ರಥವನ್ನು ಸಾವಿರಾರು ಭಕ್ತರು ಎಳೆಯುವ ಮೂಲಕ ಭಕ್ತಿ ಮೆರೆದರು.

ದ್ವಿಚಕ್ರ ವಾಹನಗಳ ನಿಷೇಧ : ಮಹಾರಥೋತ್ಸವ ಹಿನ್ನೆಲೆಯಲ್ಲಿ ಟ್ರಾಫಿಕ್ ಜಾಮ್ ತಪ್ಪಿಸುವ ನಿಟ್ಟಿನಲ್ಲಿ ಬೆಟ್ಟದ ತಪ್ಪಲಿನ ಚೆಕ್‌ಪೋಸ್ಟ್‌ನಿಂದ ದ್ವಿಚಕ್ರ ವಾಹನಗಳ ಸಂಚಾರ ನಿಷೇಧಿಸಲಾಗಿತ್ತು. ಬೇರೆ ಊರುಗಳಿಂದ ಬೈಕ್‌ಗಳ ಮೂಲಕ ಆಗಮಿಸಿದ ಭಕ್ತರು ಚೆಕ್‌ಪೋಸ್ಟ್ ಬಳಿ ಬೈಕ್ ನಿಲ್ಲಿಸಿ ಅಲ್ಲಿಂದ ಸಾರಿಗೆ ಬಸ್‌ಗಳ ಮೂಲಕ ತೆರಳಿದರು. ಅಲ್ಲದೇ ಕಾರುಗಳ ಮೂಲಕ ಬೆಟ್ಟಕ್ಕೆ ಆಗಮಿಸಿದ ಭಕ್ತರು ತಮ್ಮ ಕಾರುಗಳನ್ನು ಮಾರಮ್ಮ ದೇವಸ್ಥಾನ ಆವರಣದಲ್ಲಿ ನಿಲ್ಲಿಸಿ ಅಲ್ಲಿಂದ ಬಸ್‌ಗಳ ಮೂಲಕ ಬೆಟ್ಟಕ್ಕೆ ತೆರಳಿದರು.

ಭಕ್ತರಿಗೆ ಬಸ್ ವ್ಯವಸ್ಥೆ : ಜಾತ್ರೆಗೆ ತೆರಳುವ ಭಕ್ತರಿಗೆ ಬಸ್ ವ್ಯವಸ್ಥೆ ಮಾಡಲಾಗಿತ್ತು. ಪಟ್ಟಣದಿಂದ ಬೆಟ್ಟಕ್ಕೆ 80 ಕ್ಕೂ ಹೆಚ್ಚು ಸಾರಿಗೆ ಬಸ್ ವ್ಯವಸ್ಥೆ ಮಾಡಲಾಗಿತ್ತು ಅಲ್ಲದೇ ಚಾಮರಾಜನಗರ, ಕೊಳ್ಳೇಗಾಲ, ಗುಂಡ್ಲುಪೇಟೆಯಿಂದ ಸಾರಿಗೆ ಬಸ್ ವ್ಯವಸ್ಥೆ ಕಲ್ಪಿಸಲಾಗಿತ್ತು. ಅಲ್ಲದೇ ಬೆಟ್ಟದಲ್ಲಿ ಭಕ್ತರಿಗೆ ಕುಡಿಯುವ ನೀರಿನ ಸೌಲಭ್ಯವನ್ನು ಕಲ್ಪಿಸಲಾಗಿದ್ದು ಟ್ಯಾಂಕ್‌ಗಳ ಮೂಲಕ ಕುಡಿಯುವ ನೀರು ಒದಗಿಸಲಾಗಿತ್ತು.

ಸೋಲಿಗರ ಸಂಭ್ರಮ: ದೊಡ್ಡಜಾತ್ರೆ ಹಿನ್ನೆಲೆಯಲ್ಲಿ ಬಿಳಿಗಿರಿರಂಗನಬೆಟ್ಟದ ವಿವಿಧ ಪೋಡುಗಳಿಂದ ಸೋಲಿಗರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ರಥೋತ್ಸವವನ್ನು ಕಣ್ತುಂಬಿಕೊಂಡರು. ಬಿಳಿಗಿರಿರಂಗನಬೆಟ್ಟದ ಪುರಾಣಿಪೋಡು, ಮಂಜಿಗುಡ್ಡೆ, ಬಂಗ್ಲೆಪೋಡು, ಗೊಂಬೆಗಲ್ಲು, ದೊಡ್ಡಸಂಪಿಗೆ ಇತರೆ ಹಾಡಿಯ ಸೋಲಿಗರು ರಂಗಪ್ಪನ ತೇರು ನೋಡಲು ಪರಿವಾರ ಸಮೇತ ಕಾಲುದಾರಿಯಲ್ಲಿ ನಡೆದುಕೊಂಡು ಬರುತ್ತಿದ್ದ ದೃಶ್ಯ ಸಾಮಾನ್ಯವಾಗಿತ್ತು. ತೇರಿಗೆ ನವ ವಿವಾಹಿತರು ಹಣ್ಣು, ಧವನ ಅರ್ಪಿಸಿ ಇಷ್ಟಾರ್ಥ ಸಿದ್ಧಿಗೆ ಪ್ರಾರ್ಥಿಸಿದರು. ರೈತರು ಬೆಳೆದ ರಾಗಿ, ಭತ್ತ, ಜೋಳ, ಕಬ್ಬು, ಅವರೆ,ಅಲಸಂದೆ, ಹುರಳಿ, ಹೆಸರು, ನವಣೆ ಇತರೆ ಧಾನ್ಯಗಳನ್ನು ರಥಕ್ಕೆ ಸಲ್ಲಿಸಿ ಹರಕೆ ಪೂರೈಸಿದರು.

ಮೂರನೇ ಪುಟದಿಂದ

ಪ್ರಚಾರಕ್ಕೆ ತಾರಾ ಮೆರಗು

ಮುಖಂಡರು ಅದ್ಧೂರಿಯಾಗಿ ಸ್ವಾಗತ ಕೋರಿ, ಪುಷ್ಪವೃಷ್ಟಿಗೈಯ್ದು ಬರಮಾಡಿಕೊಂಡರು. ತೆರೆದ ವಾಹನದಲ್ಲಿ ಮೆರವಣಿಗೆಯಲ್ಲಿ ಸಿದ್ದರಾಮಯ್ಯ ಅವರನ್ನು ಕರೆದೊಯ್ದು ಜೈಕಾರ ಹಾಕಿದರು. ರಾಂಪುರದಲ್ಲಿ ಪ್ರಚಾರ ಮುಗಿಸಿ ಕೆಂಬಾಲು, ಬಿದರಗೂಡು ಬಂದ ಸಿದ್ದರಾಮಯ್ಯ ಅವರಿಗೆ ಅಭೂತಪೂರ್ವ ಸ್ವಾಗತ ದೊರೆಯಿತು. ಸಿದ್ದರಾಮಯ್ಯ ಅವರ ಭಾವಚಿತ್ರವುಳ್ಳ ಹಳದಿ ಬಣ್ಣದ ಭಾವುಟ ಹಿಡಿದುಕೊಂಡು ಮೆರವಣಿಗೆಯಲ್ಲಿ ಸಾಗಿದ ಅಭಿಮಾನಿಗಳು ಹಾಗೂ ಗ್ರಾಮಸ್ಥರು ಸಿದ್ದರಾಮಯ್ಯ ಪರ ಜಯಘೋಷ ಕೂಗುತ್ತಾ ಸಾಗಿದರು. ರೋಡ್ ಶೋ ಉದ್ದಕ್ಕೂ ಹೂಮಳೆ ಸುರಿಸಿ, ಅಭಿಮಾನ ಮೆರೆದರು.

ಹ್ಯಾಟ್ರಿಕ್ ಹೀರೋ ಸಾಥ್: ಬಿದರಗೂಡಿನಿಂದ ಮರಳೂರಿಗೆ ಆಗಮಿಸುತ್ತಿದ್ದಂತೆ ರಸ್ತೆಯುದ್ದಕ್ಕೂ ಕಾಯುತ್ತಾ ನಿಂತಿದ್ದ ಗ್ರಾಮಸ್ಥರು ಸಂಭ್ರಮದಿಂದ ಬರಮಾಡಿಕೊಂಡರು. ಇದೇ ವೇಳೆ ಹ್ಯಾಟ್ರಿಕ್ ಹೀರೋ ಶಿವರಾಜ್‌ಕುಮಾರ್ ಅವರು ಸಿದ್ದರಾಮಯ್ಯರಿಗೆ ಸಾಥ್ ನೀಡಿದರು. ಆದರೆ ಜನಜಂಗುಳಿಯಿಂದಾಗಿ ಗೀತಾ ಶಿವರಾಜ್‌ಕುಮಾರ್ ಮಾತ್ರ ಸಿದ್ದರಾಮಯ್ಯ ಅವರ ಜೊತೆ ಪ್ರಚಾರದಲ್ಲಿ ತೊಡಗಿಸಿಕೊಳ್ಳಲು ಆಗಲಿಲ್ಲ. ಈ ವೇಳೆ ಮರಳೂರಲ್ಲಿ ದೊಡ್ಡ ಗಾತ್ರದ ಪೈನಾಪಲ್ ಹಾರವನ್ನು ಕ್ರೇನ್ ಮೂಲಕ ಸಿದ್ದರಾಮಯ್ಯ ಹಾಗೂ ಶಿವರಾಜ್‌ಕುಮಾರ್ ಜೋಡಿಗೆ ಗ್ರಾಮಸ್ಥರು ಹಾಕಿ ಸಂಭ್ರಮಿಸಿದರು.

ಟೆಂಪೋ ಹತ್ತಿ ಪ್ರಚಾರ: ಪ್ರಚಾರಕ್ಕಾಗಿ ಸಿದ್ಧಪಡಿಸಿದ್ದ ತೆರೆದ ಚಿಕ್ಕ ವಾಹನದಲ್ಲಿ ರೋಡ್ ಶೋ ನಡೆಸುತ್ತಿದ್ದ ಸಿದ್ದರಾಮಯ್ಯ ಅವರಿಗೆ ಮುಖಂಡರು ಹಾಗೂ ಕಾರ್ಯಕರ್ತರ ಬಯಕೆಯಿಂದಾಗಿ ಮರಳೂರಿನ ನಂತರ ದೊಡ್ಡ ಟೆಂಪೋಗೆ ಹತ್ತಿ ರೋಡ್ ಶೋ ಆರಂಭಿಸಿದರು. ಇದರಿಂದ ಎಲ್ಲಾ ಮುಖಂಡರಿಗೂ ಸ್ಥಳಾವಕಾಶ ದೊರೆಯಿತು.

ಮೋಹಕ ತಾರೆ ರಂಗಪ್ರವೇಶ: ಸ್ಯಾಂಡಲ್‌ವುಡ್ ಮೋಹಕ ತಾರೆ ರಮ್ಯಾ, ಮಾಜಿ ಸಿಎಂ ಸಿದ್ದರಾಮಯ್ಯ ಪರ ಪ್ರಚಾರದಲ್ಲಿ ಪಾಲ್ಗೊಂಡರು. ಹಳ್ಳಿದಿಡ್ಡಿ, ಹಳ್ಳಿಕೆರೆಹುಂಡಿ, ತಾಂಡವಪುರ, ಬಸವನಪುರ ಸಿದ್ದರಾಮಯ್ಯ ಬಿರುಸಿನ ಪ್ರಚಾರ ನಡೆಸಿ ಬೆಂಬಲ ಯಾಚಿಸಿ ಕೆಂಪಿಸಿದ್ದನಹುಂಡಿಗೆ ಆಗಮಿಸುತ್ತಿದ್ದಂತೆ ನಟಿ, ಮಾಜಿ ಸಂಸದೆ ರಮ್ಯಾ ಸಿದ್ದರಾಮಯ್ಯ ಜತೆ ರೋಡ್ ಶೋದಲ್ಲಿ ಸೇರಿಕೊಂಡರು. ತೆರೆದ ವಾಹನದಲ್ಲಿ ಸಿದ್ದರಾಮಯ್ಯ ಅವರ ಪಕ್ಕದಲ್ಲಿಯೇ ನಿಂತುಕೊಂಡು ಜನರತ್ತ ಕೈಬೀಸಿದ ರಮ್ಯಾ ಗಮನ ಸೆಳೆದರು.

ರಾರಾಜಿಸಿದ ಅಪ್ಪು ಭಾವಚಿತ್ರವುಳ್ಳ ಬಾವುಟ: ಕೆಂಪಿಸಿದ್ದನಹುಂಡಿಗೆ ರೋಡ್ ಶೋ ಎಂಟ್ರಿಯಾಗುತ್ತಿದ್ದಂತೆಯೇ ದಿ.ಪುನೀತ್‌ರಾಜ್‌ಕುಮಾರ್ ಭಾವಚಿತ್ರವುಳ್ಳ ಧ್ವಜ ರಾರಾಜಿಸತೊಡಗಿದವು. ಪುನೀತ್‌ರಾಜ್‌ಕುಮಾರ್ ಮೇಲಿನ ಅಭಿಮಾನ ಕಂಡು ಸಿದ್ದರಾಮಯ್ಯ, ಶಿವರಾಜ್‌ಕುಮಾರ್, ಗೀತಾ ಶಿವರಾಜ್‌ಕುಮಾರ್, ರಮ್ಯಾ ಸೇರಿದಂತೆ ಪ್ರಚಾರದ ವಾಹನ ಮೇಲಿದ್ದವರು ಮೂಕವಿಸ್ಮಿತರಾದರು.

ಕಿಕ್ಕಿರಿದ ಜನಂಗುಳಿ: ಕೆಂಪಿಸಿದ್ದನಹುಂಡಿಯಲ್ಲಿ ಪ್ರಚಾರ ನಡೆಸಿದ ಬಳಿಕ ಹದಿನಾರು, ಹುಳಿಮಾವು ಸೇರಿದಂತೆ ಇನ್ನಿತರ ಗ್ರಾಮಗಳಲ್ಲೂ ಸಿದ್ದರಾಮಯ್ಯ ಪ್ರಚಾರ ನಡೆಸಿದರು. ಬೆಳಗ್ಗಿನಿಂದ ಸಂಜೆವರೆಗೂ ಸಿದ್ದರಾಮಯ್ಯ ನಡೆಸಿದ ರೋಡ್ ಶೋಗೆ ನಿರೀಕ್ಷೆ ಮೀರಿದ ಪ್ರತಿಕ್ರಿಯೆ ವ್ಯಕ್ತವಾಯಿತು. ಗ್ರಾಮಗಳ ರಸ್ತೆಗಳ ಬದಿ, ಕಟ್ಟಡಗಳ ಮೇಲೆ ಸಿದ್ದರಾಮಯ್ಯ ಅವರನ್ನು ನೋಡಲು ಜನ ಮುಗಿಬಿದ್ದರು. ಮಹಿಳೆಯರು, ಮಕ್ಕಳು ರೋಡ್ ಶೋನಲ್ಲಿ ಪಾಲ್ಗೊಂಡರು. ಮನೆಯ ಹೊರಭಾಗದಲ್ಲಿ ನಿಂತುಕೊಂಡೇ ಸಾಕಷ್ಟು ಮಂದಿ ಸಿದ್ದರಾಮಯ್ಯ ಹಾಗೂ ನಟ-ನಟಿಯರನ್ನು ನೋಡಿ ಸಂಭ್ರಮಿಸಿದರು.

ಸಾಲು ಸಾಲು ವಾಹನ: ಸಿದ್ದರಾಮಯ್ಯ ಅವರ ಪ್ರಚಾರದ ಯಾತ್ರೆಗೆ ವಿವಿಧ ಸಮುದಾಯಗಳ ಮುಖಂಡರು ಸಾಥ್ ನೀಡಿದರು. ಸಿದ್ದರಾಮಯ್ಯ ಅವರ ಕಾರು ಮುಂದೆ ಸಾಗುತ್ತಿದ್ದರೆ, ಅವರ ವಾಹನವನ್ನು ಹಲವು ವಾಹನಗಳು ಹಿಂಬಾಲಿಸಿದವು. ಪ್ರತಿಯೊಂದು ಗ್ರಾಮಗಳಲ್ಲಿ ವಿವಿಧ ಜಾನಪದ ಕಲಾ ತಂಡಗಳೊಂದಿಗೆ ಸ್ವಾಗತಿಸಿದ್ದು ವಿಶೇಷವಾಗಿತ್ತು.

ಆರತಿಗೆ ಕಾಸು ಹಾಕಲು ನೀತಿ ಸಂಹಿತೆ ಅಡ್ಡಿ

ರೋಡ್ ಶೋ ಹಾಗೂ ಮತಯಾಚನೆಗಾಗಿ ಗ್ರಾಮಕ್ಕೆ ಆಗಮಿಸಿದ ಸಿದ್ದರಾಮಯ್ಯ ಅವರಿಗೆ ಮುತ್ತೈದೆಯರು ಆರತಿ ಬೆಳಗಲು ಮುಂದೆ ಬಂದರು. ಆರತಿ ಬೆಳಗಿದವರಿಗೆ ತಟ್ಟೆಗೆ ಕಾಸು ಹಾಕಲು ಚುನಾವಣಾ ನೀತಿ ಸಂಹಿತೆ ಅಡ್ಡಿಯಾಯಿತು. ವಿರೋಧಿಗಳು ನೀತಿ ಸಂಹಿತೆ ಉಲ್ಲಂಘಿಸಿದ್ದಾರೆ ಎಂದು ಆರೋಪಿಸುತ್ತಾರೆಂದು ಸಿದ್ದರಾಮಯ್ಯ ಎಚ್ಚರ ವಹಿಸಿದರು. ಇದರಿಂದ ಆರತಿ ಬೆಳಗಿದ ಮುತ್ತೈದೆಯರು ಅದನ್ನು ಅರ್ಥ ಮಾಡಿಕೊಂಡು, ದೃಷ್ಟಿ ತೆಗೆದು ಶುಭ ಹಾರೈಸಿದರು.

ಬಡವರ ಧ್ವನಿ ಸಿದ್ದರಾಮಯ್ಯ: ಶಿವರಾಜ್‌ಕುಮಾರ್

ಹಾಗಾಗಿ ಸಿದ್ದರಾಮಯ್ಯ ಅವರ ಗೆಲವು, ವರುಣ ಕ್ಷೇತ್ರದ ಜನರ ಗೆಲುವಾಗಿ ಮಾರ್ಪಾಡಾಗಬೇಕು. "ಸಿದ್ದರಾಮಯ್ಯ ಇನ್ನೊಂದು ಟಗರು" ಅವರಿಗೆ ನಿಮ್ಮೆಲ್ಲರ ಆಶೀರ್ವಾದ, ಬೆಂಬಲ ಬೇಕು, ಹೆಚ್ಚಿನ ಮತಗಳಿಂದ ಅವರನ್ನು ಗೆಲ್ಲಿಸಬೇಕು ಎಂದು ಹೇಳಿದರು.

ಅಪ್ಪಾಜಿಯವರು (ಡಾ.ರಾಜ್‌ಕುಮಾರ್) ಸಿದ್ದರಾಮಯ್ಯ ಅವರನ್ನು 'ನಮ್ಮ ಕಾಡಿನವರು' ಎಂದು ಹೇಳುತ್ತಿದ್ದರು. ಅಪ್ಪಾಜಿ ಹಾಗೂ ನಮ್ಮ ಜೊತೆಗೆ ಸಿದ್ದರಾಮಯ್ಯ ಒಡನಾಟ ಚೆನ್ನಾಗಿಯೇ ಇದೆ. ನಾವು ಅದನ್ನು ಮರೆಯುವುದಿಲ್ಲ. ಈಗಲೂ ನಮ್ಮ ಕುಟುಂಬದವರೊಂದಿಗೆ ನಮ್ಮವರು ಎಂಬ ಪ್ರೀತಿ, ವಿಶ್ವಾಸ, ಭಾವನೆಗಳಿಂದಲೇ ನೋಡುತ್ತಾರೆ. ಅವರು ಮುಖ್ಯಮಂತ್ರಿಯಾಗಿದ್ದಾಗ ಜನರಿಗೆ ಏನು ಮಾಡಿದ್ದಾರೆ ಎಂದು ನಾವು ಹೇಳಬೇಕಾಗಿಲ್ಲ, ಕಣ್ಣೆದುರಿಗೆ ಸತ್ಯ ಕಾಣುತ್ತಿದೆ ಎಂದು ಜನಸ್ತೋಮ ಕಂಡು ಬಣ್ಣಿಸಿದರು.

ಹಾಡು ಹೇಳಿ, ನಿರ್ಗಮಿಸಿದ ಶಿವರಾಜ್‌ಕುಮಾರ್: ರೋಡ್ ಶೋದಲ್ಲಿ ಸಿದ್ದರಾಮಯ್ಯ ಪರ ಪತ್ನಿ ಗೀತಾ ಶಿವರಾಜ್‌ಕುಮಾರ್ ಅವರೊಂದಿಗೆ ಮತಯಾಚಿಸಿದ ಹಿರಿಯ ನಟ ಶಿವರಾಜ್‌ಕುಮಾರ್ ರೋಡ್ ಶೋದಿಂದ ನಿರ್ಗಮಿಸುವ ವೇಳೆ ಎರಡು ಹಾಡುಗಳನ್ನು ಹಾಡಿ, ಬೆಂಬಲಿಗರನ್ನು ರಂಜಿಸಿದರು. 'ನಾನಿರುವುದೇ ನಿಮಗಾಗಿ, ನಾಡಿರುವುದು ನಮಗಾಗಿ, ಕಣ್ಣೀರೇಕೇ... ಬಿಸಿಯುಸಿರೇಕೇ, ಕಣ್ಣೀರೇಕೆ ಬಿಸಿಯುಸಿರೇಕೆ, ಬಾಳುವಿರೆಲ್ಲ ಹಾಯಾಗಿ, ಬಾಳುವಿರೆಲ್ಲ ಹಾಯಾಗಿ, ನಾನಿರುವುದೆ ನಿಮಗಾಗಿ'

'ಊರಿಂದ ಓಡಿ ಬಂದ, ಜೋಗಿ ನಾ ಅಲ್ಲಾ ರೀ.. ಓಂಯಿಂದ ಎದ್ದು ಬಂದ, ಸತ್ಯಾನು ಅಲ್ಲಾ ರೀ.. ಹಳ್ಳಿಯಾ ಸೀದಾಸಾದ ಹೈದಾ, ಮೈಲಾಪುರ ಮೈಲಾರಿ? , ಮೈಲಾಪುರ ಮೈಲಾರಿ?. ಗೀತೆ ಹಾಡುವ ಮೂಲಕ ರಂಜಿಸಿದರು.

ಸ್ಟಾರ್ ಪ್ರಚಾರಕರ ಮೊರೆ

ಅವರು ಏನಾಗಿದ್ದಾರೆ ಎಂಬುದು ಇದರಿಂದಲೇ ಗೊತ್ತಾಗುತ್ತದೆ. ನಾನು ಮೊದಲು ನೋಡಿದ ಸಿದ್ದರಾಮಯ್ಯ ಎಂದೋ ಕಳೆದು ಹೋಗಿದ್ದಾರೆ. ಅವರಿಗೆ ಒಳ್ಳೆಯದಾಗಲಿ ಎಂದರು.

ನಾನು ನಾನು ಎನ್ನಬೇಡಿ ಸಿದ್ದರಾಮಯ್ಯ ನವರೇ!: ವರುಣ ಕ್ಷೇತ್ರದ ಅಭಿವೃದ್ಧಿ ನಾನು ಮತ್ತು ನನ್ನ ಮಗನಿಂದ ಮಾತ್ರ ಸಾಧ್ಯ. ಹೊರಗಿನಿಂದ ಬಂದ ಸೋಮಣ್ಣರಿಂದ ಸಾಧ್ಯವಿಲ್ಲ ಎಂಬ ಸಿದ್ದರಾಮಯ್ಯ ಹೇಳಿಕೆಗೆ ನಗುತ್ತಲೇ ಟಾಂಗ್ ನೀಡಿದ ಸೋಮಣ್ಣ ಅವರೇಳುವುದು ನನ್ನ ಕೋಳಿ ಕೂಗಿದರೇನೇ ಬೆಳಗಾಗುತ್ತದೆ ಎಂಬ ಗಾದೆ ಮಾತಿಗೆ ಹತ್ತಿರವಾಗಿದೆ. ಅವರು ಮತ್ತು ಅವರ ಮಗ ಅಭಿವೃದ್ಧಿ ಮಾಡುವವ ರಾಗಿದ್ದರೆ, ನಿಜಲಿಂಗಪ್ಪರಿಂದ ಹಿಡಿದು ದೇವರಾಜ ಅರಸ್, ರಾಮಕೃಷ್ಣ ಹೆಗಡೆ, ಎಸ್.ಎಂ.ಕೃಷ್ಣ, ಜೆ.ಹೆಚ್.ಪಟೇಲ್, ಧರ್ಮಸಿಂಗ್ ಯಾರ ಕೈಯ್ಯಲ್ಲೂ 5 ವರ್ಷ ಆಡಳಿತ ಮಾಡಲು ಸಾಧ್ಯವಾಗಲಿಲ್ಲ. ಆದರೆ ನಿಮ್ಮ ಬಳಿ 5 ವರ್ಷ ಅಧಿಕಾರ ಇತ್ತು. ರಾಜ್ಯದ ದೊರೆಯಾಗಿದ್ದೀರಿ. ಆ ಅವಧಿಯಲ್ಲಿ ನಿಮ್ಮ ಕ್ಷೇತ್ರವನ್ನು ಸಮಗ್ರ ವಾಗಿ ಅಭಿವೃದ್ಧಿ ಮಾಡಿ, ಚಿನ್ನದ ತಗಡನ್ನೇ ಹೊದಿಸಿದ್ದರೂ ನಿಮ್ಮನ್ನು ಕೇಳುವವರಿರಲಿಲ್ಲ. ಆದರೆ ನೀವೇನು ಮಾಡಿದ್ದೀರಾ? ಸರಿಯಾದ ಆಸ್ಪತ್ರೆಗಳಿಲ್ಲ. ಪ್ರಥಮ ದರ್ಜೆ ಕಾಲೇಜುಗಳಿಲ್ಲ.

ಹಳ್ಳಿಗಳಲ್ಲಿ ಕುಡಿಯುವ ನೀರಿನ ಘಟಕಗಳಿಲ್ಲ. ಸರಿಯಾದ ಬಸ್ ವ್ಯವಸ್ಥೆ ಇಲ್ಲ. ಕ್ಷೇತ್ರದ ಜನರನ್ನು ಹೇಳೋರು-ಕೇಳೋರು ಯಾರೂ ಇಲ್ಲದಂತೆ ಮಾಡಿದ್ದೀರಿ. ನಂತರ ನಿಮ್ಮ ಮಗ ಬಂದು ಮಾಡಿದ್ದೇನು. ಏನು ಬದಲಾವಣೆಯಾಗಿದೆ. ನನ್ನಿಂದಲೇ ಎಲ್ಲಾ ಅನ್ನೋದನ್ನು ಮರೆತು ಬಿಡಿ ಸಾಹೇಬ್ರೆ, ಬಾದಾಮಿಗೆ ಹೋದ್ರಿ, ಅಲ್ಲೇಕೆ ಏನು ಮಾಡ್ಲಿಲ್ಲ, ಜನರ ಋಣ ತೀರಿಸುವುದು ಎಲ್ಲರಿಂದಲೂ ಸಾಧ್ಯವಿಲ್ಲ. ಜನರ ಓಟಿನ ಋಣದ ಗಾಂಭಿರ್ಯತೆ ಶಕ್ತಿ ಕೆಲವರಿಗೆ ಮಾತ್ರ ಗೊತ್ತಿದೆ. ಆದರೆ ಆ ಕೆಲಸವನ್ನು ಸೋಮಣ್ಣ ಮಾಡಿದ್ದಾನೆ. ನೀವು ನಾನು, ನನ್ನಿಂದಲೇ ಎಂಬುದನ್ನು ಬಿಡಿ. ನಾವು ಎನ್ನುವುದಾದರೆ ಕ್ಷೇಮ ಎಂದ ಸೋಮಣ್ಣ ನಾನೊಮ್ಮೆ ಸಿದ್ದರಾಮಯ್ಯ ಅವರಿಗೆ ನೀವು ಇನ್ನೊಬ್ಬ ದೇವರಾಜ ಅರಸ್, ಶಾಂತವೇರಿ ಗೋಪಾಲಗೌಡರಂತೆ ಆಗಿ ಎಂದಿದ್ದೆ. ಆದರೆ ಅವರು ನಾನು ನಾನು ಎನ್ನುತ್ತಲೇ ಬಂದರು. ಕೊನೆಗೆ ಅವರು ಎಲ್ಲಿ ಹೋಗುತ್ತಾರೋ ಗೊತ್ತಿಲ್ಲ. ಅವರು ಹಾಗೇ ಮಾತನಾಡಲಿ ಜನರೇ ಅವರೆಲ್ಲಿರಬೇಕೆಂದು ತೀರ್ಮಾನಿಸುತ್ತಾರೆ. ನನ್ನಿಂದಾಗಲೀ, ನನ್ನ ಕುಟುಂಬದಿಂದಾಗಲೀ ಕ್ಷೇತ್ರದ ಜನತೆ ಊಟ, ನಿದ್ದೆ ಮಾಡ್ತಾರೆ, ಎಲ್ಲ ಸವಲತ್ತುಗಳನ್ನು ಪಡೀತಾರೆ ಎಂಬುದು ತಪ್ಪು ಕಲ್ಪನೆ. ನಾವೇನಿದ್ದರೂ ಸಾರ್ವಜನಿಕರು-ಸರ್ಕಾರದ ನಡುವೆ ಸೇತುವೆಯಂತೆ ಕೆಲಸ ಮಾಡಬೇಕು ಎಂದರು.

ವರುಣದಲ್ಲೇ ಮನೆ ಮಾಡ್ತೀನಿ: ಈ ಬಾರಿ ವರುಣ ಕ್ಷೇತ್ರದ ಜನ ಆಶೀರ್ವದಿಸಿದರೆ ವರುಣದಲ್ಲೇ ಮನೆ ಮಾಡುತ್ತೇನೆ. ಕೊನೆವರೆಗೂ ಇಲ್ಲೇ ಇರ್ತೇನೆ ಎಂದ ಸೋಮಣ್ಣ, ಬೆಂಗಳೂರಿನಲ್ಲಿ ನನ್ನಂತವರು ಸಾವಿರಾರು ಜನ ಇದ್ದಾರೆ. ಈಗಾಗಲೇ ನನ್ನ ಹಾಗೂ ನನ್ನ ಶ್ರೀಮತಿಯವರ ಮತವನ್ನು ಚಾಮರಾಜನಗರಕ್ಕೆ ಬದಲಾವಣೆ ಮಾಡಿಕೊಂಡಿದ್ದೇವೆ. ಮುಂದೆ ಜನರ ಆಶಯಕ್ಕೆ ಅನುಗುಣವಾಗಿ ವರುಣಕ್ಕೆ ವರ್ಗಾಯಿಸಿಕೊಳ್ಳುತ್ತೇವೆ ಎಂದರು.

ಭರ್ಜರಿ ರೋಡ್ ಶೋ: ಇದಕ್ಕೂ ಮೊದಲು ವಿ.ಸೋಮಣ್ಣ ಅಪಾರ ಕಾರ್ಯಕರ್ತರೊಂದಿಗೆ ಕ್ಷೇತ್ರ ವ್ಯಾಪ್ತಿಯ ಇಗ್ಗಿ, ಜೋಡಿ ಹರಿಹರಪುರ, ಹಾರೋಪುರ, ತಾಯೂರು, ಕೊಟ್ಟರಾಯನಹುಂಡಿ, ವಡ್ಡರಹುಂಡಿ, ಗೆಜ್ಜಿಗನಹಳ್ಳಿ, ಕಾಹಳ್ಳಿ, ಸೋನಹಳ್ಳಿ, ಸಣ್ಣ ಮಲ್ಲೂಪುರ, ಕಿರುಗುಂದ, ಹನಿಯಂಬಳ್ಳಿ, ಹೆಬ್ಯಾ, ಕೋಚನಹಳ್ಳಿ, ಕೂಡನಹಳ್ಳಿ ಸೇರಿದಂತೆ ವಿವಿಧ ಗ್ರಾಮಗಳಲ್ಲಿ ರೋಡ್ ಶೋ ನಡೆಸಿ ಮತಯಾಚಿಸಿದರು. ಈ ವೇಳೆ ಗ್ರಾಮಸ್ಥರು ಪಟಾಕಿ ಸಿಡಿಸಿ ಬೃಹತ್ ಗಾತ್ರದ ಹೂವಿನ ಹಾರ ಹಾಕಿ ಸ್ವಾಗತಿಸಿದರು. ಡಾ.ಬಿ.ಆರ್.ಅಂಬೇಡ್ಕರ್, ಮಹರ್ಷಿ ವಾಲ್ಮೀಕಿ ಹಾಗೂ ಭಗೀರಥ ಉಪ್ಪಾರ ಮಹರ್ಷಿ ನಾಮಫಲಕಗಳಿಗೆ ಸೋಮಣ್ಣ ಪುಷ್ಪನಮನ ಸಲ್ಲಿಸಿದರು.

ಈ ವೇಳೆ ಜಿಪಂ ಮಾಜಿ ಸದಸ್ಯರಾದ ಗುರುಸ್ವಾಮಿ, ಮಮತ ಶಿವಪ್ರಸಾದ್, ಕ್ಷೇತ್ರ ಜಿಲ್ಲಾ ಉಪಾಧ್ಯಕ್ಷ ಪ್ರತಾಪ್, ಪ್ರಥಮ ದರ್ಜೆ ಗುತ್ತಿಗೆದಾರ ಜೀಮರಳ್ಳಿ ಜಯಶಂಕರ್, ತಾಯೂರು ಗ್ರಾಪಂ ಮಾಜಿ ಅಧ್ಯಕ್ಷ ಜಿ.ಡಿ.ಮಹೇಶ್, ಸದಸ್ಯ ರಾಜು, ಕಾಮಳ್ಳಿ ಸುರೇಶ್, ಜಗದೀಶ್, ಶಾಂಬುಮೂರ್ತಿ, ಕುಮಾರ ಶೆಟ್ಟಿ, ಶಿವಣ್ಣ, ಶೇಖರಪ್ಪ, ಮಹೇಶ್, ಅಂಬೇಡ್ಕರ್ ಯುವಕರ ಸಂಘದ ಸದಸ್ಯರು ಗ್ರಾಮಸ್ಥರು ಹಾಜರಿದ್ದರು.

ನಾಗೇಂದ್ರರನ್ನು ಗೆಲ್ಲಿಸಿ; ಅವರನ್ನು ಸಚಿವರಾಗಿ ಸ್ವಾಗತಿಸಿ

● ಮಾಜಿ ಮುಖ್ಯಮಂತ್ರಿ ಸದಾನಂದಗೌಡರ ಭವಿಷ್ಯ ● ಪಡುವಾರಹಳ್ಳಿ, ಒಂಟಿಕೊಪ್ಪಲಲ್ಲಿ ರೋಡ್ ಶೋ' ಸಂಸದ ಪ್ರತಾಪ್ ಸಿಂಹ ಸಾಥ್



ಮೈಸೂರು, ಮೇ 4(ಎಂಕೆ)- ನುಡಿದಂತೆ ನಡೆದಿರುವ ಚಾಮರಾಜ ವಿಧಾನಸಭಾ ಕ್ಷೇತ್ರದ ಶಾಸಕ ಎಲ್. ನಾಗೇಂದ್ರ ಅವರನ್ನು ಮತ್ತೆ ಗೆಲ್ಲಿಸಿದರೆ ಮಂತ್ರಿಯಾಗಿ ಕ್ಷೇತ್ರಕ್ಕೆ ಬರಲಿದ್ದಾರೆ ಎಂದು ಮಾಜಿ ಮುಖ್ಯಮಂತ್ರಿ ಡಿ.ವಿ.ಸದಾನಂದಗೌಡ ಭವಿಷ್ಯ ನುಡಿದರು.

ಮೈಸೂರಿನ ಪಡುವಾರಹಳ್ಳಿ(ವಿನಾಯಕನಗರ)ಯಲ್ಲಿ ಗುರುವಾರ ಶಾಸಕ ನಾಗೇಂದ್ರ ಪರ ರೋಡ್ ನಡೆಸಿ ಮತಯಾಚಿಸಿದ ಅವರು, ಚಾಮರಾಜ ವಿಧಾನಸಭಾ ಕ್ಷೇತ್ರದ ಮತದಾರರ ಪ್ರೀತಿಗೆ ಪಾತ್ರರಾಗಿರುವ ನಾಗೇಂದ್ರ ಅವರನ್ನು ಗೆಲ್ಲಿಸಿದರೆ, ಅವರನ್ನು ಮಂತ್ರಿಯನ್ನಾಗಿ ಮಾಡುವ ಪ್ರಯತ್ನ ಮಾಡಲಾಗುವುದು. ಮಂತ್ರಿಯಾಗಿ ಕಾರಿನಲ್ಲಿ ಬರುವ ಅವರನ್ನು ಸ್ವಾಗತಿಸಲು ಸಿದ್ದರಾಗಿರಿ ಎಂದರು.

ನಾಗೇಂದ್ರಅವರಂತಹ ಜನಪ್ರತಿನಿಧಿಗಳು ಬೇಕಾಗಿದ್ದಾರೆ. ಇಡೀ ಕ್ಷೇತ್ರವನ್ನು ಅಭಿವೃದ್ಧಿ ಮಾಡಿದ್ದಾರೆ. ಇಲ್ಲಿಗೆ ನಾನು ಬರುವ ಅಗತ್ಯವಿರಲಿಲ್ಲ. ನಾಗೇಂದ್ರ ಗೆದ್ದೆ ಗೆಲ್ಲುತ್ತಾರೆ ಎಂಬ ರಿಪೋರ್ಟ್ ಈಗಾಗಲೇ ನನ್ನ ಕೈ ಸೇರಿತ್ತು. ಅಲ್ಲದೆ ಕಳೆದ ಬಾರಿಗಿಂತ ಶೇ.15 ರಷ್ಟು ಹೆಚ್ಚಿನ ಮತಗಳನ್ನು ಪಡೆದುಕೊಳ್ಳುತ್ತಾರೆ ಎಂಬ ವಿಶ್ವಾಸವೂ ಇತ್ತು. ಆದರೆ, ನಾಗೇಂದ್ರ ಅವರ ಮೇಲಿನ ಪ್ರೀತಿಯಿಂದ ಬಂದಿದ್ದೇನೆ. ಮತ್ತೆ ಅವರನ್ನು ಗೆಲ್ಲಿಸಿ, ಆಶೀರ್ವದಿಸಿ ಎಂದು ಕೋರಿದರು.

ರಾಜ್ಯದಲ್ಲಿ ಇಲ್ಲಿಯವರೆಗೆ ಬಿಜೆಪಿ ಪೂರ್ಣ ಬಹುಮತ ದೊರೆತಿಲ್ಲ. ಕಳೆದ ತಿಂಗಳಿಂದ ಕೋಲಾರ, ಚಿಕ್ಕಬಳ್ಳಾಪುರ ಸೇರಿದಂತೆ ಎಲ್ಲೆಡೆ ಈ ಬಾರಿ 15 ಜಿಲ್ಲೆ ಪ್ರವಾಸ ಮಾಡಿದ್ದೇನೆ. ಎಲ್ಲೆಡೆ ಅಪಾರ ಜನ ಬೆಂಬಲ ವ್ಯಕ್ತವಾಗಿದ್ದು, 130ಕ್ಕೂ ಹೆಚ್ಚು ಸ್ಥಾನ ಗೆಲ್ಲುವ ವಿಶ್ವಾಸವಿದೆ. ಯಾರ ಹಂಗು ಇಲ್ಲದೆ, ಯಾರನ್ನು ಸೇರಿಸಿಕೊಳ್ಳದೆ ಬಿಜೆಪಿ ಸರ್ಕಾರ ಅಸ್ತಿತ್ವಕ್ಕೆ ಬರಲಿದೆ ಎಂದರು.

ಸಿದ್ದರಾಮಯ್ಯ ಅವರನ್ನು ಮನೆಗೆ ಕಳಿಸುತ್ತೇವೆ: ಸಿದ್ದರಾಮಯ್ಯ ಅವರು ಊರೆಲ್ಲಾ ತಿರುಗಿ ಕಡೆಗೆ ವರುಣಾ ಕ್ಷೇತ್ರಕ್ಕೆ ಬಂದಿದ್ದಾರೆ. ಅವರ ಮನೆಯೂ ವರುಣಾ ಕ್ಷೇತ್ರದ ಹತ್ತಿರದಲ್ಲೇ ಇದೆ. ಆದ ಕಾರಣ ಚುನಾವಣೆ ಮುಗಿದ ಮೇಲೆ ಅವರನ್ನು ಮನೆಗೆ ಕಳುಹಿಸುವ ಕೆಲಸವನ್ನು ಬಿಜೆಪಿ ಮಾಡಬೇಕು ಎಂಬ ತಿರ್ಮಾನವಾಗಿದೆ ಎಂದು ಹೇಳಿದರು.

ಮಂತ್ರಿಯಾಗಿ ಬರಲಿದ್ದಾರೆ: ಸಂಸದ ಪ್ರತಾಪ್ ಸಿಂಹ ಮಾತನಾಡಿ, ಚಾಮರಾಜ ಕ್ಷೇತ್ರದಲ್ಲಿ ಶಂಕರಲಿಂಗೇಗೌಡರು 4 ಬಾರಿ ಗೆದ್ದಿದ್ದರು ಮಂತ್ರಿಯಾಗಿರಲಿಲ್ಲ. ಆದರೆ ಶಾಸಕ ನಾಗೇಂದ್ರ ಅವರನ್ನು ಮತ್ತೊಮ್ಮೆ ಶಾಸಕರನ್ನಾಗಿ ಆಯ್ಕೆ ಮಾಡಿ, ಅವರು ಮಂತ್ರಿಯಾಗಿ ಕ್ಷೇತ್ರಕ್ಕೆ ವಾಪಸ್ಸಾಗಲಿದ್ದಾರೆ. ಅಭಿವೃದ್ಧಿ ಪರವಾಗಿರುವ ಅವರಿಂದ ಜಿಲ್ಲೆಯ ಅಭಿವೃದ್ಧಿಗೆ ಬಹುದೊಡ್ಡ ಸಹಕಾರ ದೊರೆಯಲಿದೆ ಎಂದರು.

ಭರ್ಜರಿ ರೋಡ್ ಶೋ: ಮಾತೃಮಂಡಳಿ ವೃತ್ತದಿಂದ ಆರಂಭವಾದ ರೋಡ್ ಶೋ ಪಡುವಾರಹಳ್ಳಿಯ ಪ್ರಮುಖ ಬೀದಿಗಳಲ್ಲಿ ಸಾಗಿ ಒಂಟಿಕೊಪ್ಪಲಿನ ಶ್ರೀ ಪ್ರಸನ್ನ ಆಂಜನೇಯ ಸ್ವಾಮಿ ದೇವಸ್ಥಾನದ ವರೆಗೆ ನಡೆಯಿತು. ಬಳಿಕ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಲಾಯಿತು. ಮುಡಾ ಅಧ್ಯಕ್ಷ ಯಶಸ್ವಿ ಸೋಮಶೇಖರ್, ಮುಖಂಡರಾದ ಜಯಪ್ರಕಾಶ್(ಜೆಪಿ), ಚೌಡಪ್ಪ, ಪಾಲಿಕೆ ಸದಸ್ಯರಾದ ಸಿ.ವೇದಾವತಿ, ಪ್ರಮೀಳಾ ಭರತ್, ಎ.ಯು.ಸುಬ್ಬಯ್ಯ, ಯುವಮೋರ್ಚಾ ನಗರಾಧ್ಯಕ್ಷ ಕಿರಣ್‌ಗೌಡ ಸೇರಿದಂತೆ ನೂರಾರು ಮಂದಿ ಕಾರ್ಯಕರ್ತರು, ಅಭಿಮಾನಿಗಳು ಸಾಥ್ ನೀಡಿದರು.

ಎನ್.ಆರ್. ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಸಂದೇಶ್ ಸ್ವಾಮಿ ಪರ ಮಾಜಿ ಸಿಎಂ ಡಿ.ವಿ.ಸದಾನಂದಗೌಡ ಪ್ರಚಾರ



ನರಸಿಂಹರಾಜ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಸಂದೇಶ್‌ಸ್ವಾಮಿ ಪರ ಮಾಜಿ ಮುಖ್ಯಮಂತ್ರಿ ಡಿ.ವಿ.ಸದಾನಂದಗೌಡ ಗುರುವಾರ ಮತಯಾಚಿಸಿದರು. ಎನ್.ಆರ್.ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಗೆಲ್ಲಿಸುವ ಮೂಲಕ ರಾಜ್ಯ ಹಾಗೂ ಕ್ಷೇತ್ರದ ಅಭಿವೃದ್ಧಿಗೆ ಸಹಕರಿಸುವಂತೆ ಮನವಿ ಮಾಡಿದರು. ಮುಡಾ ಅಧ್ಯಕ್ಷ ಯಶಸ್ವಿ ಸೋಮಶೇಖರ್, ಬಿಜೆಪಿ ನಗರ ಕಾರ್ಯಾಧ್ಯಕ್ಷ ಹೆಚ್.ಜಿ.ಗಿರಿಧರ್, ಮುಖಂಡರಾದ ಬಿ.ಪಿ.ಮಂಜುನಾಥ್, ಭಾನುಪ್ರಕಾಶ್ ಮತ್ತಿತರರಿದ್ದರು.



ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರ ಕಡಕೋಳ ಗ್ರಾಮದಲ್ಲಿ ರೈತ ಸಂಘಟನೆಯ ಸದಸ್ಯರು ಚಾಮುಂಡೇಶ್ವರಿ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸಿದ್ದೇಗೌಡರಿಗೆ ಬೆಂಬಲ ಸೂಚಿಸಿದರು. ಈ ವೇಳೆ ರೈತ ಸಂಘದ ಜಿಲ್ಲಾಧ್ಯಕ್ಷ ವಿದ್ಯಾಸಾಗರ್ ರಾಮೇಗೌಡ, ಮಂಜು ಕಿರಣ್, ಪಚ್ಚೆ ನಂಜುಂಡಸ್ವಾಮಿ, ವಿಜಯಕುಮಾರ್, ದಿವಾಕರ್, ಶಿವು ಹಾಗೂ ಇನ್ನಿತರರನ್ನು ಚಿತ್ರದಲ್ಲಿ ಕಾಣಬಹುದು.

ಚಾಮುಂಡೇಶ್ವರಿಯ ವಿವಿಧ ಗ್ರಾಮಗಳಲ್ಲಿ ಶಾಸಕ ಜಿ.ಟಿ.ದೇವೇಗೌಡರು ಮತಯಾಚನೆ



ಮೈಸೂರು, ಮೇ 4(ಎಸ್‌ಬಿಡಿ)- ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಜಿ.ಟಿ.ದೇವೇಗೌಡರು ಗುರುವಾರ ಹಲವು ಗ್ರಾಮಗಳಲ್ಲಿ ಪ್ರಚಾರ ನಡೆಸಿ, ಮತಯಾಚಿಸಿದರು. ಕಡಕೋಳ, ಕೆ.ಎಂ.ಹುಂಡಿ, ಗೆಜ್ಜಗಳ್ಳಿ, ಕುಪ್ಪಲೂರು ಹಾಗೂ ದಾಸನಕೊಪ್ಪಲು ಗ್ರಾಮಗಳಲ್ಲಿ ಬಿರುಸಿನ ಪ್ರಚಾರ ನಡೆಸಿದ ಜಿಟಿಡಿ, ನಿಮ್ಮೆಲ್ಲರ ಆಶೀರ್ವಾದದಿಂದ ಶಾಸಕನಾಗಿ ಶಕ್ತಿಮೀರಿ ಕೆಲಸ ಮಾಡಿದ್ದೇನೆ. ಕ್ಷೇತ್ರದ ಜನರ ಋಣ ತೀರಿಸುವ ನಿಟ್ಟಿನಲ್ಲಿ ಪ್ರಾಮಾಣಿಕವಾಗಿ ಶ್ರಮಿಸಿದ್ದೇನೆ. ಈ ಬಾರಿ ಚುನಾವಣೆಯಲ್ಲೂ ನಿಮ್ಮ ಆಶೀರ್ವಾದವೇ ನನಗೆ ಶ್ರೀರಕ್ಷೆ. ದಯಮಾಡಿ ಮತ ನೀಡಿ ಎಂದು ಮನವಿ ಮಾಡಿದರು.

ಪ್ರತಿಯೊಂದು ಹಳ್ಳಿಯಲ್ಲೂ ಸಮರ್ಪಕ ಮೂಲ ಸೌಕರ್ಯ ಕಲ್ಪಿಸುವುದರ ಜೊತೆಗೆ ಆದ್ಯತೆ ಅನುಸಾರ ಅಭಿವೃದ್ಧಿ ಕೆಲಸಗಳಾಗಿವೆ. ಈ ಬಗ್ಗೆ ಜನರಿಗೆ ಚೆನ್ನಾಗಿ ತಿಳಿದಿದೆ. ಹಾಗಾಗಿ ಪ್ರಚಾರಕ್ಕೆ ಹೋದಲೆಲ್ಲಾ ಉತ್ತಮ ಸ್ಪಂದನೆ ವ್ಯಕ್ತವಾಗುತ್ತಿದೆ. ಕುಮಾರಸ್ವಾಮಿ ಅವರು ಮುಖ್ಯಮಂತ್ರಿಯಾಗಿದ್ದ ಸಂದರ್ಭವನ್ನೂ ಜನ ಇನ್ನೂ ನೆನೆಯುತ್ತಾರೆ ಎಂದರು.

ಇಂದೂ ಕೂಡ ಜಿಟಿಡಿ ಪ್ರಚಾರ ನಡೆಸಿದ ಎಲ್ಲಾ ಗ್ರಾಮಗಳಲ್ಲೂ ಅವರನ್ನು ಆತ್ಮೀಯವಾಗಿ ಅಭಿನಂದಿಸಲಾಯಿತು. ದಾಸನಕೊಪ್ಪಲಿನಲ್ಲಿ ಮಹಿಳೆಯರು, ಯುವಕರಾದಿಯಾಗಿ ನೂರಾರು ಮಂದಿ ಜಿಟಿಡಿ ಅವರನ್ನು ಸನ್ಮಾನಿಸಿ, ಜೈಕಾರ ಹಾಕಿ ಸಂಭ್ರಮಿಸಿದರು.

ನೀರಿನ ಶುಲ್ಕ ಪಾವತಿಗೆ ಬೆಳಗ್ಗೆ 9ರಿಂದ ಮಧ್ಯಾಹ್ನ 1.30 ಸಮಯ ನಿಗಧಿ

ಮೈಸೂರು, ಮೇ 4- ಮೈಸೂರು ನಗರ ಪಾಲಿಕೆ ವ್ಯಾಪ್ತಿಯ ನೀರಿನ ಶುಲ್ಕ ಪಾವತಿಸುವ ಸಮಯ ಬದಲಾವಣೆಯಾಗಿದೆ. ಪಾಲಿಕೆಯ ನೀರು ಸರಬರಾಜು ವಿಭಾಗದ ಒಟ್ಟು 17 ನಗದು ಶಾಖೆಗಳ ವ್ಯಾಪ್ತಿಯ ನೀರು ಸಂಪರ್ಕಗಳ ಶುಲ್ಕವನ್ನು ರಜಾ ದಿನ ಹೊರತುಪಡಿಸಿ ಬೆಳಗ್ಗೆ 9ರಿಂದ ಮಧ್ಯಾಹ್ನ 1.30ರೊಳಗೆ ಪಾವತಿಸಬಹುದು. ಈ ಹಿಂದೆ ಬೆಳಗ್ಗೆ 9.30ರಿಂದ ಮಧ್ಯಾಹ್ನ 2ರವರೆಗೆ ಸಮಯಾವಕಾಶವಿತ್ತು. ಆದರೆ ನೀರಿನ ಶುಲ್ಕದ ನಗದನ್ನು ಆ ದಿನವೇ ಬ್ಯಾಂಕಿಗೆ ಪಾವತಿಸಬೇಕಿರುವ ಕಾರಣ ವ್ಯವಹಾರದ ಸಮಯವನ್ನು ಪರಿಷ್ಕರಿಸಲಾಗಿದೆ ಎಂದು ವಿಭಾಗದ ಕಾರ್ಯಪಾಲಕ ಇಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪಿ.ಹೆಚ್.ಡಿ ಪದವಿ



ಮೈಸೂರು, ಮೇ 4- ಇರಮ್ ಫಾತೀಮಾ ಅವರು ಡಾ. ಟಿ.ಆನಂದ್ ಮಾರ್ಗದರ್ಶನದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ Nano encapsulation of Folic Acid Using Biodegradable Chitsoan and Its Characterization ಎಂಬ ಮಹಾಪ್ರಬಂಧವನ್ನು ಜೈವಿಕತಂತ್ರಜ್ಞಾನ ವಿಷಯದಲ್ಲಿ ಪಿಹೆಚ್.ಡಿ ಪದವಿಗಾಗಿ ಅಂಗೀಕರಿಸಲಾಗಿದೆ ಎಂದು ಮೈಸೂರು ವಿಶ್ವ ವಿದ್ಯಾನಿಲಯದ ಕುಲಸಚಿವ (ಪರೀಕ್ಷಾಂಗ) ಪ್ರೊ. ಎ.ಪಿ. ಜ್ಞಾನಪ್ರಕಾಶ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವರುಣದಲ್ಲೇ ಕೊನೆ ಚುನಾವಣೆ ಸ್ಪರ್ಧಿಸುವ ಆಸೆ ಇತ್ತು

ಕ್ಷೇತ್ರ ವ್ಯಾಪ್ತಿಯಲ್ಲಿ ಮಾಜಿ ಮುಖ್ಯಮಂತ್ರಿ ಪರವಾಗಿ ತಾರಾ ಲೋಕವೇ ಪ್ರಚಾರ, ರೋಡ್ ಶೋ



ಮೈಸೂರು,ಮೇ. 4(ಎಂಟಿವೈ)- ಕೊನೆ ಚುನಾವಣೆಯನ್ನು ಸ್ವಗ್ರಾಮವಿರುವ ವರುಣ ಕ್ಷೇತ್ರದಿಂದಲೇ ಸ್ಪರ್ಧಿಸಬೇಕೆಂಬ ಆಸೆ ಇತ್ತು. ಹಾಗಾಗಿ ಇಲ್ಲಿಯೇ ಚುನಾವಣೆ ಎದುರಿಸುತ್ತಿದ್ದೇನೆ. ಆದರೆ, ಕೋಮುವಾದಿ ಬಿಜೆಪಿ ಜಾತಿ-ಜಾತಿಗಳ ನಡುವೆ ಸಂಘರ್ಷ ಸೃಷ್ಟಿಸಿ, ಅಶಾಂತಿ ಹುಟ್ಟು ಹಾಕುವ ಮೂಲಕ ಬೇಳೆ ಬೇಯಿಸಿಕೊಳ್ಳುವ ಕುತಂತ್ರ ನಡೆಸುತ್ತಿದ್ದು, ಇದಕ್ಕೆ ಯಾರೂ ಬಲಿಯಾಗಬೇಡಿ ಎಂದು ವಿರೋಧ ಪಕ್ಷ ನಾಯಕ ಸಿದ್ದರಾಮಯ್ಯ ಮನವಿ ಮಾಡಿದ್ದಾರೆ.

ವರುಣಾ ವಿಧಾನಸಭೆ ಕ್ಷೇತ್ರದ ರಾಂಪುರ, ಮರಳೂರು, ಗೊದ್ದನಪುರ, ಬಸವನಪುರ, ತಾಂಡವಪುರ, ಕೆಂಪಿಸಿದ್ದನಹುಂಡಿ ಸೇರಿದಂತೆ ವಿವಿಧ ಗ್ರಾಮಗಳಲ್ಲಿ ರೋಡ್ ಶೋ ನಡೆಸಿ ಮತಯಾಚಿಸಿದರು.

ನಂತರ ಮಾತನಾಡಿದ ಅವರು, ವರುಣ ಕ್ಷೇತ್ರದ ಜನರು ನನ್ನನ್ನು ಎರಡು ಬಾರಿ ಅತ್ಯಧಿಕ ಮತಗಳ ಅಂತರದಿಂದ ಗೆಲ್ಲಿಸಿದ್ದೀರಿ. ಎಲ್ಲಾ ಗ್ರಾಮಗಳಲ್ಲೂ ನನಗೆ ಆಶೀರ್ವಾದ ಮಾಡಿದ್ದಾರೆ. ಯಾವುದೇ ಜಾತಿ-ಭೇದ, ಧರ್ಮ ಭೇದವಿಲ್ಲದೇ ಎಲ್ಲರೂ ನನಗೆ ಬೆಂಬಲ ನೀಡಿದ್ದಾರೆ. ವರುಣ ಕ್ಷೇತ್ರದ ಜನ ಕಳೆದ 15 ವರ್ಷದಿಂದ ನಾನು ಹಾಗೂ ಪುತ್ರ ಡಾ.ಯತೀಂದ್ರ ಮೇಲೆ ಇಟ್ಟಿರುವ ಪ್ರೀತಿ-ವಿಶ್ವಾಸಕ್ಕೆ ಕಿಂಚಿತ್ತೂ ಧಕ್ಕೆ ಬರದಂತೆ ನಡೆದುಕೊಂಡಿದ್ದೇವೆ. ಕ್ಷೇತ್ರದ ಸಮಗ್ರ ಅಭಿವೃದ್ಧಿಗಾಗಿ ಅಗತ್ಯವಿದ್ದ ಅನುದಾನ ಬಿಡುಗಡೆ ಮಾಡಿ, ಅಭಿವೃದ್ಧಿ ಮಾಡಿದ್ದೇನೆ ಎಂದರು.

ಬಿಜೆಪಿ ಸರ್ಕಾರ ಮಿತಿ ಮೀರಿದ ಭ್ರಷ್ಟಾಚಾರ ನಡೆಸಿದೆ. ಶೇ.40 ಕಮಿಷನ್ ದಂಧೆ, ಪಿಎಸ್‌ಐ, ಜೂನಿಯರ್ ಇಂಜಿನಿಯರ್, ಉಪನ್ಯಾಸಕರ ಹುದ್ದೆ ಸೇರಿದಂತೆ ಸರ್ಕಾರಿ ಹುದ್ದೆಗಳ ನೇಮಕಾತಿಯಲ್ಲಿ ವ್ಯಾಪಕ ಹಗರಣ ನಡೆಸಿ ಲೂಟಿ ಮಾಡಿರುವುದಲ್ಲದೇ, ಅರ್ಹರಿಗೆ ದ್ರೋಹ ಬಗೆದಿದೆ. ಇದು ಶೇ.40ರಷ್ಟು ಕಮಿಷನ್ ಸರ್ಕಾರ ಎಂದು ದೇಶವೇ ರಾಜ್ಯದ ಬಿಜೆಪಿ ಸರ್ಕಾರದ ವಿರುದ್ಧ ಮಾತನಾಡಿಕೊಳ್ಳುವ ಸ್ಥಿತಿ ನಿರ್ಮಾಣವಾಗಿದೆ. ಡಬಲ್ ಎಂಜಿನ್ ಸರ್ಕಾರವೆಂದು ಹೇಳಿ ಡಬಲ್ ಲೂಟಿ ಮಾಡಿದ್ದಾರೆ. ಇವರಿಗೆ ತಾವು ಮಾಡಿರುವ ಅಭಿವೃದ್ಧಿ ಕಾರ್ಯಗಳನ್ನು ಹೇಳಿ ಮತ ಕೇಳಲು ತಾಕತ್ತಿಲ್ಲ ಎಂದರು.

ನಾಲ್ಕು ವರ್ಷ ಅಧಿಕಾರದಲ್ಲಿದ್ದಾಗ ಒಂದೇ ಒಂದು ಅಭಿವೃದ್ಧಿ ಕಾಮಗಾರಿಯನ್ನು ಅನುಷ್ಠಾನಗೊಳಿಸಿಲ್ಲ. ಕೋಮು ಸಂಘರ್ಷಕ್ಕೆ ಪ್ರಚೋದನೆ, ಜಾತಿಗಳ ನಡುವೆ ಸಂಘರ್ಷ, ಭಾವನಾತ್ಮಕ ವಿಚಾರಗಳನ್ನು ಬಿತ್ತಿ ಮತ ಕೇಳುತ್ತಿದ್ದಾರೆ. ಯಾವುದೇ ಪಕ್ಷವಾಗಲೀ ನಾವು ಇಷ್ಟು ಅಭಿವೃದ್ಧಿ ಮಾಡಿದ್ದೇವೆ ಎಂದು ಹೇಳಿ ಮತ ಕೇಳುವ ಸಂಪ್ರದಾಯವಿದೆ. ಆದರೆ, ಬಿಜೆಪಿಗರಿಗೆ ಅಭಿವೃದ್ಧಿ ವಿಚಾರ ಮುಂದಿಟ್ಟುಕೊಂಡು ಮತ ಕೇಳಲು ಮುಖವಿಲ್ಲ. ಜನ ಬೈಯ್ಯುತ್ತಾರೆಂದು ತಿಳಿದು, ಜನರ ಮನಸ್ಸನ್ನು ಬೇರೆಡೆಗೆ ಸೆಳೆಯಲು ಹಿಂದು-ಮುಸ್ಲಿಂ, ಹಿಜಾಬ್, ಆಜಾನ್ ಎನ್ನುತ್ತಿದ್ದಾರೆ. ಜಾತಿಗಳ ನಡುವೆ ಗೊಂದಲ ಸೃಷ್ಟಿಸುತ್ತಿದ್ದಾರೆ. ಬಿಜೆಪಿಯವರ ಈ ಆಟ ವರುಣ ಕ್ಷೇತ್ರದಲ್ಲಿ ನಡೆಯುವುದಿಲ್ಲ ಎಂದು ಕಿಡಿಕಾರಿದರು.

ವರುಣ ಕ್ಷೇತ್ರ ಮಾದರಿ ಕ್ಷೇತ್ರ: ವರುಣ ಕ್ಷೇತ್ರ ಮೊದಲು ಹೇಗಿತ್ತು. ಈಗ ಹೇಗಿದೆ ಎಂದು ಜನರಿಗೆ ತಿಳಿದಿದೆ. ಎಲ್ಲಾ ಗ್ರಾಮಗಳಿಗೂ ಮೂಲ ಸೌಕರ್ಯ ಕಲ್ಪಿಸಲಾಗಿದೆ. ಅದಕ್ಕಾಗಿ ಬೇಕಾದ ಅನುದಾನ ಬಿಡುಗಡೆ ಮಾಡಿದ್ದೇನೆ. 2008 ಹಾಗೂ 2013ರಲ್ಲಿ ಕ್ಷೇತ್ರದ ಜನತೆ ಎರಡು ಬಾರಿ ನನ್ನನ್ನು ಆಯ್ಕೆ ಮಾಡಿದ್ದೀರಿ. ನಿಮ್ಮ ಅಭಿಮಾನಕ್ಕೆ ನಾನು ಎಂದೆಂದು ಚಿರಋಣಿ ಎಂದರು.

ಒಂದೇ ಜಾತಿಗೆ ಸೀಮಿತವಾಗದ ಯೋಜನೆ: ನಾನು ಗೆದ್ದ ಸಂದರ್ಭದಲ್ಲಿ ಯಾವುದೇ ಧರ್ಮ, ಜಾತಿಯ ಸೋಂಕಿಗೆ ಒಳಗಾಗದೇ ಸಾಮಾಜಿಕ ನ್ಯಾಯದ ಪರಿಕಲ್ಪನೆಯಲ್ಲಿ ಸರ್ವರನ್ನೂ ಸಮಾನ ದೃಷ್ಟಿಯಲ್ಲಿ ಕಂಡಿದ್ದೇನೆ. ಅದರಂತೆ ಎಲ್ಲರೂ ಅನ್ವಯವಾಗುವ ಯೋಜನೆಗಳನ್ನು ನೀಡಿದ್ದೇನೆ. ಹಸಿವಿನಿಂದ ಯಾರೂ ಬಳಲಬಾರದೆಂದು ಅನ್ನ ಭಾಗ್ಯ ಯೋಜನೆ, ಶಾಲಾ ಮಕ್ಕಳು ಅಪೌಷ್ಟಿಕತೆಯಿಂದ ನರಳಬಾರದೆಂದು ಹೇಳಿ ಕ್ಷೀರಭಾಗ್ಯ ಸೇರಿದಂತೆ ಹತ್ತಾರು ಯೋಜನೆ ಜಾರಿಗೆ ತಂದಿದ್ದೇನೆ ಈ ಯೋಜನೆಗಳು ಯಾವುದೇ ಒಂದು ಜಾತಿಗೆ ಸೇರಿದ್ದಲ್ಲ. ಇದು ನನ್ನ ಬದ್ಧತೆಯಾಗಿದೆ ಎಂದರು.

ಬೆಲೆ ಏರಿಕೆ ಬಿಜೆಪಿ ಸಾಧನೆ: ಬಿಜೆಪಿಯ ಕೆಟ್ಟ ಆಡಳಿತ ವೈಖರಿಯಿಂದ ಅಗತ್ಯ ವಸ್ತುಗಳ ಬೆಲೆ ಏರಿಕೆಯಾಗಿದೆ. ಇದರಿಂದ ಜನರು ಜೀವನ ನಡೆಸುವುದೇ ದುಸ್ತರವಾಗಿದೆ. ದುರಾಡಳಿತದ ಫಲವಾಗಿ ಅಡುಗೆ ಅನಿಲ, ಇಂಧನ ಬೆಲೆ, ಅಡುಗೆ ಎಣ್ಣೆ ರಸಗೊಬ್ಬರ, ಬಿತ್ತನೆ ಬೀಜ ಸೇರಿದಂತೆ ಅಗತ್ಯ ವಸ್ತುಗಳ ಬೆಲೆ ಗಗನಕ್ಕೇರಿದೆ. ಸ್ವಿಸ್ ಬ್ಯಾಂಕ್‌ನಿಂದ ಕಪ್ಪು ಹಣ ತಂದು ಎಲ್ಲರಿಗೂ ತಲಾ 15 ಲಕ್ಷ ಹಣ ನೀಡುವುದಾಗಿ ಜನರನ್ನು ನಂಬಿಸಿದ್ದ ಬಿಜೆಪಿ ದ್ರೋಹ ಬಗೆದಿದೆ. ಕಳೆದ ಚುನಾವಣೆಯಲ್ಲಿ ನೀಡಿದ್ದ ಯಾವುದೇ ಭರವಸೆಯನ್ನು ಈಡೇರಿಸಿಲ್ಲ ಎಂದು ಕಿಡಿಕಾರಿದರು.

ನುಡಿದಂತೆ ನಡೆದಿದ್ದೇವೆ: 2013ರಲ್ಲಿ ನಾವು ಜನರಿಗೆ ಕೊಟ್ಟಿದ್ದ ಭರವಸೆಯನ್ನೆಲ್ಲಾ ಈಡೇರಿಸಿದ್ದೇವೆ. ಪ್ರಣಾಳಿಕೆಯಲ್ಲಿ ಹೇಳಿದ್ದ ಕಾರ್ಯಕ್ರಮಕ್ಕಿಂತ ಹೆಚ್ಚಿನ ಜನಪರ ಕಾರ್ಯಕ್ರಮ ಜಾರಿಗೊಳಿಸಿದ್ದೇವೆ. ಕೊಟ್ಟ ಮಾತಿನಂತೆ ನಡೆದುಕೊಂಡ ಏಕೈಕ ಸರ್ಕಾರ ಕಾಂಗ್ರೆಸ್ ಸರ್ಕಾರವಾಗಿದೆ. ಬಿಜೆಪಿ ಭ್ರಷ್ಟಾಚಾರದಿಂದಾಗಿ ಜನ ಬೇಸತ್ತಿದ್ದಾರೆ ಎಂದರು.


ಬಿಜೆಪಿ ನಾಯಕರು ಹತಾಶರಾಗಿದ್ದಾರೆ: ಜನ ಬಿಜೆಪಿ ವಿರುದ್ಧ ತಿರುಗಿ ಬಿದ್ದಿದ್ದಾರೆ. ಎಲ್ಲೆಡೆ ಟೀಕೆ ವ್ಯಕ್ತವಾಗುತ್ತಿದೆ ಆದರೆ, ಜನರನ್ನು ಓಲೈಸಿಕೊಳ್ಳಲು ಹಿಂದುವಾದ ಪ್ರತಿಪಾದಿಸುತ್ತಿದ್ದಾರೆ. ಯುವಕರನ್ನು ಪ್ರಚೋದಿಸಿ ದಾರಿ ತಪ್ಪಿಸುತ್ತಿದ್ದಾರೆ. ಅಲ್ಲದೇ, ಹೇಗಾದರೂ ಮಾಡಿ ಅಧಿಕಾರ ಉಳಿಸಿಕೊಳ್ಳಲೇಬೇಕೆಂದು ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ ಸೋಲಿನ ಭಯದಿಂದ ರಾಜ್ಯಕ್ಕೆ ಬರುತ್ತಿದ್ದಾರೆ. ಆದರೂ ಬಿಜೆಪಿ ದುರಾಡಳಿತದಿಂದ ಜನ ಬೇಸತ್ತು ತಕ್ಕ ಪಾಠ ಕಲಿಸಲು ತುದಿಗಾಲಲ್ಲಿ ನಿಂತಿದ್ದಾರೆ ಎಂದು ಕಿಡಿಕಾರಿದರು.

ನಾನು ನಿಮ್ಮವನು, ನಿಮ್ಮ ಮನೆ ಮಗನು

ನಾನು ನಿಮ್ಮವನು. ನಿಮ್ಮ ಮನೆ ಮಗನೂ ಆಗಿದ್ದೇನೆ. ಹುಟ್ಟೂರು ವರುಣ ಕ್ಷೇತ್ರಕ್ಕೆ ಸೇರಿದೆ. ನಾನು ವರುಣ ಕ್ಷೇತ್ರದ ಮನೆ ಮಗ. ಇದು ನನ್ನ ಕೊನೆ ಚುನಾವಣೆ. ಆ ನಂತರ ನಾನು ಚುನಾವಣಾ ರಾಜಕೀಯದಿಂದ ದೂರವುಳಿಯುತ್ತೇನೆ. ಎರಡು ಬಾರಿ ನನ್ನನ್ನು ಗೆಲ್ಲಿಸಿದ್ದೀರಿ. ನೀವು ನನ್ನ ಮೇಲೆ ಇಟ್ಟಿರುವ ವಿಶ್ವಾಸವನ್ನು ಉಳಿಸಿಕೊಂಡಿದ್ದೇನೆ. ಈ ಚುನಾವಣೆಯಲ್ಲಿ ನನ್ನ ಸೋಲಿಸಲೇಬೇಕೆಂದು ಮತೀಯ ಶಕ್ತಿಗಳು ಸಂಚು ನಡೆಸಿದ್ದೇವೆ. ಅದಕ್ಕೆ ಕ್ಷೇತ್ರದ ಜನತೆ ತಕ್ಕ ಉತ್ತರ ಕೊಟ್ಟು, ನನ್ನ ಗೆಲುವಿಗೆ ಶ್ರಮಿಸಬೇಕು.

- ಸಿದ್ದರಾಮಯ್ಯ, ವಿರೋಧ ಪಕ್ಷದ ನಾಯಕ

ಶುಕ್ರವಾರ 5-05-2023 ಬೆಳ್ಳಿ ಬೆಳಕು ಮೈಸೂರು ಮಿತ್ರ
• ಸತ್ಯಮೂರ್ತಿ ತೋಳಹುಣಸೆ
ಸಿನಿಮಾ ಪುರವಣಿ



ಮೈಸೂರಿನಲ್ಲಿ ಶಿವಣ್ಣ, ಉಪೇಂದ್ರ ಅಭಿನಯದ 45 ಚಿತ್ರಕ್ಕೆ ಚಾಲನೆ



ಗಾಳಿಪಟ, ಪಡ್ಡೆಹುಲಿ ಖ್ಯಾತಿಯ ರಮೇಶ್‌ರೆಡ್ಡಿ ಅವರು ಸೂರಜ್ ಪ್ರೊಡಕ್ಷನ್ಸ್ ಲಾಂಛನದಲ್ಲಿ ನಿರ್ಮಿಸುತ್ತಿರುವ ಶಿವರಾಜ ಕುಮಾರ್, ಉಪೇಂದ್ರ, ರಾಜ್ ಬಿ.ಶೆಟ್ಟಿ ಪ್ರಮುಖ ಪಾತ್ರಗಳಲ್ಲಿ ನಟಿಸುತ್ತಿರುವ '45' ಚಿತ್ರದ ಮುಹೂರ್ತ ಸಮಾರಂಭ ಮೈಸೂರಿನಲ್ಲಿ ನೆರವೇರಿತು. ಮೊದಲ ದೃಶ್ಯಕ್ಕೆ ಗೀತಾ ಶಿವರಾಜಕುಮಾರ್ ಕ್ಲಾಪ್ ಮಾಡಿದರು. ಸಂಗೀತ ನಿರ್ದೇಶಕ ಅರ್ಜುನ್ ಜನ್ಯ ಅವರು ಈ ಚಿತ್ರದ ಮೂಲಕ ನಿರ್ದೇಶಕರಾಗುತ್ತಿದ್ದಾರೆ. ಸತ್ಯ ಹೆಗಡೆ ಅವರ ಛಾಯಾಗ್ರಹಣ, ಅನಿಲ್‌ಕುಮಾರ್ ಅವರ ಸಂಭಾಷಣೆ ಈ ಚಿತ್ರಕ್ಕಿದೆ. ಮುಹೂರ್ತದ ನಂತರ ನಡೆದ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿದ ಶಿವರಾಜಕುಮಾರ್, ಇದೊಂದು ಫಿಲಾಸಫಿಕಲ್ ಎಂಟರ್‌ಟೈನರ್ ಎಂದು ಹೇಳುತ್ತಾ, ಕಳೆದ ಒಂದು ವರ್ಷದಿಂದ ಚಿತ್ರದ ಪ್ರೀ-ಪ್ರೊಡಕ್ಷನ್ ಕೆಲಸಗಳು ನಡೆಯುತ್ತಿದೆ. ಅರ್ಜುನ್ ಜನ್ಯ ಕಥೆ ಹೇಳಿದಾಗ ತುಂಬಾ ಇಷ್ಟವಾಗಿತ್ತು. ಆನಂತರ ಅನಿಮೇಶನ್ ರೂಪದಲ್ಲಿ ಚಿತ್ರವನ್ನು ತೋರಿಸಿದರು. ಈ ಚಿತ್ರದ ನಂತರ ಭಾರತದ ಟಾಪ್ ನಿರ್ದೇಶಕರಲ್ಲಿ ಅರ್ಜುನ್ ಜನ್ಯ ಕೂಡ ಒಬ್ಬರಾಗುತ್ತಾರೆ ಎಂಬ ನಂಬಿಕೆಯಿದೆ. ಈ ಚಿತ್ರದಲ್ಲಿ ನನ್ನದು ತುಂಬಾ ಪ್ರಬುದ್ಧವಾದ ಪಾತ್ರ ಎಂದರು.

ಸಾಮಾನ್ಯವಾಗಿ ನಟರಿಗೆ ನಿರ್ದೇಶಕರು ಚಿತ್ರದ ಕಥೆ ಹೇಳಿದರೆ, ಅರ್ಜುನ್ ಜನ್ಯ ನನಗೆ ಚಿತ್ರವನ್ನೇ ತೋರಿಸಿದರು. ಅರ್ಜುನ್ ಜನ್ಯ ಮತ್ತು ಅವರ ತಂಡ ಚಿತ್ರಕ್ಕೆ ಮಾಡಿಕೊಂಡ ತಯಾರಿ ಅದ್ಭುತ. ಒಬ್ಬ ನಟನಾಗಿ, ಪ್ರೇಕ್ಷಕನಾಗಿ ಸಿನಿಮಾದ ಬಗ್ಗೆ ನನಗೂ ಸಾಕಷ್ಟು ಕುತೂಹಲ ಮತ್ತು ನಿರೀಕ್ಷೆಯಿದೆ ಎಂದು ನಟ ರಾಜ್ ಬಿ.ಶೆಟ್ಟಿ ಹೇಳಿದರು. ಚಿತ್ರದ ನಾಯಕಿ ಕೌಸ್ತುಭಮಣಿ ಮಾತನಾಡಿ, ಮೊದಲ ಬಾರಿಗೆ ಹೆಸರಾಂತ ಕಲಾವಿದರು ಮತ್ತು ತಂತ್ರಜ್ಞರ ಜೊತೆ ಕೆಲಸ ಮಾಡುತ್ತಿರುವುದಕ್ಕೆ ತುಂಬಾ ಖುಷಿಯಾಗುತ್ತಿದೆ. ಒಬ್ಬ ಬೋಲ್ಡ್ ಆಗಿರುವ ಹುಡುಗಿಯ ಪಾತ್ರದಲ್ಲಿ ನಾನು ಕಾಣಿಸಿಕೊಳ್ಳುತ್ತಿದ್ದೇನೆ' ಎಂದರು.

ನಿರ್ಮಾಪಕ ಎಂ. ರಮೇಶ್‌ರೆಡ್ಡಿ ಅವರಿಗೆ ಅರ್ಜುನ್ ಜನ್ಯ ಹೇಳಿದ ಕಥೆ ಬಹಳ ಇಷ್ಟವಾಯಿತಂತೆ. ಚಿತ್ರದ ಘೋಷಣೆಯಾಗಿ ಹಲವು ತಿಂಗಳಾದರೂ ಕೆಲಸ ನಿಧಾನಗತಿಯಲ್ಲಿ ಸಾಗುತ್ತಿತ್ತು. ಅವರು ಈ ಬಗ್ಗೆ ಅರ್ಜುನ್ ಜನ್ಯ ಅವರನ್ನು ಕೇಳಿದಾಗ, ಅವರು ಅನಿಮೇಶನ್ ಮೂಲಕ ಸಿನಿಮಾವನ್ನೇ ತೋರಿಸಿದರು. ಚಿತ್ರೀಕರಣ ಶುರುವಾಗುವುದಕ್ಕಿಂತ ಮೊದಲೇ, ಚಿತ್ರ ತೋರಿಸಿದರು. ನಾವು ಅಂದುಕೊಂಡಿರುವುದಕ್ಕಿಂತ ಸಿನಿಮಾ ಚೆನ್ನಾಗಿ ಮೂಡಿಬರುತ್ತದೆ ಎಂಬ ನಂಬಿಕೆಯಿದೆ ಎಂದು ರಮೇಶ್‌ರೆಡ್ಡಿ ಹೇಳಿದರು.

ಕೊನೆಗೆ ಮಾತನಾಡಿದ ಅರ್ಜುನ್ ಜನ್ಯ, ಚಿತ್ರೀಕರಣ ಈಗ ಶುರುವಾಗುತ್ತಿದ್ದರೂ, ಸುಮಾರು 9 ತಿಂಗಳ ಕಾಲ ಪ್ರೀ-ಪ್ರೊಡಕ್ಷನ್ ಕೆಲಸಗಳನ್ನು ಮಾಡಿ ಈಗ ಚಿತ್ರೀಕರಣಕ್ಕೆ ಹೊರಡುತ್ತಿದ್ದೇವೆ. ಮೊದಲು ಶಿವಣ್ಣ ಅವರಿಗೆ ಕಥೆ ಹೇಳಿದಾಗ, ನೀವೇ ಈ ಸಿನಿಮಾ ಮಾಡಿ ಎಂದು ಹುರಿದುಂಬಿಸಿದರು. ಒಂದು ದೊಡ್ಡ ಫಿಲಾಸಫಿಯನ್ನು ಕ್ಲಾಸ್ ಮತ್ತು ಮಾಸ್ ಆಗಿ ಹೇಳುವ ಪ್ರಯತ್ನ ಮಾಡುತ್ತಿದ್ದೇನೆ ಎಂದರು. ಕನ್ನಡವಲ್ಲದೆ ತಮಿಳು, ತೆಲುಗು ಮತ್ತು ಮಲಯಾಳಂ ಭಾಷೆಗಳಲ್ಲೂ ಸಹ ನಿರ್ಮಾಣವಾಗುತ್ತಿರುವ 45 ಚಿತ್ರಕ್ಕೆ 80 ದಿನಗಳ ಕಾಲ ಬೆಂಗಳೂರು, ಮೈಸೂರು ಸುತ್ತಮುತ್ತ ಚಿತ್ರೀಕರಣ ನಡೆಯಲಿದೆ.



ಬೇರ | ಹರ್ಷಿಕಾ ಪಾತ್ರಕ್ಕೆ ಎರಡು ಮುಖ

ಕಿರುತೆರೆಯಲ್ಲಿ ಸಾಕಷ್ಟು ಯಶಸ್ವಿ ಧಾರಾವಾಹಿಗಳನ್ನು ನಿರ್ದೇಶಿಸಿರುವ ವಿನು ಬಳಂಜ ಅವರೀಗ ಹಿರಿತೆರೆಯಲ್ಲಿ 'ಬೇರ' ಎಂಬ ಚಿತ್ರದ ಮೂಲಕ ಪ್ರಥಮ ಹೆಜ್ಜೆ ಇಟ್ಟಿದ್ದಾರೆ. ದಿವಾಕರದಾಸ್ ಅವರ ನಿರ್ಮಾಣದ ಈ ಚಿತ್ರದಲ್ಲಿ ಹರ್ಷಿಕಾ ಪೂಣಚ್ಚ, ಶೈನ್‌ಶೆಟ್ಟಿ, ದತ್ತಣ್ಣ, ಯಶ್‌ಶೆಟ್ಟಿ, ಅಶ್ವಿನ್‌ಹಾಸನ್ ಮತ್ತಿತರರು ಅಭಿನಯಿಸಿದ್ದಾರೆ. ಇತ್ತೀಚೆಗೆ ಚಿತ್ರದ ಟೀಸರ್ ಬಿಡುಗಡೆ ಕಾರ್ಯಕ್ರಮ ನಡೆಯಿತು.

ಈ ಸಂದರ್ಭದಲ್ಲಿ ನಿರ್ದೇಶಕ ವಿನು ಬಳಂಜ ಮಾತನಾಡುತ್ತಾ, ನನ್ನ ನಿರ್ದೇಶನದ ಮೊದಲ ಚಿತ್ರವಿದು. ಒಮ್ಮೆ ನಾನು ಕಲ್ಲಡ್ಕಗೆ ಹೋದಾಗ ಅಲ್ಲಿನ ಮ್ಯೂಸಿಯಂ ನೋಡಿ ಈ ಕಥೆ ಹುಟ್ಟಿದ್ದು. ಆನಂತರ ನಿರ್ಮಾಪಕ ದಿವಾಕರ ದಾಸ್ ಅವರು ನನಗೆ ಈ ಸಿನಿಮಾ ಮಾಡಲು ಪ್ರೇರೇಪಿಸಿದರು. ತುಳುವಿನಲ್ಲಿ 'ಬೇರ' ಎಂದರೆ 'ವ್ಯಾಪಾರ' ಎಂದರ್ಥ. ಅಮಾಯಕ ಮನುಷ್ಯರನ್ನು ಮೆಟ್ಟಿಲಾಗಿ ಬಳಸಿಕೊಂಡು ಉಳ್ಳವರು ಹೇಗೆ ನಾಯಕರಾಗಿ ಬೆಳೆಯುತ್ತಾರೆ ಅಂತ ಈ ಚಿತ್ರದಲ್ಲಿ ಹೇಳಿದ್ದೇವೆ. ಹಾಗೂ ಯಾವ ತಾಯಂದಿರ ಮಕ್ಕಳೂ ಇನ್ನೊಬ್ಬರಿಂದಾಗಿ ಸಾಯಬಾರದು ಎನ್ನುವುದೇ ಈ ಚಿತ್ರದ ಕಥಾಹಂದರ. ಈ ಚಿತ್ರದಲ್ಲಿ ನಾಯಕ, ನಾಯಕಿ ಅಂತ ಯಾರೂ ಇಲ್ಲ. ಕಥೆಯಲ್ಲಿ ಬರುವ ಎಲ್ಲಾ ಪಾತ್ರಗಳು ಮುಖ್ಯ. ಸದ್ಯ ಚಿತ್ರದ ಟೀಸರ್ ಬಿಡುಗಡೆ ಮಾಡಿದ್ದು, ಮೇ ಅಂತ್ಯಕ್ಕೆ ಚಿತ್ರವನ್ನು ತೆರೆಗೆ ತರುವ ಯೋಜನೆಯಿದೆ ಎಂದರು.

ನಿರ್ಮಾಪಕ ದಿವಾಕರ ದಾಸ ಮಾತನಾಡುತ್ತಾ, ಕೇವಲ ಮೂರು ಜನ ಕೆಲಸಗಾರರಿಂದ ಶುರುವಾದ ಎಸ್‌ಎಲ್‌ವಿ ಸಂಸ್ಥೆಯಲ್ಲಿ ಇಂದು ನೂರೈವತ್ತು ಜನ ಕೆಲಸಗಾರರಿದ್ದಾರೆ. ಈಗ ಎಸ್‌ಎಲ್‌ವಿ ಕಲರ್ಸ್ ಲಾಂಛನದಲ್ಲಿ 'ಬೇರ' ಎಂಬ ಚಿತ್ರವನ್ನು ಮೊದಲ ಬಾರಿಗೆ ನಿರ್ಮಾಣ ಮಾಡಿದ್ದೇವೆ ಎಂದರು. ಹಿರಿಯ ನಟ ದತ್ತಣ್ಣ ಮಾತನಾಡುತ್ತಾ, ನಾನು ಒಂದೆರಡು ದಿನ ಈ ಚಿತ್ರದಲ್ಲಿ ಕೆಲಸ ಮಾಡಿದ್ದೇನೆ. ವಿನು ಬಳಂಜ ಅವರ ನಿರ್ದೇಶನದಲ್ಲಿ ಕೆಲಸ ಮಾಡಿದ ಖುಷಿಯಿದೆ. ಸಮಕಾಲೀನ ಜೀವನದಲ್ಲಿ ಏನೇನು ಆಗುತ್ತೆ ಅಂತ ಈ ಚಿತ್ರದಲ್ಲಿ ಹೇಳಿದ್ದಾರೆ. ಟೀಸರ್ ನೋಡಿದಾಗ ಒಂದು ಕುತೂಹಲ ಮೂಡುತ್ತೆ ಎಂದರು. ನಾಯಕಿ ಹರ್ಷಿಕಾ ಪೂಣಚ್ಚ ಮಾತನಾಡಿ, ಬೇರ ಚಿತ್ರದಲ್ಲಿ ನನ್ನದು ಎರಡು ಶೇಡ್ ಇರುವಂಥ ಪಾತ್ರ. ಈ ಟೀಸರ್ ನನಗೆ ಸ್ಪೆಷಲ್, ಚಿತ್ರದಲ್ಲಿ ಏನೇನಿದೆ ಎನ್ನುವ ಕುತೂಹಲಕ್ಕೆ ಉತ್ತರ ನೀಡಿತು ಎಂದು ಹೇಳಿದರು. ಉಳಿದಂತೆ ಕಲಾವಿದರಾದ ಯಶ್‌ಶೆಟ್ಟಿ, ಅಶ್ವಿನ್‌ಹಾಸನ್, ಚಿತ್ಕಲ ಬಿರಾದಾರ್, ಮಂಜುನಾಥ್ ಹೆಗಡೆ, ಗುರು ಹೆಗಡೆ, ರಾಕೇಶ್ ಮಯ್ಯ ಮುಂತಾದವರು ಮಾತನಾಡಿದರು. ರಾಜಶೇಖರ್ ಚಿತ್ರದ ಛಾಯಾಗ್ರಹಕರಾಗಿದ್ದು, ಮಣಿಕಾಂತ ಕದ್ರಿ ಹಿನ್ನೆಲೆ ಸಂಗೀತ ಒದಗಿಸಿದ್ದಾರೆ.



'ಧೀರ ಸಾಮ್ರಾಟ್' ಚಿತ್ರದ 'ಏನ್‌ಚಂದ ಕಾಣಿಸ್ತಾಳೆ' ಹಾಡಿಗೆ ಧ್ರುವ ಸಾಥ್

ಸಸ್ಪೆನ್ಸ್, ಥ್ರಿಲ್ಲರ್ ಕಥಾಹಂದರ ಇರುವ ಚಿತ್ರ 'ಧೀರ ಸಾಮ್ರಾಟ್'. ಬಿಡುಗಡೆಗೆ ಸಿದ್ಧವಾಗಿರುವ ಈ ಚಿತ್ರದ ಹಾಡೊಂದನ್ನು, ಆಕ್ಷನ್‌ಪ್ರಿನ್ಸ್ ಧ್ರುವ ಸರ್ಜಾ ಇತ್ತೀಚೆಗೆ ರಿಲೀಸ್ ಮಾಡಿದರು. 'ಏನ್‌ಚಂದ ಕಾಣಿಸ್ತಾಳೆ ನಮ್‌ಹುಡುಗಿ' ಎನ್ನುವ ಟಪಾಂಗುಚಿ ಹಾಡಲ್ಲಿ ನಾಯಕ ರಾಕೇಶ್ ಹಾಗೂ ನಾಯಕಿ ಅದ್ವಿತಿ ಶೆಟ್ಟಿ ಅಭಿನಯಿಸಿದ್ದಾರೆ. ಸಮಾರಂಭದಲ್ಲಿ ಮಾತನಾಡಿದ ನಿರ್ದೇಶಕ ಪವನ್, ಧ್ರುವ ಸರ್ಜಾ ಅವರು ಎಷ್ಟೇ ಬ್ಯುಸಿ ಇದ್ದರೂ, ಬಿಡುವು ಮಾಡಿಕೊಂಡು ಬಂದು ಹಾಡನ್ನು ಬಿಡುಗಡೆ ಮಾಡಿಕೊಟ್ಟಿದ್ದಾರೆ. ಕುಟುಂಬಸಮೇತ ನೋಡಬಹುದಾದ ಸಸ್ಪೆನ್ಸ್, ಥ್ರಿಲ್ಲರ್ ಕಥಾಹಂದರ ಈ ಚಿತ್ರದಲ್ಲಿದೆ. ಐವರು ಹುಡುಗರ ನಡುವಿನ ಗೆಳತನ ಹೇಗಿರುತ್ತೆ ಎಂಬುದನ್ನು ಚಿತ್ರದಲ್ಲಿ ಹೇಳಿದ್ದೇವೆ. ಕೊನೆಯ ತನಕ ಚಿತ್ರದ ಕುತೂಹಲವನ್ನು ಕಾಯ್ದರಿಸಿದ್ದು, ಕ್ಲೈಮಾಕ್ಸ್‌ನಲ್ಲಿ ಪ್ರೇಕ್ಷಕರನ್ನು ಸೀಟಿನ ತುದಿಯಲ್ಲಿ ಕೂರುವಂತೆ ಮಾಡುತ್ತದೆ. ರಾಕೇಶ್, ಅದ್ವಿತಿ, ಸಕಲ್ಪ್ ಪಾಟೀಲ್ ಪ್ರಮುಖ ಪಾತ್ರಗಳಲ್ಲಿದ್ದಾರೆ ಎಂದು ಹೇಳಿದರು.

ಗುಲ್ಬರ್ಗಾ ಮೂಲದ ನಿರ್ಮಾಪಕ ಗುರು ಬಂಡಿ ಮಾತನಾಡುತ್ತಾ, ನಿರ್ದೇಶಕರು ಚಿತ್ರಕ್ಕಾಗಿ ತುಂಬಾ ಎಫರ್ಟ್ ಹಾಕಿದ್ದಾರೆ. ಧೀರ ಸಾಮ್ರಾಟ್ ಅಂದರೆ ಏನು, ಈತ ಯಾರು, ಏಕೆ ಈ ಟೈಟಲ್ ಇಡಲಾಗಿದೆ. ಅನ್ನೋದು ಚಿತ್ರದ ಕೊನೆಯಲ್ಲಿ ತಿಳಿಯುತ್ತದೆ ಎಂದರು. ನಂತರ ಧ್ರುವ ಸರ್ಜಾ ಮಾತನಾಡಿ, 'ಅದ್ದೂರಿ' ಸಿನಿಮಾ ಮಾಡಿದಾಗ ನಾನೂ ಸಹ ಹೊಸಬನಾಗಿದ್ದೆ. ಪವನ್ ಹಾಗೂ ನನ್ನದು ಹೋಗೋ ಬಾರೋ ಗೆಳತನ. ಅಂದು ಟಿವಿಯಲ್ಲಿ ಕೆಲಸ ಮಾಡುತ್ತಿದ್ದ ಪವನ್‌ಗೆ ನನ್ನ ಹಾಡನ್ನು ಜಾಸ್ತಿ ಹಾಕು ಅಂತ ಕಾಡಿಸುತ್ತಿದ್ದೆ. ಆ ಸಮಯದಲ್ಲಿ ಸಾಕಷ್ಟು ಜನ ನನಗೆ ಪ್ರೋತ್ಸಾಹ ಕೊಟ್ಟಿದ್ದರು. ಅದರಲ್ಲಿ ಪವನ್ ಕೂಡ ಒಬ್ಬರು. ಈಗ ಅವರು ನಿರ್ದೇಶಕರಾಗುತ್ತಿದ್ದಾರೆ. ಪ್ರೋತ್ಸಾಹ ಕೊಡುವುದು ನಮ್ಮ ಕರ್ತವ್ಯ. ಹೊಸಬರಲ್ಲೂ ಪ್ರತಿಭೆ ಇರುತ್ತದೆ. ಇಂತಹವರನ್ನು ಬೆಳಸಿದರೆ ಅವರ ಕಲೆಗೆ ಬೆಲೆ ಕೊಟ್ಟಂತಾಗುತ್ತದೆ ಎಂದು ಹೇಳಿದರು.

ಉಳಿದ ತಾರಾಗಣದಲ್ಲಿ ಶೋಭರಾಜ್, ನಾಗೇಂದ್ರ ಅರಸ್, ಬಲ ರಾಜವಾಡಿ, ರಮೇಶ್‌ಭಟ್, ಯತಿರಾಜ್, ಮನಮೋಹನ ರೈ, ಸಂಕಲ್ಪ್ ಪಾಟೀಲ್, ಇಂಚರ, ರವಿರಾಜ್, ಜ್ಯೋತಿ ಮರೂರು ಮುಂತಾದವರಿದ್ದಾರೆ. ರಾಘವ ಸುಭಾಷ್ ಅವರ ಸಂಗೀತ, ವಿನುಮನಸು ಅವರ ಹಿನ್ನಲೆ ಸಂಗೀತ, ವೀರೇಶ್ ಎನ್.ಟಿ.ಎ, ಅರುಣ್ ಸುರೇಶ್ ಅವರ ಕ್ಯಾಮೆರಾವರ್ಕ್ ಈ ಚಿತ್ರಕ್ಕಿದೆ, ಬೆಂಗಳೂರು, ಕನಕಪುರ, ನೆಲಮಂಗಲ ಸುತ್ತಮುತ್ತ ಚಿತ್ರೀಕರಣ ನಡೆಸಲಾಗಿದೆ.

'ಮತ್ತೆ ಮದುವೆ' ಮೊದಲ ಹಾಡು

ತೆಲುಗು ನಟ ನರೇಶ್ ಹಾಗೂ ಕನ್ನಡದ ಹಿರಿಯನಟಿ ಪವಿತ್ರಾ ಲೋಕೇಶ್ ನಟನೆಯ 'ಮತ್ತೆ ಮದುವೆ' ಸಿನಿಮಾದ ಮೊದಲ ಹಾಡು ಇದೀಗ ಬಿಡುಗಡೆಯಾಗಿದೆ. ಇತ್ತೀಚೆಗಷ್ಟೇ ಟೀಸರ್ ಮೂಲಕ ಸದ್ದು ಮಾಡಿದ್ದ ಈ ಚಿತ್ರದ ಉರುಳೋ ಕಾಲವೇ ಎಂಬ ಹಾಡೊಂದರ ಅನಾವರಣವಾಗಿದೆ. ವರದರಾಜು ಚಿಕ್ಕಬಳ್ಳಾಪುರ ಸಾಹಿತ್ಯ ಬರೆದಿರುವ ಈ ಹಾಡಿಗೆ ಸಂತೋಷ್ ವೆಂಕಿ ಅವರು ದನಿಯಾಗಿದ್ದಾರೆ. ನರೇಶ್ ಹಾಗೂ ಪವಿತ್ರಾ ಲೋಕೇಶ್ ಉರುಳೋ ಕಾಲವೇ ಹಾಡಿನಲ್ಲಿ ಅಭಿನಯಿಸಿದ್ದಾರೆ. ಪ್ರತಿಷ್ಠಿತ ವಿಜಯಕೃಷ್ಣ ಮೂವೀಸ್ ಬ್ಯಾನರ್ ಅಡಿ ನರೇಶ್ ಅವರು ನಿರ್ಮಾಣ ಮಾಡಿರುವ 'ಮತ್ತೆ ಮದುವೆ' ಚಿತ್ರಕ್ಕೆ ಎಂ.ಎಸ್. ರಾಜು ಆಕ್ಷನ್ ಕಟ್ ಹೇಳಿದ್ದಾರೆ. ಇದೊಂದು ಫ್ಯಾಮಿಲಿ ಎಂಟರ್‌ಟೈನ್ಮೆಂಟ್ ಸಿನಿಮಾವಾಗಿದ್ದು ಎಂ.ಎಸ್.ರಾಜು ಕಥೆ ಬರೆದು ನಿರ್ದೇಶನ ಮಾಡಿದ್ದಾರೆ. ಜಯಸುಧ ಮತ್ತು ಶರತ್‌ಬಾಬು ಚಿತ್ರದ ಪ್ರಮುಖ ಪಾತ್ರಗಳಿಗೆ ಬಣ್ಣ ಹಚ್ಚಿದ್ದಾರೆ. ವನಿತ ವಿಜಯಕುಮಾರ್, ಅನನ್ಯ ನಾಗೆಲ್ಲ, ರೋಶನ್, ರವಿವರ್ಮ, ಅನ್ನಪೂರ್ಣ, ಭದ್ರಂ, ಯುಕ್ತ, ಪ್ರವೀಣ್ ಯಂಡಮುರಿ ಹಾಗೂ ಮಧು ಒಳಗೊಂಡ ಬಹು ದೊಡ್ಡ ತಾರಾಬಳಗ ಈ ಚಿತ್ರದಲ್ಲಿದೆ. ಸುರೇಶ್ ಬೊಬ್ಬಿಲಿ ಅವರ ಸಂಗೀತ ನಿರ್ದೇಶನ, ಅರುಲ್‌ದೇವ್ ಅವರ ಹಿನ್ನೆಲೆ ಸಂಗೀತ, ಎಂ.ಎನ್ ಬಾಲ್‌ರೆಡ್ಡಿ ಅವರ ಕ್ಯಾಮೆರಾ ವರ್ಕ್, ಜುನೈದ್ ಸಿದ್ದಿಕಿ ಸಂಕಲನ, ಅನಂತ ಶ್ರೀರಾಮ್ ಅವರ ಸಾಹಿತ್ಯ ಈ ಚಿತ್ರಕ್ಕಿದೆ. ಟೀಸರ್ ಮೂಲಕ ಸಂಚಲನ ಸೃಷ್ಟಿಸುತ್ತಿರುವ ಮತ್ತೆ ಮದುವೆ ಕನ್ನಡ ಹಾಗೂ ತೆಲುಗು ಸೇರಿ ಎರಡು ಭಾಷೆಯಲ್ಲಿ ನಿರ್ಮಾಣವಾಗುತ್ತಿದ್ದು, ಇದೇ ತಿಂಗಳಲ್ಲಿ ಥಿಯೇಟರ್ ಅಂಗಳ ಪ್ರವೇಶಿಸಲಿದೆ.

ಚುನಾವಣಾ ವಿಶೇಷ — ಸಿನಿಪದಬಂಧ-472

ಉಮ್ಮತ್ತೂರು ಇಂದುಶೇಖರ್
ಮೊ.9880820462

1				■	■	2		3		
	■	■	■	4			■		■	■
5		6		■	■		■	7		8
	■		■	9			■		■	
	■	■	■		■	■	■	■	■	
	■	10				■	11			
12			■		■	■		■	■	
	■		■	■	13	■		■	14	
■	15			■	16			■	■	
■		■	■	■		■	■	17		
18				■	19			■	■	■

ಹೆಸರು ____________

ವಿಳಾಸ ____________

ದೂರವಾಣಿ ಸಂಖ್ಯೆ ____________

ಎಡದಿಂದ ಬಲಕ್ಕೆ

1. ಮಾಲಾಶ್ರೀ ನೇತೃತ್ವದಲ್ಲಿ ಜನಪ್ರತಿನಿಧಿಗಳ ಆಯ್ಕೆ ಪ್ರಕ್ರಿಯೆ 4
2. ಜನಗಳಿಂದ, ಜನಗಳಿಗಾಗಿ, ಜನರಿಗೋಸ್ಕರ ಇರುವುದೇ?! 5
4. ಮತ ಚಲಾಯಿಸುವಲ್ಲಿ 'ಎಚ್ಚರ' ಇಲ್ಲಿ ತಿರುಗಿದೆ 3
5. ಕುಮಾರಣ್ಣನಿಗೂ, ನೆನಪಿರಲಿ ಪ್ರೇಮ್‌ಗೂ ಏನೀ ಸಂಬಂಧ 4
7. ರಾಮರಾಜ್ಯದಲ್ಲಿ ಕಾಣಿಕೊಂಡ 'ಅಸುರ' 3
9. ಜನರ ಮಾತುಗಳಿಗೆ ಹೀಗೆನ್ನಿ 3
10. ಚುನಾವಣಾ ಕಣದಲ್ಲಿ ಭಾರಿಸಿದ ಯುದ್ಧ ನಗಾರಿ 4
11. ಚುನಾವಣೆಯಲ್ಲಿ ಹಕ್ಕು ಚಲಾಯಿಸುವವನು 4
12. ಸಿದ್ದು-ಸೋಮಣ್ಣನ ರಣಕಣದಲ್ಲಿ ಅಷ್ಟ ದಿಕ್ಪಾಲಕರಲ್ಲಿ ಒಬ್ಬನಿದ್ದಾನೆ 3
14. ದರ್ಶನ್ ರಾಜಕಾರಣಿಗಳ ಸೇವಕ 2
15. ದೀಪಕ್ ಅಭಿನಯದಲ್ಲಿ ರಾಮನಗರ ಜಿಲ್ಲೆಯ ಒಂದು ಕ್ಷೇತ್ರ 3
16. ಬೇರೆಯವರ ಮತ ಚಲಾಯಿಸಿದರೆ ಇಲ್ಲಿ ತಿರುಗಿರುವುದು ಅಸಲಿಯಲ್ಲ 3
17. ರಾಮನಗರದ ಜೆಡಿಎಸ್ ಅಭ್ಯರ್ಥಿ 'ಜಾಗ್ವಾರ್' 3
18. ಶ್ರೀಕಂಠೇಶ್ವರ ಸನ್ನಿಧಿಯ 'ಕೈ' ಅಭ್ಯರ್ಥಿ ಮಿನುಗುವ ನಕ್ಷತ್ರ 4
19. ನ್ಯಾಯಯುತ ಮತದಾನಕ್ಕೆ ಮಾಡಿದ 'ಪ್ರಮಾಣ' 3

ಮೇಲಿನಿಂದ ಕೆಳಕ್ಕೆ

1. ಕ್ಷೇತ್ರದಲ್ಲದವರು ಅಭ್ಯರ್ಥಿಯಾದರೆ ಲೋಕೇಶ್ ಅಭಿಯನದಲ್ಲಿ ಹೀಗೆನ್ನಲು ತಪ್ಪೇನಿಲ್ಲ 8
2. ರಾಮಕೃಷ್ಣ ಹೆಗಡೆ ಅಭಿನಯದಲ್ಲಿ ಜನಬಲವಿದೆ 4
3. ಡೈನಾಮಿಕ್ ಹೀರೋನ ಜನತೆಯ ನಾಡು 4
6. ಕನ್ನಡದ 'ಪಾರ್ಟಿ' 2
8. ಮಾಜಿ ಮುಖ್ಯಮಂತ್ರಿಯೊಬ್ಬರ ಪುತ್ರರ ಸ್ಪರ್ಧೆ ವಿಷ್ಣು-ರಜನಿ ಚಿತ್ರ ನೆನಪಿಸುತ್ತಿದೆ 8
9. ಚುನಾವಣೆಯಲ್ಲಿ ಗೆಲುವಿನ ನಗಾರಿ ಭಾರಿಸಲು ಶಂಕರ್‌ನಾಗ್ ಅಭಿನಯವಿದೆ 4
10. ಶಿವಣ್ಣ ಹೇಳಿದಂತೆ ಪ್ರಬಲ ಸ್ಪರ್ಧೆ ಯುದ್ಧಭೂಮಿಯೂ ಹೌದು! 4
11. ಎಸ್.ಎಲ್.ಭೈರಪ್ಪನವರ ಕಾದಂಬರಿಯಲ್ಲಿ ಹಾಕಿದ ಓಟು 4
13. ಮೇ '13'ಕ್ಕೆ ಜೈಗದೀಶ್-ಆರತಿ ಅಭಿನಯದಲ್ಲಿ 'ರಿಸಲ್ಟ್' ಇದೆ 4
15. ಏನಾದರೂ ಆಗು ಮೊದಲು ನೀ 'ಮನುಷ್ಯ'ನಾಗು 3

ವಿಜೇತರು: ಆರ್.ಮಧುಸೂದನ್, #85, 5ನೇ ಮೇನ್, 2ನೇ ಹಂತ, ಎಂ.ಬ್ಲಾಕ್, ಕುವೆಂಪುನಗರ, ಮೈಸೂರು-570023

ಸಿನಿ ಪದಬಂಧ 471ರ ಸರಿ ಉತ್ತರ

ಬೂ	ದಿ	ಮು	ಚ್ಚಿ	ದ	ಕೆಂ	ಡ	■	ಬಂ	■	ಕೆ
■	■	ಗಿ	■	■	ಪು	■	■	ಧ	■	ಸ
ಜ	ಯ	ಲ	ಕ್ಷ್ಮಿ	■	ಮು	ಕುಂ	ದ	ಮು	ರಾ	ರಿ
■	■	ಚಂ	■	■	ಗಿ	■	■	ಕ್ತ	■	ನ
ಕಾ	ದಂ	ಬ	ರಿ	■	ಲು	ಗ	ಹ	■	■	ಕ
ವೇ	■	ನ	■	■	■	■	■	ಮ	■	ಮ
ರಿ	■	■	ಸು	ಮಿ	ತ್ರ	■	ಜ	ನ	ಬ	ಲ
ತೀ	■	ಮೂ	■	■	ರಿ	■	■	ವೇ	■	■
ರ	ತ್ನ	ನ್	ಪ್ರ	ಪಂ	ಚ	■	ಕ	ಮಂ	ಡ	ಲ
ದ	■	ಮೂ	■	■	ಕ್ತ	■	■	ದಿ	■	■
ಲ್ಲಿ	■	ನ್	■	ಮ	ರ	ಳು	ಸ	ರ	ಪ	ಣಿ

ಗದ್ದಿಗೆಯಲ್ಲಿ ಹರೀಶ್‌ಗೌಡರಿಗೆ ಭರ್ಜರಿ ಬೆಂಬಲ



ಹುಣಸೂರು, ಮೇ 4– ಚುನಾವಣಾ ಪ್ರಚಾರಕ್ಕೆ ಆಗಮಿಸಿದ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಜಿ.ಡಿ. ಹರೀಶ್‌ಗೌಡರಿಗೆ ತಾಲೂಕಿನ ಗದ್ದಿಗೆ ಗ್ರಾಮದಲ್ಲಿ ಭರ್ಜರಿ ಸ್ವಾಗತ ನೀಡಲಾಯಿತು.

ಗುರುವಾರ ಬೆಳಗ್ಗೆ 8 ಗಂಟೆಗೆ ಗ್ರಾಮಕ್ಕೆ ಆಗಮಿಸಿದ ಹರೀಶ್‌ಗೌಡರನ್ನು ಜೆಡಿಎಸ್ ಕಾರ್ಯಕರ್ತರು, ಮುಖಂಡರು, ಅಭಿಮಾನಿಗಳು ಹಾಗೂ ಗ್ರಾಮಸ್ಥರು ಮಂಗಳವಾದ್ಯ ದೊಂದಿಗೆ ಪಟಾಕಿ ಸಿಡಿಸಿ, ಗ್ರಾಮದ ರಸ್ತೆ ಯುದ್ದಕ್ಕೂ ಪುಷ್ಪವೃಷ್ಟಿಗೈದು ಅದ್ದೂರಿಯಾಗಿ ಸ್ವಾಗತಿಸಿದರು.

ಇದೇ ವೇಳೆ ಹರೀಶ್‌ಗೌಡ ಗ್ರಾಮದ ಕೆಂಡಗಣ್ಣೇಶ್ವರ, ಮಹದೇಶ್ವರ ದೇವಾಲ ಯಗಳಲ್ಲಿ ಪೂಜೆ ಸಲ್ಲಿಸಿದರು. ಬಳಿಕ ಗ್ರಾಮಸ್ಥರು ಹಾಗೂ ಜಿಟಿಡಿ ಅಭಿಮಾನಿಗಳು ಬೃಹತ್ ಹಾರ ಹಾಕಿದರು. ಈ ಸಂದರ್ಭ ಶಾಸಕ ಜಿ.ಟಿ.ದೇವೇಗೌಡ, ಜಿ.ಡಿ. ಹರೀಶ್‌ಗೌಡರ ಅಭಿವೃದ್ಧಿ ಕಾರ್ಯ ಮೆಚ್ಚಿ ಹಲವರು ಕಾಂಗ್ರೆಸ್ ತೊರೆದು ಜೆಡಿಎಸ್ ಸೇರ್ಪಡೆಗೊಂಡರು. ಬಳಿಕ ಮಾತನಾಡಿದ ಹರೀಶ್‌ಗೌಡ, ಶಾಸಕನಾದ ಬಳಿಕ ತಾಲೂಕಿನ ಗ್ರಾಮೀಣ ಪ್ರದೇಶಗಳಿಗೆ ಏತ ನೀರಾವರಿ ಯೋಜನೆಗಳ ಮೂಲಕ ನೀರು ಹರಿಸಿ ಕೆರೆಕಟ್ಟೆ ತುಂಬಿ ಸಲು ಕ್ರಮ ವಹಿಸುತ್ತೇನೆ. ಹನಗೋಡು ಅಚ್ಚುಕಟ್ಟು ಪ್ರದೇಶದ ಸುತ್ತಮುತ್ತಲಿನ ಜಮೀನುಗಳಿಗೆ ನೀರು ಒದಗಿಸಲು ಶ್ರಮಿಸುತ್ತೇನೆ ಎಂದು ಭರವಸೆ ನೀಡಿದರು. ಈ ವೇಳೆ ತಾಲೂಕು ಜೆಡಿಎಸ್ ಅಧ್ಯಕ್ಷ ದೇವರಾಜ್ ಒಡೆಯರ್, ಜಿಪಂ ಮಾಜಿ ಸದಸ್ಯ ಸುರೇಂದ್ರ, ಸತೀಶ್, ಪಾಪಣ್ಣ, ಕೆಂಪೇಗೌಡ, ವೆಂಕಟೇಶ್, ಬಸವಲಿಂಗಯ್ಯ, ಸುರೇಶ್, ವೆಂಕಟೇಶ್ ಮತ್ತಿತರರಿದ್ದರು.

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1 ಪ್ರವೀಣ (ಕ): ಬೆ.10.30ಕ್ಕೆ, ಗುರುದೇವ್ ಹೊಯ್ಸಳ (ಕ): ಮ.1.05ಕ್ಕೆ, ದಸರಾ (ತೆ): ಮ.3.45ಕ್ಕೆ, ರಾವಣಾಸುರ (ತೆ): ಸಂ.6.55ಕ್ಕೆ, ರಾ.9.45ಕ್ಕೆ.

ಸ್ಕ್ರೀನ್ 2 ದಿ ಸೂಪರ್ ಮಾರಿಯೋ ಬ್ರದರ್ಸ್ ಮೂವಿ (3ಡಿ)(ಇಂ): ಬೆ.11ಕ್ಕೆ, ಮ.1.05ಕ್ಕೆ, ಮ.3.10ಕ್ಕೆ, ದಿ ಪೋಪ್ಸ್ ಎಕ್ಸಾರ್ಸಿಸ್ಟ್ (ಇಂ): ಸಂ.5.10ಕ್ಕೆ, ರಾ.7.30ಕ್ಕೆ, ರಾ.9.45ಕ್ಕೆ.

ಸ್ಕ್ರೀನ್ 3 ರಾಮಾಚಾರಿ 2.0 (ಕ): ಬೆ.10.45ಕ್ಕೆ, ಆಗಸ್ಟ್ 16 1947(ತ): ಮ.1.30ಕ್ಕೆ, ಪೆಂಟಗನ್ (ಕ): ಸಂ.4.20ಕ್ಕೆ, ಗುಮ್ರಾಹ್ (ಹಿಂ): ರಾ.7.30ಕ್ಕೆ, ರಾ.10.10ಕ್ಕೆ.

ಸ್ಕ್ರೀನ್ 4 ಗುರುದೇವ್ ಹೊಯ್ಸಳ (ಕ): ಬೆ.10.50ಕ್ಕೆ, ರಾ.7.40ಕ್ಕೆ, ರಾ.10.15ಕ್ಕೆ, ವೀರಂ (ಕ): ಮ.1.30ಕ್ಕೆ, ಸಂ.4.35ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1 ಗುರುದೇವ್ ಹೊಯ್ಸಳ (ಕ): ಬೆ.10.20ಕ್ಕೆ, ವೀರಂ (ಕ): ಮ.1.05ಕ್ಕೆ, ರಾ.7.15ಕ್ಕೆ, ರಾವಣಾಸುರ (ತೆ): ಸಂ.4.20ಕ್ಕೆ, ರಾ.10.30ಕ್ಕೆ.

ಸ್ಕ್ರೀನ್ 2 ದಿ ಪೋಪ್ಸ್ ಎಕ್ಸಾರ್ಸಿಸ್ಟ್ (ಇಂ): ಬೆ.10.25ಕ್ಕೆ, ದಿ ಸೂಪರ್ ಮಾರಿಯೋ ಬ್ರದರ್ಸ್ ಮೂವಿ (3ಡಿ)(ಇಂ): ಮ.12.45ಕ್ಕೆ, ಸಂ.5.40ಕ್ಕೆ, ರಾ.7.50ಕ್ಕೆ, ರಾಮಾಚಾರಿ 2.0(ಕ): ಮ.2.55ಕ್ಕೆ, ದಸರಾ (ತೆ): ರಾ.10ಕ್ಕೆ.

ಸ್ಕ್ರೀನ್ 3 ವೀರಂ (ಕ): ಬೆ.10.10ಕ್ಕೆ, ರಾವಣಾಸುರ (ತೆ): ಮ.1.25ಕ್ಕೆ, ಗುರುದೇವ ಹೊಯ್ಸಳ (ಕ): ಸಂ.4.20ಕ್ಕೆ, ರಾ.9.50ಕ್ಕೆ, ನಮ್ ನಾಣಿ ಮದುವೆ ಪ್ರಸಂಗ (ಕ): ರಾ.7.05ಕ್ಕೆ.

ಸ್ಕ್ರೀನ್ 4 ಪ್ರವೀಣ (ಕ): ಬೆ.11.10ಕ್ಕೆ, ಗುರುದೇವ ಹೊಯ್ಸಳ (ಕ): ಮ.1.45ಕ್ಕೆ, ದಿ ಪೋಪ್ಸ್ ಎಕ್ಸಾರ್ಸಿಸ್ಟ್ (ಇಂ): ಸಂ.4.30ಕ್ಕೆ, ರಾ.10.20ಕ್ಕೆ, ಪೆಂಟಗನ್ (ಕ): ಸಂ.6.50ಕ್ಕೆ.

ಪಿವಿಆರ್ ಸಿನಿಮಾಸ್

PVR CINEMAS

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಮಂಡಲ (ಕ): ಮ.2.15ಕ್ಕೆ, 1 ರಾಬರಿ ಕಥೆ (ಕ): ಸಂ.4.50ಕ್ಕೆ, ಚೌಕಾಬಾರ (ಕ): ರಾ.7.50ಕ್ಕೆ, ಕ್ರಿಡ್ 3 (ಇಂ): ಬೆ.11.35ಕ್ಕೆ, ತು ಜೂಥಿ ಮೇನ್ ಮಕ್ಕರ್ (ಹಿಂ): ಬೆ.8.30ಕ್ಕೆ, ಮ.12ಕ್ಕೆ, ಮ.3.30ಕ್ಕೆ, ರಾ.7ಕ್ಕೆ, ರಾ.10.30ಕ್ಕೆ, ತು ಜೂಥಿ ಮೇನ್ ಮಕ್ಕರ್ (ಹಿಂ): ಬೆ.9.30ಕ್ಕೆ, ಬೆ.11ಕ್ಕೆ, ಮ.1ಕ್ಕೆ, ಮ.2.30ಕ್ಕೆ, ಸಂ.4.30ಕ್ಕೆ, ಸಂ.6ಕ್ಕೆ, ರಾ.8ಕ್ಕೆ, ರಾ.9.30ಕ್ಕೆ, ತುರಮುಖಂ (ಮ): ರಾ.10.30ಕ್ಕೆ, ಅಜಿಲನ್ ಕಿಂಗ್ ಆಫ್ ದಿ ಓಷನ್ (ತ): ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ, ಸ್ಕ್ರೀಮ್ 6 (ಇಂ): ಮ.2.45ಕ್ಕೆ, ರಾ.7.45ಕ್ಕೆ, 65 (ಇಂ): ಮ.12.30ಕ್ಕೆ, ಸಂ.5.30ಕ್ಕೆ, ರಾ.10.30ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ಉಗ್ರಂ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ರಾಘವೇಂದ್ರ ಸ್ಟೋರ್ (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಡೇ ಅಂಡ್ ಸಮ್‌ಓನ್ (ತೆ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಕಬ್ಜ(ಹಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಪೆಂಟಗಂ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಪಿಎಸ್–2 (ತ)	4 ಪ್ರದರ್ಶನಗಳು
ರಾಜ್‌ಕಮಲ್	
ಪಠಾಣ್ (ಹಿ)	4 ಪ್ರದರ್ಶನಗಳು
ಸಂಗಂ	
ರಾಮಬಾಣಂ (ತೆ)	4 ಪ್ರದರ್ಶನಗಳು
ಲಿಡೋ	
ಉಂಡೆನಾಮ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ರಾಮಬಾಣಂ (ತೆ)	4 ಪ್ರದರ್ಶನಗಳು
ಪ್ರಭಾ	
ಹೊಯ್ಸಳ(ಕ)	4 ಪ್ರದರ್ಶನಗಳು

ಅಭಿವೃದ್ಧಿ ನೋಡಿ ಮತದಾರರು ಹರ್ಷವರ್ಧನ್ ಗೆಲ್ಲಿಸಿ



ಮಲ್ಕುಂಡಿ, ಮೇ 4– ಕ್ಷೇತ್ರದ ಮತದಾರರು ಅಭಿವೃದ್ಧಿ ನೋಡಿ ಚುನಾವಣೆಯಲ್ಲಿ ಶಾಸಕ, ಬಿಜೆಪಿ ಅಭ್ಯರ್ಥಿ ಬಿ.ಹರ್ಷವರ್ಧನ್ ಅವರನ್ನು ಗೆಲ್ಲಿಸಲಿದ್ದಾರೆ ಎಂದು ತಾಲೂಕು ಬಿಜೆಪಿ ಅಧ್ಯಕ್ಷ ಪಿ.ಮಹೇಶ್ ವಿಶ್ವಾಸ ವ್ಯಕ್ತಪಡಿಸಿದರು.

ನಂಜನಗೂಡು ಕ್ಷೇತ್ರದ ಕಣೇನೂರು, ಹುಲ್ಲಹಳ್ಳಿ, ಮಾದನಹಳ್ಳಿ, ನೆಲ್ಲಿತಾಳಪುರ, ಮೊಬ್ಬಳ್ಳಿ ಸೇರಿದಂತೆ ವಿವಿಧ ಗ್ರಾಮಗಳ ವೀರಶೈವ ಮುಖಂಡರನ್ನು ಭೇಟಿ ಮಾಡಿ ಮತಯಾಚಿಸಿ ಮಾತನಾಡಿದ ಅವರು, ಶಾಸಕ ಬಿ.ಹರ್ಷವರ್ಧನ್ ಅವರನ್ನು ಈ ಬಾರಿ ಗೆಲ್ಲಿಸುವ ಮೂಲಕ ರಾಜಕೀಯ ನಿವೃತ್ತಿ ಪಡೆದಿರುವ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪನವರಿಗೆ ಕೊಡುಗೆ ನೀಡುವ ಜವಾಬ್ದಾರಿ ವೀರಶೈವ ಮುಖಂಡರ ಮೇಲಿದೆ. ಕ್ಷೇತ್ರದ ಪ್ರತಿಯೊರ್ವ ಕಾರ್ಯಕರ್ತ ಬಿಜೆಪಿ ಸರ್ಕಾರ ಹಾಗೂ ಶಾಸಕ ಬಿ.ಹರ್ಷವರ್ಧನ್ ಮಾಡಿರುವ ಅಭಿವೃದ್ಧಿ ಕಾರ್ಯಗಳ ಬಗ್ಗೆ ಮತದಾರರಿಗೆ ತಿಳಿಸಬೇಕಿದೆ. ಕಳೆದ 75 ವರ್ಷಗಳಿಂದ ಆಡಳಿತ ನಡೆಸಿದ ಕಾಂಗ್ರೆಸ್ ಸರ್ಕಾರ ಇಲ್ಲಿವರೆಗೆ ವೀರಶೈವ ಲಿಂಗಾಯತ ಸಮುದಾಯದ ಅಭಿವೃದ್ಧಿಗೆ ಮುಂದಾಗಿರಲಿಲ್ಲ. ಶಾಸಕ ಹರ್ಷವರ್ಧನ್ ನೂರಾರು ಕೋಟಿ ಅನುದಾನ ತಂದು ಕ್ಷೇತ್ರದ ಜೊತೆಗೆ ಸಮುದಾಯದ ಅಭಿವೃದ್ಧಿಗೆ ಶ್ರಮಿಸಿದ್ದಾರೆ. ಹೀಗಾಗಿ ಪ್ರತಿಯೊರ್ವ ವೀರಶೈವ ಮುಖಂಡರು ಈ ಬಾರಿ ಪಕ್ಷ ಅಧಿಕಾರಕ್ಕೆ ತರಲು ಶ್ರಮಿಸಬೇಕು ಎಂದರು.

ಜಿಲ್ಲಾ ಬಿಜೆಪಿ ಉಪಾಧ್ಯಕ್ಷ ಹೆಚ್.ಎಂ. ಕೆಂಡಗಣ್ಣಪ್ಪ, ತಾಲೂಕು ಪ್ರಧಾನ ಕಾರ್ಯದರ್ಶಿ ಪುಟ್ಟಸ್ವಾಮಿ, ಹುಲ್ಲಹಳ್ಳಿ ಶಕ್ತಿ ಕೇಂದ್ರದ ಅಧ್ಯಕ್ಷ ಪರಶಿವಮೂರ್ತಿ, ತಾಪಂ ಮಾಜಿ ಸದಸ್ಯ ಬಸವರಾಜ್, ಶ್ಯಾಮ್ ಪಟೇಲ್, ಮಂಜು, ಗಿರೀಶ್ ಹಾಗೂ ಇತರರಿದ್ದರು.

ಕಳೆದ ಚುನಾವಣೆಯಲ್ಲಿ ಕೊಟ್ಟ ಮಾತು ಉಳಿಸಿಕೊಂಡಿದ್ದೇನೆ

ವಿವಿಧ ಗ್ರಾಮಗಳಲ್ಲಿ ಅಶ್ವಿನ್ ಕುಮಾರ್ ಪ್ರಚಾರ



ತಿ.ನರಸೀಪುರ, ಮೇ 4– ಕಳೆದ ಚುನಾವಣಾ ಪೂರ್ವದಲ್ಲಿ ಗ್ರಾಮಸ್ಥರಿಗೆ ನೀಡಿದ್ದ ಭರವಸೆ ಈಡೇರಿಸುವ ಮೂಲಕ ಕೊಟ್ಟ ಮಾತನ್ನು ಉಳಿಸಿಕೊಂಡಿದ್ದೇನೆ ಎಂದು ಶಾಸಕ, ಜೆಡಿಎಸ್ ಅಭ್ಯರ್ಥಿ ಎಂ.ಅಶ್ವಿನ್ ಕುಮಾರ್ ತಿಳಿಸಿದರು.

ಕ್ಷೇತ್ರ ವ್ಯಾಪ್ತಿಯ ಕರೋಹಟ್ಟಿ, ಕೇತಹಳ್ಳಿ, ಹೊಸೂರು ಹುಂಡಿ, ಧರ್ಮಯ್ಯನಹುಂಡಿ, ಯರಗನಹಳ್ಳಿ, ಬನ್ನಹಳ್ಳಿ, ಮೂಗೂರು, ಹೊಸಹಳ್ಳಿ, ಮೂಗೂರು ಮೋಳೆ, ಆದಿ ಬೆಟ್ಟಹಳ್ಳಿ, ಹ್ಯಾಕನೂರು, ಯಡೇಹುಂಡಿ, ವಾಟಾಳು, ಸುಜ್ಜಲೂರು, ಕುರುಬೂರು, ಕೊತ್ತೇಗಾಲ ಎಂ.ಸಿ.ಹಳ್ಳಿ, ಕನ್ನಹಳ್ಳಿ, ಮಾಡ್ರಹಳ್ಳಿ ಗ್ರಾಮಗಳ ಮನೆ ಮನೆಗೆ ತೆರಳಿ ಮತಯಾಚಿಸಿ ಮಾತನಾಡಿದರು.

ಕಳೆದ ಚುನಾವಣೆಯಲ್ಲಿ ನನ್ನನ್ನು ಅಧಿಕ ಮತಗಳಿಂದ ಗೆಲ್ಲಿಸಿದ ನಿಮ್ಮ ಪ್ರೀತಿ, ವಿಶ್ವಾಸಕ್ಕೆ ಬೆಲೆ ಕಟ್ಟಲು ಸಾಧ್ಯವಿಲ್ಲ. ನನ್ನ ಅಧಿಕಾರಾವಧಿಯಲ್ಲಿ ಕ್ಷೇತ್ರದ ಜನತೆಯೊಂದಿಗೆ ಒಡನಾಟ ಇಟ್ಟುಕೊಂಡು ಅವರ ಕಷ್ಟ ಸುಖಗಳಿಗೆ ಸ್ಪಂದಿಸುವ ಕೆಲಸ ಮಾಡಿದ್ದೇನೆ. ಅಲ್ಲದೇ ನಿಮ್ಮಲ್ಲೇ ಒಬ್ಬನಾಗಿದ್ದುಕೊಂಡು ಪ್ರಾಮಾಣಿಕವಾಗಿ ಕ್ಷೇತ್ರದ ಅಭಿವೃದ್ಧಿಯೊಂದಿಗೆ ಜನಸೇವೆ ಮಾಡುತ್ತಾ ಬಂದಿದ್ದೇನೆ. ತಾವೆಲ್ಲಾ ನನ್ನ ಮೇಲೆ ಇಟ್ಟಿರುವ ಪ್ರೀತಿ ವಿಶ್ವಾಸಕ್ಕೆ ಪೂರಕವಾಗಿ ಕೆಲಸ ಮಾಡಿದ್ದೇನೆ. ಜಾತಿ, ಮತ ಎಂಬ ಭೇದಬಾವ ಮಾಡದೇ ಎಲ್ಲರನ್ನು ಸಮನಾಗಿ ಕಂಡಿದ್ದೇನೆ. ಈಗ ಮತ್ತೊಂದು ಅವಕಾಶಕ್ಕಾಗಿ ನಿಮ್ಮ ಮುಂದೆ ಬಂದಿದ್ದೇನೆ. ವಿಪಕ್ಷದವರ ಮಾತಿಗೆ ಕಿವಿಗೊಡದೇ ಸದಾ ನಿಮ್ಮೊಂದಿಗೆ ಒಬ್ಬನಾಗಿರುವ ನನಗೆ ಮತ್ತೊಂದು ಅವ ಕಾಶ ಮಾಡಿಕೊಡಿ. ಮುಂದಿನ ಅವಧಿಯಲ್ಲಿ ಮುಂದೆ ಆಗಬೇಕಾದ ಕೆಲಸಗಳ ಜವಾಬ್ದಾರಿ ತೆಗೆದುಕೊಂಡು ಕೆಲಸ ಮಾಡುತ್ತೇನೆ ಎಂದರು.

ಹೆಚ್.ಡಿ.ಕುಮಾರಸ್ವಾಮಿ ಅವರು ಮತ್ತೆ ಮುಖ್ಯಮಂತ್ರಿಯಾಗಲಿದ್ದು, ರಾಜ್ಯದ ಜನತೆ ಕಲ್ಯಾಣಕ್ಕಾಗಿ ಪಂಚರತ್ನ ಯೋಜನೆಗೆ ಚಾಲನೆ ದೊರೆಯಲಿದೆ. ಪ್ರತಿಯೊಂದು ಕುಟುಂಬಕ್ಕೆ ತಿಂಗಳಿಗೆ ಕನಿಷ್ಠ 20 ಸಾವಿರ ಆದಾಯ ದೊರಕಿಸಿಕೊಡುವ ಯೋಜನೆ, ವಯೋವೃದ್ಧರಿಗೆ ಮಾಸಾಶನವಾಗಿ 5 ಸಾವಿರ ರೂ. ನೀಡುವ ಯೋಜನೆ ಜಾರಿಗೆ ತರಲಿದ್ದಾರೆ ಎಂದರು.

ಈ ವೇಳೆ ಪ್ರತಿ ಗ್ರಾಮದಲ್ಲೂ ಶಾಸಕರಿಗೆ ನಿರೀಕ್ಷೆಗೂ ಮೀರಿದ ಜನ ಬೆಂಬಲ ದೊರಕಿತು. ಪಟಾಕಿ ಸಿಡಿಸಿ, ಬೃಹತ್ ಗಾತ್ರದ ಹೂವಿನ ಹಾರ ಹಾಕಿ ಗ್ರಾಮಸ್ಥರು ಶಾಸಕರಿಗೆ ಸ್ವಾಗತ ಕೋರಿದರು.

ಈ ವೇಳೆ ಜೆಡಿಎಸ್ ಕ್ಷೇತ್ರಾಧ್ಯಕ್ಷ ಸಿ.ಬಿ. ಹುಂಡಿ ಚಿನ್ನಸ್ವಾಮಿ, ವೀರಶೈವ ಮಹಾಸಭಾ ಅಧ್ಯಕ್ಷ ತೊಟ್ಟವಾಡಿ ಮಹದೇವಸ್ವಾಮಿ, ಉಕ್ಕಲಗೆರೆ ಕುಮಾರ್, ವಿಚಾರವಾದಿ ಪ್ರಭುಸ್ವಾಮಿ, ಗ್ರಾಪಂ ಮಾಜಿ ಅಧ್ಯಕ್ಷ ಬನ್ನಳ್ಳಿಹುಂಡಿ ಶಿವಕುಮಾರ್, ಯುವ ಮುಖಂಡ ಸಂಪತ್, ಪಿಕಾರ್ಡ್ ನಿರ್ದೇಶಕ ಮಹದೇವ ಸ್ವಾಮಿ, ಗ್ರಾಪಂ ಸದಸ್ಯ ಕೈಯ್ಯಂಬಳ್ಳಿ ಅಶೋಕ್, ಶಂಭುದೇವನಪುರ ರಮೇಶ್, ಪ್ರಭು, ಪರಮೇಶ್, ಕುಮಾರ, ಕನ್ನಳ್ಳಿ ಶಿವಕುಮಾರ್, ರವಿ, ನಾಗರಾಜು, ರಾಜೇಶ್ ಮತ್ತಿತರಿದ್ದರು.

ಕ್ಷೇತ್ರದ ಅಭಿವೃದ್ಧಿಗೆ ಮತ್ತೊಮ್ಮೆ ಅಧಿಕಾರ ನೀಡಿ: ಅನಿಲ್




ಸರಗೂರು, ಮೇ 4– ಹೆಚ್.ಡಿ.ಕೋಟೆ ಮತ್ತು ಸರಗೂರು ತಾಲೂಕುಗಳನ್ನು ರಾಜ್ಯದಲ್ಲೇ ಮಾದರಿ ತಾಲೂಕು ಮಾಡಲು ಮತ್ತೊಮ್ಮೆ ಅಧಿಕಾರ ನೀಡಿ ಎಂದು ಶಾಸಕ ಅನಿಲ್ ಚಿಕ್ಕಮಾದು ಮನವಿ ಮಾಡಿದರು.

ಪಟ್ಟಣದಲ್ಲಿ ಬೃಹತ್ ರೋಡ್ ಶೋ ನಡೆಸಿ, ಮತಯಾಚಿಸಿ ಮಾತಾಡಿದ ಅವರು, ಕ್ಷೇತ್ರದಲ್ಲಿ ಕಾಂಗ್ರೆಸ್ ಬಲಿಷ್ಠವಾಗಿದ್ದು, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಪಿಸಿಸಿ ಕಾರ್ಯಾಧ್ಯಕ್ಷ ಡಿ.ಕೆ.ಶಿವಕುಮಾರ್ ನೇತೃತ್ವದಲ್ಲಿ ಈ ಬಾರಿ ಕಾಂಗ್ರೆಸ್ ಸ್ಪಷ್ಟ ಬಹುಮತ ಗಳಿಸಲಿದೆ. ಇದಕ್ಕೆ ಹೆಚ್.ಡಿ. ಕೋಟೆ ಕ್ಷೇತ್ರದಲ್ಲಿ ಪಕ್ಷ ಗೆಲುವು ಸಾಧಿಸುವ ಮೂಲಕ ಮುನ್ನುಡಿ ಬರೆಯಲಿದೆ. ಇದರಲ್ಲಿ ಯಾವುದೇ ಸಂದೇಹವಿಲ್ಲ. ಹೀಗಾಗಿ ಪಕ್ಷದ ಕಾರ್ಯಕರ್ತರು ಒಗ್ಗೂಡಿ ದುಡಿಯಬೇಕು ಎಂದು ಸಲಹೆ ನೀಡಿದರು.

ಇದಕ್ಕೂ ಮುನ್ನಾ, ಸಂತೇಮಾಸ್ತಮ್ಮನವರ ದೇವಾಲಯದಲ್ಲಿ ಪೂಜೆ ಸಲ್ಲಿಸಿದ ಕಾಂಗ್ರೆಸ್ ಕಾರ್ಯಕರ್ತರು ಶಾಸಕ ಅನಿಲ್ ನೇತೃತ್ವದಲ್ಲಿ ಬಸವೇಶ್ವರ ದೇವಸ್ಥಾನ, ಚಿಕ್ಕದೇವಮ್ಮನವರ ಸರ್ಕಲ್, ಮಹಾವೀರ ಸರ್ಕಲ್ ಮೂಲಕ ಬಸ್ ನಿಲ್ದಾಣ, ಪಟ್ಟಣದ ಎಲ್ಲಾ ವಾರ್ಡ್‌ಗಳಲ್ಲಿ ಭರ್ಜರಿ ರೋಡ್ ಶೋ ನಡೆಸಿದರು.

ಈ ವೇಳೆ ಜಿಪಂ ಮಾಜಿ ಸದಸ್ಯ ಪಿ. ರವಿ, ಭಾಗ್ಯಲಕ್ಷ್ಮೀ, ತಾಲೂಕು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಾದಪ್ಪ, ಏಜಾಜ್ ಪಾಷ, ಯೂತ್ ಕಾಂಗ್ರೆಸ್ ಅಧ್ಯಕ್ಷ ಶಿವರಾಜು, ಟೌನ್ ಅಧ್ಯಕ್ಷ ನಾಗರಾಜು, ಮಾಜಿ ಅಧ್ಯಕ್ಷ ಮಂಜುನಾಥ್, ಕಾರ್ಯದರ್ಶಿ ಚಲುವರಾಜ್, ಪಪಂ ಸದಸ್ಯ ಶ್ರೀನಿವಾಸ್, ಚೆಲುವಕೃಷ್ಣ, ರಮೇಶ್, ಮಾಜಿ ಪುರಸಭಾ ಅಧ್ಯಕ್ಷ ಎಸ್.ಬಿ.ಸತೀಶ್ ಕುಮಾರ್, ಜ್ಯೋತಿ, ಎಸ್.ಎಸ್.ಪ್ರಭುಸ್ವಾಮಿ, ಬ್ರಹ್ಮದೇವಯ್ಯ, ಅಭಿಕುಮಾರ್, ರಂಗನಾಥ, ಕೆಂಡಗಣ್ಣಸ್ವಾಮಿ, ಉದ್ಯಮಿ ಸಿರಾಜ್, ಕಟ್ಟಡ ಕಾರ್ಮಿಕರ ಸಂಘದ ಅಧ್ಯಕ್ಷ ಶಿವು, ಎಪಿಎಂಸಿ ಮಾಜಿ ಅಧ್ಯಕ್ಷ ಸಿದ್ದರಾಜು, ಡಿ.ಪಿ. ನಟರಾಜು, ಭೀಮರಾಜ್, ಗುಣಪಾಲ್, ಮಾದಪ್ಪ, ಹರಿದಾಸ್, ಬಸವರಾಜು, ಮಂಜುನಾಥ್, ಎಸ್.ಬಿ.ನಾಗರಾಜು, ಮುಕುಂದ ರಾಜು, ಚನ್ನಪ್ಪ, ಗುರು, ಹೆಚ್.ಸಿ.ಮಂಜುನಾಥ್, ಸತೀಶ್‌ಗೌಡ, ಜಲೀಲ್, ಸುಬಾನ್, ಇದಾಯಾತ್, ಅಮೀರ್ ಸೊಹೇಲ್, ಮುಖಾಫಿ ಸೇರಿದಂತೆ ಇನ್ನಿತರರಿದ್ದರು.



ಪಿರಿಯಾಪಟ್ಟಣ ತಾಲೂಕಿನ ಹಲಗನಹಳ್ಳಿ ಗ್ರಾಮದ ಮುಸ್ಲಿಂ ಮುಖಂಡರಾದ ಇರ್ಫಾನ್ ಪಾಷಾ ಹಾಗೂ ಅವರ ಬೆಂಬಲಿಗರು ಗುರುವಾರ ಮಾಜಿ ಶಾಸಕ ಕೆ.ವೆಂಕಟೇಶ್ ಸಮ್ಮುಖದಲ್ಲಿ ಜೆಡಿಎಸ್ ತೊರೆದು ಕಾಂಗ್ರೆಸ್ ಸೇರ್ಪಡೆಗೊಂಡರು. ಈ ವೇಳೆ ಬೆಟ್ಟದಪುರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರೆಹಮದ್ ಜಾನ್ ಬಾಬು, ತಾಪಂ ಮಾಜಿ ಸದಸ್ಯ ಕುಂಜಪ್ಪ ಕಾರ್ನಾಡ್, ಮಾಜಿ ಗ್ರಾಪಂ ಅಧ್ಯಕ್ಷ ಇಕ್ಬಲ್ ಶರೀಫ್, ಹಲಗನಹಳ್ಳಿ ಗ್ರಾಪಂ ಸದಸ್ಯ ಸೋಹೆಲ್ ಪಾಷಾ, ಅಬ್ದುಲ್, ಜಾವೀದ್, ನಮ್ರಾಜ್ ಖಾನ್, ಮುಬಾರಕ್ ಪಾಷಾ, ಅಜದ್ ಪಾಷಾ, ರಫೀಕ್ ಅಹಮದ್, ಸುಹಜಾನ್, ಸುಬಾನ ಖಾನ್ ಸೇರಿದಂತೆ ಇನ್ನಿತರರಿದ್ದರು.



ವರುಣ, ತಿ.ನರಸೀಪುರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿಗಳಾದ ಸಿದ್ದರಾಮಯ್ಯ ಹಾಗೂ ಹೆಚ್.ಸಿ.ಮಹದೇವಪ್ಪ ಪರ ಎಂಎಲ್‌ಸಿ ಡಾ.ತಿಮ್ಮಯ್ಯ ಪಟ್ಟಣದ 1ನೇ, 17ನೇ ವಾರ್ಡ್‌ನಲ್ಲಿ ಮತಯಾಚಿಸಿದರು. ಈ ವೇಳೆ ಜಿಲ್ಲಾ ಕಾರ್ಯದರ್ಶಿ ಮಹೇಶ್, ಕಾಂಗ್ರೆಸ್ ವಕ್ತಾರ ಬಸವಣ್ಣ, ನಿಂಗರಾಜು, ಶಿವಕುಮಾರ್ ಇತರರಿದ್ದರು.

ಅಧಿಕ ಮತಗಳಿಂದ ಸಾ.ರಾ.ಮಹೇಶ್ ಗೆಲ್ಲಿಸಲು ಮನವಿ



ಕೆ.ಆರ್.ನಗರ, ಮೇ 4– ಜಾತ್ಯಾತೀತ, ಪಕ್ಷಾತೀತವಾಗಿ ಜನಸೇವೆ ಮಾಡುತ್ತಿರುವ ಶಾಸಕ ಸಾ.ರಾ.ಮಹೇಶ್ ಅವರನ್ನು ಈ ಬಾರಿ ಅಧಿಕ ಮತಗಳಿಂದ ಗೆಲ್ಲಿಸುವಂತೆ ಪುರಸಭಾ ಸದಸ್ಯ ಸಂತೋಷ್ ಗೌಡ ಮತದಾರರಲ್ಲಿ ಮನವಿ ಮಾಡಿದರು.

ಜೆಡಿಎಸ್ ಕಾರ್ಯಕರ್ತರೊಂದಿಗೆ ಪಟ್ಟಣದ ಮನೆ ಮನೆಗೆ ಭೇಟಿ ನೀಡಿ ಶಾಸಕ ಸಾ.ರಾ.ಮಹೇಶ್‌ಗೆ ಮತ ನೀಡುವಂತೆ ಮನವಿ ಮಾಡಿ ಮಾತನಾಡಿದ ಅವರು, ನಗರೋತ್ಥಾನ ಯೋಜನೆಯಡಿ ಕೆ.ಆರ್.ನಗರಕ್ಕೆ 10 ಕೋಟಿಗೂ ಹೆಚ್ಚು ಅನುದಾನ ತಂದು ರಸ್ತೆ ಅಭಿವೃದ್ಧಿ ಮಾಡಿದ್ದಾರೆ. ತಾಯಿ ಮತ್ತು ಮಕ್ಕಳ ಆಸ್ಪತ್ರೆ ನಿರ್ಮಿಸಿ ವಿಶೇಷವಾಗಿ 4 ಕೋಟಿ ಅನುದಾನ ನೀಡಿ ಮೇಲಂತಸ್ತಿನ ಕಟ್ಟಡ ನಿರ್ಮಾಣಕ್ಕೆ ಶಂಕುಸ್ಥಾಪನೆ ಮಾಡಿದ್ದಾರೆ. ಆಸ್ಪತ್ರೆಗೆ ನುರಿತ ಮಹಿಳಾ ವೈದ್ಯರ ಸೇವೆಯಿಂದ ರಾಜ್ಯದಲ್ಲೇ ತಾಯಿ ಮತ್ತು ಮಕ್ಕಳ ಆಸ್ಪತ್ರೆ ಪ್ರಥಮ ಸ್ಥಾನದಲ್ಲಿದ್ದು, ಜಾತ್ಯಾತೀತವಾಗಿ ಶಾಸಕ ಸಾ.ರಾ.ಮಹೇಶ್ ಅವರನ್ನು ಹರಸಿ ಹಾರೈಸುತ್ತಿದ್ದಾರೆ ಎಂದರು.

ಶಾಸಕರಾಗಿ, ಮಂತ್ರಿಯಾಗಿ ಅವಳಿ ತಾಲೂಕಿನ ಜನರ ಮೂಲ ಸೌಕರ್ಯಗಳಿಗೆ ಆದ್ಯತೆ ನೀಡಿರುವ ಶಾಸಕ ಸಾ.ರಾ.ಮಹೇಶ್ ಅವರು 4ನೇ ಬಾರಿ ಆಯ್ಕೆಯಾಗುವುದು ಖಚಿತ ಎಂದರು. ಪ್ರಚಾರದಲ್ಲಿ ಯಜಮಾನ್ ಬೋರನಾಯಕ, ನಾರಾಯಣ್, ಸುನೀಲ್ ಮೊದಲಿಯರ್, ರಘು, ಚೆಲುವ, ಕಿಟ್ಟಿ, ವೆಂಕಟೇಶ್, ರಾಜು, ಪುತ್ತು, ಕುಮಾರಿ, ಮಿನಾಕ್ಷಿ, ಪವಿತ್ರ ಸೇರಿದಂತೆ ಇತರರಿದ್ದರು.

ಬಿಜೆಪಿ ಅಭ್ಯರ್ಥಿಗೆ ವೀರಶೈವ ಸಮಾಜ ಬೆಂಬಲ

ಹಿರಿಯ ವೀರಶೈವ ಮುಖಂಡ ಹಿರಿಯೂರು ಎಂ.ಪರಶಿವಮೂರ್ತಿ



ತಿ.ನರಸೀಪುರ, ಮೇ 4– ವೀರಶೈವ ಸಮಾಜ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಡಾ.ಎಂ.ರೇವಣ್ಣ ಪರ ಕೆಲಸ ಮಾಡುತ್ತಿದೆ ಎಂದು ಹಿರಿಯ ವೀರಶೈವ ಮುಖಂಡ ಹಿರಿಯೂರು ಎಂ.ಪರಶಿವಮೂರ್ತಿ ತಿಳಿಸಿದರು.

ಪಟ್ಟಣದ ಬಿಜೆಪಿ ಕಚೇರಿಯಲ್ಲಿ ತಾಲೂಕು ವೀರಶೈವ ಮಹಾಸಭಾ ಹಾಗೂ ವೀರಶೈವ ಯುವ ಘಟಕದ ಆಶ್ರಯದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ಡಾ.ಎಂ. ರೇವಣ್ಣ ಪರ ತಾಲೂಕು ವೀರಶೈವ ಸಮಾಜ ಕೆಲಸ ಮಾಡುತ್ತಿದ್ದು, ಅವರಿಗೆ ಸಂಪೂರ್ಣ ಬೆಂಬಲ ವ್ಯಕ್ತಪಡಿಸಿದೆ ಎಂದರು.

ಕಳೆದ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಮತ್ತು ಜೆಡಿಎಸ್ ಹೊಂದಾಣಿಕೆ ಮಾಡಿಕೊಂಡು ನಮ್ಮ ವಿರುದ್ಧ ಪ್ರಚಾರ ಮಾಡಿದರೂ ನಾವು ಸ್ವಾಭಿಮಾನಿ ನಾಯಕರಾದ ವಿ.ಶ್ರೀನಿವಾಸ ಪ್ರಸಾದ್ ಅವರನ್ನು ಅಭ್ಯರ್ಥಿ ಮಾಡಿ 59 ಸಾವಿರ ಮತ ನೀಡಿ ಅವರನ್ನು ಸಂಸದರಾಗಿ ಮಾಡಿದೆವು. ಹಾಗಾಗಿ ನಮ್ಮಲ್ಲಿ ಮತ ಬ್ಯಾಂಕ್ ಭದ್ರವಾಗಿರುವುದರಿಂದ ಎರಡೂ ಪಕ್ಷದವರು ವಿಚಲಿತರಾಗಿ ನಮ್ಮ ಪಕ್ಷದ ವಿರುದ್ಧ ಸಣ್ಣ ಪುಟ್ಟ ಗೊಂದಲ ಸೃಷ್ಟಿಸುವ ಕೆಲಸಕ್ಕೆ ಮುಂದಾಗಿದ್ದಾರೆ. ಅದಕ್ಕೆ ಕೆಲವು ಕೆಲಸಕ್ಕೆ ಬಾರದ ಹುಡುಗರನ್ನು ಬಳಸಿಕೊಂಡು ಕೆಲವೆಡೆ ಕಾಂಗ್ರೆಸ್, ಕೆಲವೆಡೆ ಜೆಡಿಎಸ್‌ನವರು ಅವರಿಗೆ ಮತ ಕೊಟ್ಟರೆ ಇವರು, ಇವರಿಗೆ ಮತ ಕೊಟ್ಟರೆ ಅವರು ಗೆಲ್ಲುತ್ತಾರೆ ಎಂಬ ಊಹಾತ್ಮಕ ಸುದ್ದಿಗಳನ್ನು ಹಬ್ಬಿಸುತ್ತಿದ್ದಾರೆ ಎಂದು ಆರೋಪಿಸಿದರು.

ಬಿಜೆಪಿ ಅಭ್ಯರ್ಥಿ ರೇವಣ್ಣ ಅವರಿಗೆ ವೀರಶೈವರು ಮತ ಹಾಕಿದರೆ ಮಹದೇವಪ್ಪ ಗೆಲ್ಲುತ್ತಾರೆ ಎಂದು ತಮ್ಮದೇ ವ್ಯಾಖ್ಯಾನ ಮಾಡುತ್ತಿದ್ದು, ಕ್ಷೇತ್ರದ ವೀರಶೈವರು ಯಾವುದೇ ಊಹಾಪೋಹಗಳಿಗೆ ಕಿವಿಗೊಡದೇ ಬಿಜೆಪಿ ಅಭ್ಯರ್ಥಿಗೆ ಮತ ಚಲಾಯಿಸುವಂತೆ ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಪುರಸಭಾ ಸದಸ್ಯ ಎಸ್.ಕೆ.ಕಿರಣ್, ಎನ್.ಲೋಕೇಶ್, ಕೊತ್ತೇಗಾಲ ಕಿಟ್ಟಿ, ಆಲಗೂಡು ಪಿಎಸಿಎಸ್ ಮಾಜಿ ಅಧ್ಯಕ್ಷ ತೊಂಟೇಶ್, ಹಿರಿಯ ಮುಖಂಡ ಎಸ್‌ಎಂಆರ್ ಪ್ರಕಾಶ್, ಜಿಲ್ಲಾ ಯುವ ಮೋರ್ಚಾ ಉಪಾಧ್ಯಕ್ಷ ಬೆನಕನಹಳ್ಳಿ ವಿಜಯಕುಮಾರ್, ಮುಖಂಡರಾದ ಬಸವರಾಜು, ಸಿದ್ದು, ಚೌಹಳ್ಳಿ ರಾಜೇಶ್, ಆಡಿಟರ್ ಮಂಜು, ಮಲ್ಲಪ್ಪ, ಮಂಜುನಾಥ್, ರಮೇಶ್ ಹಾಜರಿದ್ದರು.

ಹರ್ಷವರ್ಧನ್ ಗೆಲುವಿನೊಂದಿಗೆ ರಾಜಕೀಯದಿಂದ ನಿವೃತ್ತಿ

ಚುನಾವಣಾ ಪ್ರಚಾರ ಸಭೆಯಲ್ಲಿ ಸಂಸದ ವಿ.ಶ್ರೀನಿವಾಸಪ್ರಸಾದ್



ನಂಜನಗೂಡು, ಮೇ 4– ಇದು ನನ್ನ ಕೊನೆ ಚುನಾವಣೆಯಾಗಿದ್ದು, ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸಿರುವ ಬಿ.ಹರ್ಷವರ್ಧನ್ ಗೆಲುವಿನೊಂದಿಗೆ ರಾಜಕೀಯದಿಂದ ನಿವೃತ್ತಿಯಾಗುತ್ತೇನೆ ಎಂದು ಸಂಸದ ವಿ.ಶ್ರೀನಿವಾಸಪ್ರಸಾದ್ ತಿಳಿಸಿದರು.

ತಾಲೂಕಿನ ಕಳಲೆ ಗ್ರಾಮದಲ್ಲಿ ನಡೆದ ಕಳಲೆ, ಹೆಗ್ಗಡಹಳ್ಳಿ ಜಿಪಂ ವ್ಯಾಪ್ತಿಯ ಚುನಾವಣಾ ಪ್ರಚಾರ ಸಭೆಯಲ್ಲಿ ಮಾತನಾಡಿದ ಅವರು, ಕಳಲೆ ಕೇಶವಮೂರ್ತಿ ಶಾಸಕನಾಗಿ ಕ್ಷೇತ್ರದಲ್ಲಿ ಯಾವುದೇ ಅಭಿವೃದ್ಧಿ ಕೆಲಸ ಮಾಡಲಿಲ್ಲ. ಇದು ಕಾಂಗ್ರೆಸ್ ಪಕ್ಷದ ಮದ್ದೂರು ಶಟಲ್ ಬಸ್. ನಮ್ಮದು ಶಕ್ತಿಯುತ ಬಿಜೆಪಿ ಡಬಲ್ ಇಂಜಿನ್ ಸರ್ಕಾರ. ನಮ್ಮ ಸರ್ಕಾರದಲ್ಲಿ ದಶಕಗಳ ಸಮಸ್ಯೆಯಾಗಿದ್ದ ಪರಿವಾರ, ತಳವಾರ ಸಮಸ್ಯೆ ಬಗೆಹರಿಸಲಾಯಿತು. ಎಸ್ಟಿ ಮೀಸಲಾತಿಯನ್ನು ಶೇ.3 ರಿಂದ 7ಕ್ಕೆ ಏರಿಕೆ ಮಾಡಲಾಗಿದೆ. ಅಲ್ಲದೇ ನಾನು ವಾಲ್ಮೀಕಿ ಭವನಕ್ಕೆ ಜಾಗ ನೀಡಿದ್ದೇನೆ. ಕಳಲೆ ಗ್ರಾಮದ ಸಮುದಾಯ ಭವನ ಪೂರ್ಣಗೊಳಿಸಲು ಅನುದಾನ ಬಿಡುಗಡೆಗೊಳಿಸಿದ್ದೇನೆ. ಇನ್ನು ಶಾಸಕ ಹರ್ಷವರ್ಧನ್ ಕಳೆದ 5 ವರ್ಷಗಳಿಂದ ನಿರಂತರವಾಗಿ ಕ್ಷೇತ್ರದ ಜನರ ಸಂಪರ್ಕ ವಿಟ್ಟುಕೊಂಡು, ಸಮಸ್ಯೆಗಳನ್ನು ಆಲಿಸಿ ಅಭಿವೃದ್ಧಿ ಕೆಲಸಗಳನ್ನು ಮಾಡುವ ಮೂಲಕ ಸ್ಪಂದಿಸಿದ್ದಾರೆ. ಇನ್ನೂ ಹೆಚ್ಚಿನ ಅಭಿವೃದ್ಧಿಗಾಗಿ ಅವರಿಗೆ ಹೆಚ್ಚಿನ ಮತ ನೀಡಿ ಗೆಲ್ಲಿಸಿ ಶಕ್ತಿ ನೀಡಬೇಕು. ನಮ್ಮ ಮೇಲೆ ವಿಶ್ವಾಸವಿಟ್ಟು, ಅಭಿವೃದ್ಧಿ ಕೆಲಸಗಳಿಗೆ ಬೆಂಬಲಿಸುತ್ತೀರಿ ಎಂಬ ನಂಬಿಕೆಯಿದೆ ಎಂದರು.

ಸಿದ್ದರಾಮಯ್ಯ ಕಳೆದ ಲೋಕಸಭೆ ಚುನಾವಣೆಯಲ್ಲಿ ರಾಹುಲ್ ಗಾಂಧಿ ಪ್ರಧಾನಿಯಾಗುತ್ತಾರೆ ಎಂದು ಕಿರುಚಾಡುತ್ತಿದ್ದರು. ಆದರೆ ರಾಜ್ಯದಲ್ಲಿ ಕಾಂಗ್ರೆಸ್ 1 ಸ್ಥಾನ ಮಾತ್ರ ಗೆಲ್ಲಲು ಸಾಧ್ಯವಾಯಿತು. ಇದರಿಂದ ಅವರ ಕಿರುಚಾಟ ಅಡಗಿಹೋಗಿತ್ತು. ಈ ಚುನಾವಣೆಯಲ್ಲೂ ಸಹ ಅವರ ಕಿರುಚಾಟ ನಿಂತಿಲ್ಲ. ಅವರ ಕಿರುಚಾಟಕ್ಕೆ ಜನರು ಮತ ನೀಡುವುದಿಲ್ಲ ಎಂದ ಅವರು, ಕಾಂಗ್ರೆಸ್ ಪಕ್ಷದಲ್ಲಿ ಮುಖ್ಯಮಂತ್ರಿಯಾಗುತ್ತೇನೆಂದು ಹೇಳಿಕೊಳ್ಳುವವರ ಹೆಸರು ಕೇಳಿದರೆ ವಾಕರಿಕೆ ಬರುತ್ತದೆ. ಇಡಿಯಲ್ಲಿ ಕೇಸ್‌ನಲ್ಲಿ ಬೇಲ್ ಮೇಲೆ ಆಚೆ ಇರುವವರು ಮುಖ್ಯಮಂತ್ರಿಯಾಗಲು ಹೊರಟಿರುವುದು ಹಾಸ್ಯಾಸ್ಪದ ಎಂದು ವಾಗ್ದಾಳಿ ನಡೆಸಿದರು.

ಹರ್ಷವರ್ಧನ್ ಮಾತನಾಡಿ, ಕಾಂಗ್ರೆಸ್ ಪಕ್ಷದ ಪ್ರಣಾಳಿಕೆ ಕಾಮಿಡಿ ಶೋನಂತಾಗಿದೆ. ಅವರು ಕಳೆದ 75 ವರ್ಷಗಳಿಂದ ಬಡವರ ಪರವಾಗಿ ಯಾವುದೇ ಕಾರ್ಯಕ್ರಮ ರೂಪಿಸಲು ಸಾಧ್ಯವಾಗಲಿಲ್ಲ. ಆದರೆ ಬಿಜೆಪಿ ಸರ್ಕಾರ ಕಿಸಾನ್ ಸಮ್ಮಾನ್ ಮೂಲಕ ರೈತರ ಖಾತೆಗಳಿಗೆ ನೇರವಾಗಿ ಹಣ ಹಾಕುತ್ತಿದೆ. ಜಲಜೀವನ್ ಮಿಷನ್ ಯೋಜನೆಯಡಿ ಕುಡಿಯುವ ನೀರಿನ ಸೌಲಭ್ಯ ಒದಗಿಸಲಾಗಿದೆ. ದಶಕಗಳ ಕನಸಾಗಿದ್ದ ನುಗು ಏತ ನಿರಾವರಿ ಯೋಜನೆ ಜಾರಿಗೊಳಿಸಿದ್ದೇನೆ. ಬೆಳ್ಳಿ ರಥ ಕಾಮಗಾರಿ ಪೂರ್ಣಗೊಳಿಸಲಾಗಿದೆ. ಗೌರಿಘಟ್ಟದ ನಾಯಕ ಭವನ ಪೂರ್ಣಗೊಳಿಸಿದ್ದೇನೆ. ವಾಲ್ಮೀಕಿ ಭವನಕ್ಕೂ ನಮ್ಮ ಸರ್ಕಾರದ ಅವಧಿಯಲ್ಲೇ ಅನುದಾನ ಬಿಡುಗಡೆಯಾಗಿರುವುದು. ಕ್ಷೇತ್ರದಲ್ಲಿ ನನ್ನ ಅಭಿವೃದ್ಧಿ ಕೆಲಸಗಳ ಮೇಲೆ ನಂಬಿಕೆಯಿಟ್ಟು ಮತ್ತೊಂದು ಅವಧಿಗೆ ಗೆಲ್ಲಿಸಬೇಕು ಎಂದರು.

ಈ ವೇಳೆ ಬಿಜೆಪಿ ರಾಜ್ಯ ಮುಖಂಡರಾದ ಸುಬ್ಬಣ್ಣ, ಜಿಪಂ ಮಾಜಿ ಸದಸ್ಯರಾದ ಸಿ.ಚಿಕ್ಕರಂಗನಾಯಕ, ಎಸ್.ಎಂ.ಕೆಂಪಣ್ಣ, ತಾಲೂಕು ಬಿಜೆಪಿ ಅಧ್ಯಕ್ಷ ಪಿ.ಮಹೇಶ್, ತಾಪಂ ಮಾಜಿ ಅಧ್ಯಕ್ಷ ಬಿ.ಎಸ್.ಮಹದೇವಪ್ಪ, ಮಾಜಿ ಸದಸ್ಯರಾದ ಬಸವರಾಜು, ಬಿ.ಎಸ್.ರಾಮು, ಕೆ.ಡಿ.ಮಂಜು, ಮುಖಂಡರಾದ ಪರಶಿವಮೂರ್ತಿ, ಪ್ರಕಾಶ್, ರಾಜು, ಮಹದೇವಸ್ವಾಮಿ ಇದ್ದರು.

ಮಹೇಶ್ ನಿಧನ



ಹುಣಸೂರು, ಮೇ 4– ತಾಲೂಕಿನ ಕಚುವಿನಹಳ್ಳಿ ಗ್ರಾಮದ ನಿವಾಸಿ ಮಹೇಶ್(36) ಬುಧವಾರ ರಾತ್ರಿ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರಿ, ಪುತ್ರ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ.

ಅಂತ್ಯಕ್ರಿಯೆ ಗುರುವಾರ ಸಂಜೆ ಗ್ರಾಮದ ಜಮೀನಿನಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

40ನೇ ವರ್ಷದ
ವಿವಾಹ ವಾರ್ಷಿಕೋತ್ಸವದ ಶುಭಾಶಯಗಳು



ಶ್ರೀಮತಿ ಸರೋಜ ಮತ್ತು ನಾಗರಾಜ್ ಆರ್

ಶುಭಕೋರುವವರು :
ರಾಚೇಗೌಡರ ಕುಟುಂಬವರ್ಗ, ಮಕ್ಕಳು, ಮೊಮ್ಮಕ್ಕಳು
ದಿಲೀಪ್ ಎನ್ W/o ಪ್ರಭಾ, ಆರ್ಯನ್ ಡಿ ಗೌಡ, ಪ್ರಕುಲ್ ಡಿ ಗೌಡ
ಅರ್ಚನ W/o ಪುನೀತ್ ಎನ್, ಅನ್ವಿತ ಪಿ ಗೌಡ, ಜನನ್ಯ ಪಿ ಗೌಡ

ಕೆಲಸಗಾರರು ಬೇಕಾಗಿದ್ದಾರೆ
ಹುಡುಗರು, ಹುಡುಗಿಯರು
ವಿದ್ಯಾರ್ಥಿಗಳೂ ಸಹ ಸಂಪರ್ಕಿಸಬಹುದು
ಸ್ಥಳ: ಕುವೆಂಪುನಗರ
9880929574

ಗ್ಯಾಸ್ ಪೈಪ್ ಲೈನಿಂಗ್
ಮನೆ/ಹೋಟೆಲ್‌ಗಳಿಗೆ ಗ್ಯಾಸ್‌ಪೈಪ್ ಲೈನಿಂಗ್ ಮಾಡುತ್ತೇವೆ.
ಎಲ್ಲಾ ಕಂಪನಿಯ ಸ್ಟೌವ್+ಗ್ಯಾಸ್ ಗೀಜರ್+ಹಬ್‌ಸ್ಟೌವ್+ ಚಿಮಿನಿ ಸರ್ವಿಸ್ ಲಭ್ಯ



8088888115
22 ವರ್ಷದ ಅನುಭವ



ಎನ್.ರಾಜ್ ಕುಮಾರ್ ರವರಿಗೆ
53ನೇ ವರ್ಷದ ಹುಟ್ಟುಹಬ್ಬದ ಶುಭಾಶಯಗಳು
ಶುಭಕೋರುವವರು:
ಪತ್ನಿ ಪುಷ್ಪರಾಜ್, ಮಗಳು ದೀಕ್ಷಾರಾಜ್, ಮಗ ಕೀರ್ತಿರಾಜ್, ಎಲ್. ಹರೀಶ್

WANTED

Emmanuel Christian Public School(ECPS) is a reputed english medium school located in Chamaraja Nagar, invites applications from qualified and passionate teachers to teach at the kindergarten and primary section of ECPS.

If you are a person willing to commit yourself to the grooming of children towards holistic development, engage in creative teaching, demonstrate fluency in the English language and communication skills and are competent to teach all subjects, then, you are the candidate the institution is looking for.

Note: ESI and PF are part of the salary package.

Email your resume to: ecps.chamarajanagar@gamil.com
Or reach us on +91 9620456222
(Monday to Friday- 9:00 am to 4:00 pm)

FOR SALE

GERMAN SHEPHERD
QUALITY MALE PUPPIES
Call: 9036807371

WANTED

1) PUC/Any Degree with D.Ed/B.Ed English Teacher for Primary classes.
2) B.A/M.A, B.Ed Hindi Teacher for High School classes

Apply within 5 days.
Address: Sri Gnaneshwari Vidyasamsthe, P-1, 8th Main, Hebbal 1st Stage, Mysore 570016
Phone: 0821-2302072
srig
naneshwari.vidyasamsthe@gmail.com

II PU SUPPL

For Excellent Coaching in
P \ C \ M \ B
Since 33 Years
Contact Immediately
VINAY KUMAR
58/1, 16 cross, Ramanuja road, MYSURU - 04
Cell: 9845558109 / 9901284567

WANTED BSC AGRICULTURE

Candidates are invited in the field work of agriculture around Chamarajanagar

Suitable candidate with Job highlights
Qualification : BSc Agriculture
Must have key skills in Agriculture, pesticides, fertilizer, yield management

Facilities available : Boarding and Lodging
Contact No. 8197908288

MUDA SITES FOR SALE

READY FOR REGISTRATION
1). 20/30,30/40,30/50 on T.Narasipura Road, Chikkalli, Mysore
2). 30/40,30/50 Near St. Joseph School, Hunsur Road, Mysore
Only few Sites Available
Call:- 84319 42190

ರತ್ನ ಪ್ಯಾರಾ ಮೆಡಿಕಲ್ ಕಾಲೇಜ್
ನ್ಯೂ ಸಯ್ಯಾಜಿ ರಾವ್ ರಸ್ತೆ, ಕೆ.ಆರ್. ಆಸ್ಪತ್ರೆ ಹತ್ತಿರ, ಮೈಸೂರು
ಪ್ರವೇಶ ತೆರೆದಿದೆ
ಡಿಪ್ಲೋಮಾ ಇನ್ ಮೆಡಿಕಲ್ ಲ್ಯಾಬ್ ಟೆಕ್ನಾಲಜಿ (DMLT)
SSLC / PUC Pass / Fail
ಬ್ಯಾಚುಲರ್ಸ್ ಇನ್ ಮೆಡಿಕಲ್ ಲ್ಯಾಬ್ ಟೆಕ್ನಾಲಜಿ (B.Voc)
9886654463 / 9632467311

HOUSE FOR RENT

2 BHK, 1st Floor, 30x50
Vidyaranyapuram.
Rent: Rs. 13,000 per month.
9620267091, 7337888679

REQUIRED

Accountants -2 Posts
Sr. Accountant
to Work at K.R. Nagar
with 2-3 years experience
Jr. Accountant/ Office Staff
to work at Mysore
with 1 year experience
Tally ERP Knowledge is a must
Send your CV to:
santhoshsst15@gmail.com

HOUSE FOR SALE


2500 Sq.ft House Built on 40x60 Site in Vijayanagar Fourth Stage, First Phase
Price Rs.2.10 Cr
Brokers Kindly Excuse
Only Serious Buyers Please
Contact:- 98800 63699

FOR RENT/LEASE

3 BHK ready to move duplex Villa near Infosys, Hebbal

FOR RENT
2 BHK Flat on Lalitha Mahal Road with Car Parking.
Rs.23000/- with maintenance
Contact:- 9844332636

2ನೇ ವಾರ
ಯಶಸ್ವಿ ಪ್ರದರ್ಶನ
ಗಾಯತ್ರಿ ಟಾಕೀಸ್ UFO
ಚಿತ್ರಮಂದಿರದಲ್ಲಿ ಮಾತ್ರ
ಪಿಎಸ್–2
(ತಮಿಳು)
ದಿನ 4 ಆಟಗಳು
10.30 1.30
4.30 7.30



ಭಾವಪೂರ್ಣ ಶ್ರದ್ಧಾಂಜಲಿ



ಶ್ರೀಮತಿ ಟಿ.ಶಾಂತ
(W/o ಲೇಟ್ ಎ.ಎಸ್.ಶ್ರೀನಿವಾಸನ್)
ವಾಣಿಜ್ಯ ತೆರಿಗೆ ಇಲಾಖೆ
ದುಃಖತಪ್ತರು: ಮಕ್ಕಳು, ಭುವನ ಎಸ್, ವಿನೋದ್ ಎಸ್.
ಮೊ: 9035276824, 7353508304

2ನೇ ವರ್ಷದ ಪುಣ್ಯಸ್ಮರಣೆ



ಯಾ॥ಶ್ರೀ.ಚಿಕ್ಕಣ್ಣನವರು
(ಚಿಕ್ಕೇಗೌಡರು)
05.05.2021

ದುಃಖತಪ್ತರು:
ಸುನಂದ, ಸುರೇಶ್.ಸಿ, ಸಿಂಧು.ಆರ್, ಸುಚಿತ್ರ.ಸಿ, ಬಸವರಾಜು.ಪಿ, ಪರೀಕ್ಷಿತ್.ಎಸ್.ಗೌಡ, ಜೀವಿತ್.ಎಸ್. ಗೌಡ, ಯಶ್ವಂತ್, ಪ್ರೀತಮ್ ಹಾಗೂ ಅಣ್ಣಯಪ್ಪ ಕುಟುಂಬವರ್ಗದವರು
ಯರಗನಹಳ್ಳಿ ಗ್ರಾಮಸ್ಥರು

ಹಸಿರು ನಮ್ಮ ಉಸಿರು

ವಿಚಾರಣಾ ತಿಳುವಳಿಕೆ

ಶ್ರೀ ಮಹದೇವು Emp No. 120040

ಆದಾಗಿ, ತಮ್ಮ ವಿರುದ್ಧ **ITC Limited, Agri Business Division, Thandya Industrial Area, Nanjangud** ಆಡಳಿತ ವರ್ಗವು ಆರೋಪಣಾ ಪಟ್ಟಿ ಹಾಗೂ ವಿಚಾರಣಾ ತಿಳುವಳಿಕೆ ದಿನಾಂಕ 20.01.2023 ರ ಅನುಸಾರ ಹೊರಿಸಿದ ದೋಷಾರೋಪಗಳ ಬಗ್ಗೆ ಆಂತರಿಕ ವಿಚಾರಣೆ ನಡೆಸುವಂತೆ ಈ ಕೆಳಗೆ ಸಹಿ ಮಾಡಿರುವವರಿಗೆ ಆದೇಶಿಸಿದ್ದು.

ಮತ್ತು ಸದರೀ ವಿಚಾರಣೆಯಲ್ಲಿ ನೀವು ಕೆಲ ದಿನ ಭಾಗವಹಿಸಿ ನಂತರ ದಿ: 30.03.2023, 08.04.2023 ಹಾಗೂ 17.04.2023 ರಂದು ಯಾವುದೇ ಸಂದೇಶ ನೀಡದೇ ಗೈರು ಹಾಜರಾಗಿರುತ್ತೀರಿ.

ದಿ. 20.04.2023 ರಂದು ಮತ್ತೊಮ್ಮೆ ತಿಳುವಳಿಕೆ ನೋಟೀಸ್ ರಿಜಿಸ್ಟರ್ ಪೋಸ್ಟ್ ಮುಖಾಂತರ ಕಳುಹಿಸ–ಲಾಗಿ, ಅದು ನೀವು ಮನೆಯಲ್ಲಿ ಹಾಜರಿರಲಿಲ್ಲ ಎಂದು ವಾಪಾಸ್ಸಾಗಿರುತ್ತದೆ.

ಆದರೂ ಕೂಡ ನಿಮಗೆ ಸದರಿ ವಿಚಾರಣೆಯಲ್ಲಿ ಖುದ್ದು ಭಾಗವಹಿಸಿ ನಿಮ್ಮ ಮೇಲಿನ ಆರೋಪಗಳಿಂದ ರಕ್ಷಿಸಿ ಕೊಳ್ಳಲು ಒಂದು ಅಂತಿಮ ಅವಕಾಶ ಕಲ್ಪಿಸಿ ಕೊಡುವ ಉದ್ದೇಶದಿಂದ ವಿಚಾರಣೆಯನ್ನು ದಿ: 08.05.2023ರ ಬೆಳಿಗ್ಗೆ 11.30 ಕ್ಕೆ ಸಂಸ್ಥೆಯ ಆವರಣದಲ್ಲಿ ನಡೆಸಲು ತೀರ್ಮಾನಿಸಿದೆ. ಸದರಿ ದಿನಾಂಕ ಹಾಗೂ ಸಮಯಕ್ಕೆ ನೀವು ಹಾಜರಾಗದಿದಲ್ಲಿ ನಿಮ್ಮ ಗೈರು ಹಾಜರಿಯಲ್ಲಿ ವಿಚಾರಣೆಯನ್ನು ಮುಂದುವರೆಸಿ ಮುಕ್ತಾಯಗೊಳಿಸ–ಲಾಗುವುದು ಎಂದು ತಿಳಿಯತಕ್ಕದ್ದು.

ಬಿ.ಜಿ.ಪ್ರಸಾದ್
ವಿಚಾರಣಾಧಿಕಾರಿ

ದಿವ್ಯಜ್ಯೋತಿ ಜ್ಯೋತಿಷ್ಯ ಮಹಾವಿದ್ಯಾಲಯ (ರಿ)

ಮೈಸೂರು ಶಾಖೆ – ಬೆಂಗಳೂರು ಕೇಂದ್ರ
(ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾನಿಲಯ ಬೆಂಗಳೂರು ಇವರಿಂದ ಮಾನ್ಯತೆ ಪಡೆದ ವಿದ್ಯಾ ಸಂಸ್ಥೆ)

ಜ್ಯೋತಿಷ್ಯ ಅಧ್ಯಯನದ ವಿಷಯಗಳು
(ಸಂಸ್ಥೆಯ ಸರ್ಟಿಫಿಕೇಟ್ ಕೋರ್ಸ್‌ಗಳು)
1. ಜ್ಯೋತಿಷ್ಯ ರತ್ನ – ಮೊದಲನೇ 6 ತಿಂಗಳು
2. ಜ್ಯೋತಿಷ್ಯ ವಿಶಾರದ – ಎರಡನೇ 6 ತಿಂಗಳು
3. ಜ್ಯೋತಿಷ್ಯ ವಿದ್ಯಾಭೂಷಣ – ಮೂರನೇ 6 ತಿಂಗಳು

ತರಗತಿಗಳು ಪ್ರತಿ ಭಾನುವಾರ 10 ರಿಂದ 12 ರವರೆಗೆ ನಡೆಯುತ್ತವೆ.
ಮೇ ತಿಂಗಳಿನಿಂದ ತರಗತಿಗಳು ಪ್ರಾರಂಭವಾಗುತ್ತವೆ.

ಆಸಕ್ತರು ಸಂಪರ್ಕಿಸಿ – ಡಾ. ಜಿ. ವೆಂಕಟೇಶ್
9739140474, 6361900429
ವಿಜಯ ಪ್ರಕಾಶ್ : 9663906666

ಸ್ಥಳ : ಗೋಪಾಲಸ್ವಾಮಿ ಶಿಶುವಿಹಾರ ಮತ್ತು ಪ್ರಿ ಯೂನಿವರ್ಸಿಟಿ ಇಂಡಿಪೆಂಡೆಂಟ್ ಕಾಲೇಜು, ನ್ಯೂ ನಂಜುಮಳಿಗೆ, ಲಕ್ಷ್ಮೀಪುರಂ, ಮೈಸೂರು.

STAFF REQUIREMENT

FOR A REPUTED COMPANY IN MYSORE

Sales Co Ordinator
Responsible in handling sales , coordination and customer interaction

Purchase Executive
Responsible in handling complete purchase activities independently.

Accounts Manager
Responsible for handling the company's accounts.

Accounts Assistant
Qualification- Commerce graduate with tally experience needed

Minimum of 8 to 10 years of experience in related field.
Interested candidates can send their resume to below ID

Email
jeevan_joy2000@yahoo.com
✆ 96068 01798
94480 37737

ಮೈಸೂರು ಮತ್ತು ಚಾಮರಾಜ ನಗರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿ.,

ನೆಹರು ವೃತ್ತ, ಅಶೋಕ ರಸ್ತೆ, ಮೈಸೂರು – 570001
ದೂರವಾಣಿ : 2520836, 2436460, 2421047 ಫ್ಯಾಕ್ಸ್ ನಂ: 0821–2520836

ಪತ್ರಿಕಾ ಪ್ರಕಟಣೆ

ದಿನಾಂಕ 27–04–2023 ಗುರುವಾರ ದಂದು ಪ್ರಜಾನುಡಿ ಪತ್ರಿಕೆಯಲ್ಲಿ " ಅಕ್ರಮವಾಗಿ ಸಾಗಿಸುತ್ತಿದ್ದ 2 ಕೋಟಿ ರೂ.ಪತ್ತೆ" ಎಂಬ ಮುಖ್ಯಾಂಶದಡಿಯಲ್ಲಿ ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ (ಎಂ.ಸಿ.ಡಿ.ಸಿ.ಸಿ)ನ ಜೀಪಿನಲ್ಲಿ ಅಕ್ರಮವಾಗಿ ಗೋಣಿ ಚೀಲದಲ್ಲಿ ಸಾಗಿಸುತ್ತಿದ್ದ 2 ಕೋಟಿ ರೂ.ಗಳನ್ನು ಪೊಲೀಸರು ಬುಧವಾರ ಸಂಜೆ ವಶಪಡಿಸಿಕೊಂಡಿದ್ದಾರೆ. ಈ ಸಂಬಂಧ ಇಬ್ಬರನ್ನು ವಶಕ್ಕೆ ಪಡೆದಿರುವ ಪೊಲೀಸರು ತನಿಖೆ ಕೈಗೊಂಡಿದ್ದಾರೆ. ವಾಹನ ಡಿಸಿಸಿ ಬ್ಯಾಂಕ್‌ಗೆ ಸೇರಿದ್ದಾಗಿರುತ್ತದೆ ಎಂದೆಲ್ಲಾ ಸುದ್ದಿಯನ್ನು ಪ್ರಕಟ ಮಾಡಿರುತ್ತಾರೆ.

ಕರ್ನಾಟಕ ವಿಧಾನ ಸಭಾ ಸಾರ್ವತ್ರಿಕ ಚುನಾವಣೆ 2023ರ ನೀತಿ ಸಂಹಿತೆಯು ಮಾರ್ಚ್ 29ನೇ ತಾರೀಖು ಜಾರಿಯಾದಾಗಿನಿಂದ ಬ್ಯಾಂಕಿನ ಯಾವುದೇ ಹಣವನ್ನು ಚುನಾವಣಾಧಿಕಾರಿಗಳು ವಶಪಡಿಸಿಕೊಂಡಿರುವುದಿಲ್ಲ. ಆದ್ದರಿಂದ ಪತ್ರಿಕೆಯಲ್ಲಿ ಪ್ರಕಟಿಸಿರುವ ಸುದ್ದಿಯು ಸುಳ್ಳು ಸುದ್ದಿಯಾಗಿರುತ್ತದೆ ಎಂದು ಪತ್ರಿಕಾ ಪ್ರಕಟಣೆಯ ಮೂಲಕ ಬ್ಯಾಂಕಿನ ಎಲ್ಲಾ ಗ್ರಾಹಕರಿಗೆ ಮಾಹಿತಿಯನ್ನು ನೀಡಲಾಗಿದೆ.

ಸಹಿ/– ಮುಖ್ಯ ಕಾರ್ಯನಿರ್ವಹಣಾಧಿಕಾರಿ

ಬಿಜೆಪಿ ಕರ್ನಾಟಕ

ಸಮೃದ್ಧ ಕರ್ನಾಟಕಕ್ಕೆ ಬಿಜೆಪಿಯೇ ಭರವಸೆ



ಡಬಲ್ ಎಂಜಿನ್ ಸರ್ಕಾರ

ಕರ್ನಾಟಕದ ಅಭಿವೃದ್ಧಿಯ ಸಾಕಾರ



ಜನಪ್ರಿಯ ಮುಖ್ಯ ಮಂತ್ರಿ
ಮಾನ್ಯ **ಬಸವರಾಜ ಬೊಮ್ಮಾಯಿ** ರವರಿಗೆ
ವರುಣ ಕ್ಷೇತ್ರಕ್ಕೆ **ಸ್ವಾಗತ**

ವರುಣ ವಿಧಾನ ಸಭಾ ಕ್ಷೇತ್ರದ ಅಭ್ಯರ್ಥಿ ವಿ. ಸೋಮಣ್ಣನವರ ಪರವಾಗಿ
"ಬೃಹತ್ ರೋಡ್ ಶೋ"

ತಿ. ನರಸೀಪುರ ಟೌನ್ ಗುಂಜಾನರಸಿಂಹ ಸ್ವಾಮಿ ದೇವಸ್ಥಾನ ದಿಂದ
ಹೆಳವರಹುಂಡಿ ಗ್ರಾಮದ ವರೆಗೆ

ಸಮಯ- ಬೆಳಿಗ್ಗೆ 10 .30 ಕ್ಕೆ
ದಿನಾಂಕ - 05.05.2023, ಶುಕ್ರವಾರ

ಬನ್ನಿ ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಸೇರೋಣ... ಕಾರ್ಯಕ್ರಮ ಯಶಸ್ವಿಗೊಳಿಸೋಣ....

ಪ್ರಕಟಣೆ :
ಬಿಜೆಪಿ - ಮೈಸೂರು ಜಿಲ್ಲೆ